**Bayly, C. A. “Introduction”. The Birth of the Modern World, 1780-1914.**
**“ಪ್ರಸ್ತಾವನೆ”. ಆಧುನಿಕ ಜಗತ್ತಿನ ಉಗಮ, ೧೭೮೦-೧೯೧೪. ಬೇಯ್ಲಿ, ಸಿ. ಎ.**

## ಪ್ರಸ್ತಾವನೆ

ಈ ಕೃತಿಯು ಕ್ರಾಂತಿಯುಗದ ಪ್ರಾರಂಭವೆನಿಸಿದ ೧೭೮೦ರಿಂದ ಮೊದಲನೆಯ ಮಹಾಯುದ್ಧವು ಬಿರುಸಾಗಿ ಆರಂಭಗೊಂಡ ೧೯೧೪ರವರೆಗಿನ ವಿಷಯಾಧಾರಿತ (thematic) ಇತಿಹಾಸಕ್ಕೆ ಸಂಬಂಧಪಟ್ಟಿದೆ. ಮೊದಲನೆಯ ಮಹಾಯುದ್ಧವು ಅಂದಿನ ಸಮಕಾಲಿಕ (contemporary) ಸರಕಾರ ಮತ್ತು ಸಾಮ್ರಾಜ್ಯ ವ್ಯವಸ್ಥೆಗಳಿಗೆ ಬಲವಾದ ಪೆಟ್ಟನ್ನು ಕೊಟ್ಟಂತಹ ವಿದ್ಯಮಾನವಾಗಿತ್ತು. ಪ್ರಾಂತೀಯ ಮತ್ತು ರಾಷ್ಟ್ರೀಯ ಚರಿತ್ರೆಗಳಲ್ಲಿ ಪ್ರತ್ಯೇಕವಾಗಿ ಪರಿಗಣಿಸಲ್ಪಡುವ ಐತಿಹಾಸಿಕ ಪ್ರವೃತ್ತಿಗಳು ಹಾಗೂ ಅನುಕ್ರಮ ಘಟನೆಗಳನ್ನು ಹೇಗೆ ಒಟ್ಟುಗೂಡಿಸಬಹುದೆಂಬುದನ್ನು ಈ ಕೃತಿಯು ತಿಳಿಯಪಡಿಸುತ್ತದೆ. ಇಂದು "ಜಾಗತೀಕರಣವೆಂದು" ಕರೆಯಲ್ಪಡುವ ಪ್ರಕ್ರಿಯೆಯ ಆರಂಭವನ್ನು ೧೯೪೫ರ ಸಾಕಷ್ಟು ಮೊದಲೇ, ಪ್ರಪಂಚದಾದ್ಯಂತದ ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳ ನಡುವಿನ ಪರಸ್ಪರ ಸಂಬಂಧ ಹಾಗೂ ಅವಲಂಬನೆಯಲ್ಲಿ ಕಾಣಬಹುದೆಂದು ಇದು ತಿಳಿಸುತ್ತದೆ. ಒಂದೆಡೆ, ೧೭೮೯ ಅಥವ ೧೮೪೮ರ ಯೂರೋಪಿನ ಕ್ರಾಂತಿಯಂತಹ ಜಗತ್ತಿನ ನಿರ್ಣಾಯಕ ಸಂಗತಿಗಳ ಪ್ರತಿಧ್ವನನಗಳು (reverberations), ಬಾಹ್ಯ ಜಗತ್ತಿಗೆ ಪ್ರಸರಿಸಲ್ಪಟ್ಟಿತಲ್ಲದೆ, ಜಗತ್ತಿನ ಇತರೆ ಸಮಾಜಗಳಲ್ಲಿ ಉದ್ಭವಿಸುತ್ತಿರುವ ವಿಪ್ಲವಗಳೊಡನೆ ಅವು ಸಮ್ಮಿಳನಗೊಂಡವು. ಮತ್ತೊಂದೆಡೆ, ಜಗತ್ತಿನ ಕೈಗಾರಿಕಾ ಅರ್ಥವ್ಯವಸ್ಥೆಯ “ಜೀವಾಳವೆಂಬಂತೆ” (core) ಆವಿರ್ಭವಿಸುತ್ತಿದ್ದ ಯೂರೋಪ್ ಹಾಗೂ ಅಮೆರಿಕ ದೇಶಗಳ ಹೊರಗಿನ ವಿದ್ಯಮಾನಗಳು; ಅಂದರೆ, ಚೀನಾ ಮತ್ತು ಭಾರತದಲ್ಲಿ ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ನಡೆದ ದಂಗೆಗಳು, ಅರ್ಥವ್ಯವಸ್ಥೆಯ ಜೀವಾಳವೆನಿಸಿದ್ದ ಆ ದೇಶಗಳ ಸಿದ್ಧಾಂತಗಳನ್ನು ಹಾಗೂ ಹೊಸ ಸಾಮಾಜಿಕ ಹಾಗೂ ರಾಜಕೀಯ ಘರ್ಷಣೆಗಳನ್ನು ರೂಪಿಸುವ ನಿಟ್ಟಿನಲ್ಲಿ, ಅವುಗಳನ್ನು ಪ್ರಭಾವಿಸಿದವು. ಜಗತ್ತಿನ ವಿದ್ಯಮಾನಗಳ ಪರಸ್ಪರ ಸಂಬಂಧ ಹಾಗೂ ಅವಲಂಬನೆಗಳು ಹೆಚ್ಚಾಗತೊಡಗಿದಂತೆ, ಮಾನವನ ಕಾರ್ಯವಿಧಾನದ ಸ್ವರೂಪಗಳು ಪರಸ್ಪರ ಸಮನ್ವಯಗೊಂಡು, ಜಗತ್ತಿನಾದ್ಯಂತ ಅವುಗಳ ನಡುವೆ ಪರಸ್ಪರ ಸಾದೃಶ್ಯವನ್ನು ಕಾಣಬಹುದಾಗಿದೆ. ಆದ್ದರಿಂದ ಈ ಕೃತಿಯು, ಹತ್ತೊಂಭತ್ತನೆಯ ಶತಮಾನದುದ್ದಕ್ಕೂ ಸರಕಾರ, ಧರ್ಮ, ರಾಜಕೀಯ ಸಿದ್ಧಾಂತಗಳು, ಮತ್ತು ಆರ್ಥಿಕ ಬದುಕಿನಲ್ಲಿ ಹೊಮ್ಮಿದ ಜಾಗತಿಕ ಏಕರೂಪತೆಗಳನ್ನು (uniformity) ಗುರುತಿಸುತ್ತದೆ. ಈ ಏಕರೂಪತೆಯ ಬೆಳವಣಿಗೆಯು, ಬೃಹತ್ ಸಂಸ್ಥೆಗಳಾದ ಚರ್ಚುಗಳು, ಅರಸೊತ್ತಿಗೆಯ ಆಸ್ಥಾನಗಳು, ಅಥವ ನ್ಯಾಯವ್ಯವಸ್ಥೆಯಲ್ಲಿ ಮಾತ್ರವೇ ಕಾಣಿಸಿಕೊಂಡದ್ದಲ್ಲ. ಈ ಕೃತಿಯಲ್ಲಿ “ನಡವಳಿಕೆಗಳು” ಎಂಬುದಾಗಿ ಕರೆಯಲ್ಪಟ್ಟಿರುವ: ಜನರ ವೇಷಭೂಷಣಗಳು, ಸಂಭಾಷಣೆ, ತಿನಿಸು ಹಾಗೂ ಕುಟುಂಬಗಳಲ್ಲಿನ ಸಂಬಂಧಗಳ ನಿರ್ವಹಣಾ ವಿಧಾನಗಳಲ್ಲಿಯೂ ಅದು ಪ್ರಕಟಗೊಂಡಿತು.

ಹೀಗೆ ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ವಿವಿಧ ಮನುಷ್ಯ ಸಮಾಜಗಳ ನಡುವೆ ತೀವ್ರವಾಗಿ ಬೆಳೆಯುತ್ತಿದ್ದ ಈ ಸಂಪರ್ಕಗಳು ಹಲವಾರು ಬೆರಕೆ ರಾಜ್ಯವ್ಯವಸ್ಥೆಗಳನ್ನು (polity), ಮಿಶ್ರ ಸಿದ್ಧಾಂತಗಳನ್ನು ಮತ್ತು ಜಾಗತಿಕ ಆರ್ಥಿಕ ಚಟುವಟಿಕೆಗಳ ಸಂಕೀರ್ಣ ಪ್ರಕಾರಗಳನ್ನು ಹುಟ್ಟುಹಾಕಿತು. ಆದಾಗ್ಯೂ, ಅದೇ ಸಮಯಕ್ಕೆ ಅದು ಭಿನ್ನತೆಯ ಪ್ರಜ್ಞೆಯನ್ನೂ ಹೆಚ್ಚಿಸಿತು. ಅಷ್ಟೇ ಅಲ್ಲದೆ, ಬೇರೆ ಬೇರೆ ಸಮಾಜಗಳಲ್ಲಿನ ಜನರ ನಡುವೆ, ವಿಶೇಷವಾಗಿ ಅವರಲ್ಲಿನ ಮೇಲುಸ್ತರದವರ ನಡುವೆ ವಿರೋಧಕ್ಕೆ ಹಾದಿಮಾಡಿಕೊಟ್ಟಿತು. ಹೊಸ ಅರ್ಥವ್ಯವಸ್ಥೆಯಿಂದ ಅದರಲ್ಲೂ ವಿಶೇಷವಾಗಿ ಯುರೋಪಿಯನ್ ಸಾಮ್ರಾಜ್ಯಶಾಹಿಯಿಂದ ಉದ್ಭವಿಸಿದ ತೀವ್ರ ಸವಾಲುಗಳನ್ನು ಎದುರಿಸುವಲ್ಲಿ, ಉದಾಹರಣೆಗೆ ಜಪಾನೀಯರು, ಭಾರತೀಯರು, ಮತ್ತು ಅಮೆರಿಕನ್ನರು ತಮ್ಮದೇ ಆದ ರಾಷ್ಟ್ರೀಯ, ಧಾರ್ಮಿಕ ಅಥವ ಸಾಂಸ್ಕೃತಿಕ ಅನನ್ಯತೆಗಳ ಪಾರಂಪರಿಕ ಪ್ರಜ್ಞೆಯಲ್ಲಿನ ಸಾಮರ್ಥ್ಯವನ್ನು ಕಂಡುಕೊಂಡರು. ಸಮಾಜಶಾಸ್ತ್ರ ಸಿದ್ಧಾಂತಕಾರ ಅರ್ಜುನ ಅಪ್ಪಾದುರೈ

ಅವರ ಮಾತುಗಳಲ್ಲಿ ಹೇಳುವುದಾದರೆ, ಈ ಜಾಗತಿಕ ಮತ್ತು ಸ್ಥಳೀಯ ಶಕ್ತಿಗಳು ಪರಸ್ಪರ 'ಸಜಾತಿಭಕ್ಷಣೆಯಲ್ಲಿ' (cannibalism) ತೊಡಗಿದ್ದರೆಂಬ ಅಸಂಗತೋಕ್ತಿಯು (paradox) ಇಂದಿನ ಮಾನವಿಕ ವಿಜ್ಞಾನಗಳಲ್ಲಿ ಸುಪರಿಚಿತವಾಗಿದೆ. ಆದರೆ ಈ ಜಾಗತಿಕ ಮತ್ತು ಸ್ಥಳೀಯ, ಅಥವಾ ಸಾಮಾನ್ಯ ಮತ್ತು ವಿನಿರ್ದಿಷ್ಟಗಳ (specific) ನಡುವಿನ ಉಭಯಭಾವಿ (ambivalent) ಸಂಬಂಧಕ್ಕೆ ಪ್ರಸ್ತುತ ಕಾಲಮಾನಕ್ಕೂ ಹಿಂದಿನ ದೀರ್ಘವಾದ ಚರಿತ್ರೆಯೇ ಇದೆ. ಹತ್ತೊಂಬತ್ತನೆಯ ಶತಮಾನದಲ್ಲಿ, ರಾಷ್ಟ್ರ-ಪ್ರಭುತ್ವಗಳು ಮತ್ತು ಪ್ರಾದೇಶಿಕ ಪ್ರತಿಸ್ಪರ್ಧಿ ಅಧಿಪತ್ಯಗಳ ನಡುವಿನ ಸಾದೃಶ್ಯಗಳು, ಸಂಬಂಧಗಳು ಮತ್ತು ಸಂಯೋಜನೆಗಳು ತ್ವರಿತಹೆಚ್ಚಳವನ್ನು ಕಾಣುತ್ತಿದ್ದಂತೆಯೇ, ಮೋಸದ ವಿಶಿಷ್ಟಲಕ್ಷಣಕ್ಕೆಳಸಿದ ಅವುಗಳ ನಡುವೆ, ಪರಸ್ಪರ ವಿರೋಧವೂ ಬೆಳೆದಿತ್ತು. ಜಾಗತಿಕ ಬದಲಾವಣೆಯಂತಹ ವಿಸ್ತೃತ ಶಕ್ತಿಯು ಮಾನವ ಸಮಾಜಗಳ ನಡುವೆ ಕಂಡುಬರುತ್ತಿದ್ದ ವಿಭಿನ್ನತೆಗಳನ್ನು ಮತ್ತಷ್ಟು ಬಲಪಡಿಸಿತು. ಆದರೆ ಈ ವಿಭಿನ್ನತೆಗಳು ವ್ಯಕ್ತಗೊಳ್ಳುವ ರೀತಿಗಳಲ್ಲಿ ಹೆಚ್ಚಿನ ಸಾಮ್ಯತೆಗಳು ಕಾಣಿಸಲಾರಂಭಿಸಿದವು.

ಆದ್ದರಿಂದ ಎಲ್ಲಾ ಸ್ಥಳೀಯ, ರಾಷ್ಟ್ರೀಯ, ಅಥವ ಪ್ರಾದೇಶಿಕ ಇತಿಹಾಸಗಳು ಗಮನಾರ್ಹ ರೀತಿಗಳಲ್ಲಿ ಜಾಗತಿಕ ಇತಿಹಾಸಗಳೇ ಎನ್ನುವುದು ಈ ಕೃತಿಯ ನಿಲುವು. ಸಂಕೀರ್ಣ ಅರ್ಥದಲ್ಲಿ 'ಯುರೋಪಿಯನ್' ಅಥವಾ 'ಅಮೆರಿಕನ್' ಇತಿಹಾಸಗಳನ್ನು ಬರೆಯುವುದಿನ್ನು ಆಗದ ಮಾತು ಮತ್ತು ಹಲವಾರು ಇತಿಹಾಸಕಾರರು ಅದನ್ನು ಈಗಾಗಲೇ ಒಪ್ಪಿಕೊಂಡಿದ್ದಾರೆ ಎನ್ನುವುದು ಪ್ರೋತ್ಸಾಹಕರವೂ ಹೌದು. ೧೯೫೦ ಮತ್ತು ೬೦ರ ದಶಕದಲ್ಲಿ ಫರ್ನಾಂದ್ ಬ್ರೊದೆಲ್ (Fernand Braudel) ನೇತೃತ್ವದಲ್ಲಿ; ಫ್ರೆಂಚ್ 'ಅನಾಲ್'ನಲ್ಲಿನ (Annales) ಇತಿಹಾಸತಜ್ಞರ ಐತಿಹಾಸಿಕ ಬರವಣಿಗೆಯು ಆಧುನಿಕ ಯುಗದ ಆರಂಭದ ಜಾಗತಿಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಪ್ರಕಾರವೊಂದನ್ನು ಪ್ರವರ್ತನಗೊಳಿಸಿತು (pioneer). ರಾಷ್ಟ್ರಗಳು ಹಾಗೂ ಪರಿಸರ ಸಂಬಂಧಿತ ವಲಯಗಳ ಗಡಿಯನ್ನು ಮೀರುವ ಅವಶ್ಯಕತೆಯು ಹತ್ತೊಂಬತ್ತನೇ ಶತಮಾನದಲ್ಲಿ ಮತ್ತಷ್ಟು ಸುಸ್ಪಷ್ಟವೆನಿಸಿದೆ. ಇದು ಯುರೋಪ್ ಸಾಮ್ರಾಜ್ಯಶಾಹಿ ಆಡಳಿತಕ್ಕೆ ಮತ್ತು ರಷ್ಯಾದ ಭೂ-ಸಾಮ್ರಾಜ್ಯ ಅಥವಾ ಬ್ರಿಟನ್ ಯಾ ಫ್ರಾನ್ಸಿನ ಸಮುದ್ರೀಯ (seaborne) ಸಾಮ್ರಾಜ್ಯಗಳೆರಡಕ್ಕೂ ವಿಶೇಷವಾಗಿ ಅನ್ವಯಿಸುತ್ತದೆ. ಸಾಮ್ರಾಜ್ಯಶಾಹಿಯ ಅತ್ಯಂತ ವಿಸ್ತೃತ ಅನುಭವವೇ ಈ ರಾಷ್ಟ್ರೀಯ ಪ್ರಭುತ್ವಗಳ ಸೃಜನೆ ಹಾಗೂ ಸಂರಚನೆಯ ಪ್ರಮುಖ ಅಂಶವಾಗಿದೆಯೆಂಬುದನ್ನು ಅಭಿವ್ಯಕ್ತಿಸುವ ಪ್ರಯತ್ನದಲ್ಲಿ ಬ್ರಿಟನ್ನಿನ ಲಿಂಡಾ ಕಾಲಿ (Linda Colley) ಮತ್ತು ಕ್ಯಾಥರೀನ್ ಹಾಲ್ (Catherine Hall) ಹಾಗೂ ರಶಿಯಾದ ಜೆಫ್ರಿ ಹಾಸ್ಕಿಂಗ್ (Geoffrey Hosking) ಮತ್ತು ಡೊಮಿನಿಕ್ ಲೀವೆನ್ (Dominic Lieven) ಇವರುಗಳು ಮುಂಚೂಣಿಯಲ್ಲಿದ್ದಾರೆ. ಜೊತೆಗೇ, ಆರ್. ಬಿನ್ ವೊಂಗ್ (R. Bin Wong), ಕೆನೆತ್ ಪೊಮರಾನ್ಜ್ (Kenneth Pomeranz), ವಾಂಗ್ ಗುಂಗ್ ವು (Wang Gung Wu) ಮತ್ತು ಜೊಯಾನಾ ವೇಲಿ-ಕೊಹೆನ್ (Joana Waley-Cohen) ಅವರು, ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಯಜಮಾನ್ಯದಡಿ ದೃಢವಾಗಿ ಉಳಿದಿದ್ದ ಹಾಗೂ ಮುಂಚೆಯೇ ಚೆದುರಿದ್ದ ಚೀನೀ ಸಮುದಾಯಗಳ ನಿಕಟ ಪರಿಗಣನೆಯೊಂದಿಗೆ, ಚೀನೀಯರ ಚರಿತ್ರೆಯನ್ನು ಜಾಗತಿಕ ಚರಿತ್ರೆಯೆಂಬಂತೆ ಬರೆಯಲು ಆರಂಭಿಸಿದ್ದಾರೆ.

ಈ "ದೀರ್ಘ" ಹತ್ತೊಂಬತ್ತನೆಯ ಶತಮಾನದ ಅವಧಿಯಲ್ಲಿ ಜಗತ್ತಿನಾದ್ಯಂತ ಹೆಚ್ಚಾಗುತ್ತಿದ್ದ ಪರಸ್ಪರ ಸಂಬಂಧ , ಮತ್ತು ಸಮರೂಪತೆಗಳನ್ನು ಸಾಧ್ಯವಾಗಿಸಿದ ಮಹತ್ವದ ಶಕ್ತಿಗಳು ಯಾವುವು? ಈ ಅವಧಿಯ ಯಾವುದೇ ಜಾಗತಿಕ ಇತಿಹಾಸವು ಉತ್ತರ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಆರ್ಥಿಕ ಪ್ರಾಬಲ್ಯದ ವರ್ಧನೆಯ ಕೇಂದ್ರೀಯ ಮಹತ್ವವನ್ನು ಪರಿಗಣಿಸದೇ ಇರಲು ಸಾಧ್ಯವಿಲ್ಲ. ೧೭೮೦ರಲ್ಲಿ ಚೀನೀ ಮತ್ತು ಒಟೊಮನ್ ಸಾಮ್ರಾಜ್ಯಗಳಿನ್ನೂ ಪ್ರಬಲವಾಗಿದ್ದು, ಜಾಗತಿಕ ಮಟ್ಟದ ಅಸ್ತಿತ್ವವನ್ನು ಹೊಂದಿದ್ದರೆ, ಆಫ್ರಿಕಾ ಮತ್ತು ಪೆಸಿಫಿಕ್ ಪ್ರಾಂತ್ಯದ ಹೆಚ್ಚಿನ ಭಾಗವನ್ನು ದೇಶೀಯರೇ ಆಳುತ್ತಿದ್ದರು. ೧೯೧೪ರಲ್ಲಿ ಇದಕ್ಕೆ ವ್ಯತಿರಿಕ್ತವಾಗಿ, ಚೀನಾ ಮತ್ತು ಒಟೊಮನ್ ಪ್ರಭುತ್ವಗಳು ಛಿದ್ರಗೊಳ್ಳುತ್ತಿದ್ದು, ಆಫ್ರಿಕಾ; ಯುರೋಪಿಯನ್ ಸರ್ಕಾರಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಗಣಿಯ ಮಾಲೀಕರುಗಳ ಅಮಾನುಷ ಅಧಿಪತ್ಯಕ್ಕೆ ಒಳಪಟ್ಟಿತ್ತು. ೧೭೮೦ ಮತ್ತು ೧೯೧೪ರ ನಡುವೆ, ವಿಶೇಷವಾಗಿ ಉತ್ತರ ಮತ್ತು ದಕ್ಷಿಣ ಆಫ್ರಿಕಾ, ಉತ್ತರ ಅಮೆರಿಕ, ಮಧ್ಯ

ಏಶಿಯಾ, ಸೈಬೀರಿಯಾ, ಹಾಗೂ ಆಸ್ಟ್ರೇಲೇಶಿಯಾದ ಭೂಭಾಗವನ್ನು ಭಾರೀ ಪ್ರಮಾಣದಲ್ಲಿ ಯುರೋಪಿಯನ್ನರು ವಶಪಡಿಸಿಕೊಂಡಿದ್ದರು. ೧೮೦೦ರಲ್ಲಿ ಪಶ್ಚಿಮ ಯುರೋಪು ಮತ್ತು ಉತ್ತರ ಅಮೆರಿಕಾದ ಕರಾವಳಿಯ ತಲಾವಾರು ಒಟ್ಟು ದೇಶೀಯ ಉತ್ಪನ್ನವು ದಕ್ಷಿಣ ಏಶಿಯಾದ ಸುಮಾರು ದುಪ್ಪಟ್ಟಿದ್ದು, ಕರಾವಳಿ ಚೀನಾಗೆ ಹೋಲಿಸಿದಾಗ ಸ್ವಲ್ಪ ಮಾತ್ರವೇ ಹೆಚ್ಚಿದ್ದರೆ, ಒಂದು ಶತಮಾನದ ನಂತರ ಈ ಅಂತರವು ಹತ್ತುಪಟ್ಟು ಅಥವ ಅದಕ್ಕಿಂತಲೂ ಹೆಚ್ಚಾಗಿತ್ತು. ಯುರೋಪು ಮತ್ತು ಉತ್ತರ ಅಮೆರಿಕಾದ ನೇರ ಹಿಡಿತಕ್ಕೆ ಒಳಪಡದ ಪ್ರದೇಶಗಳನ್ನು ಇತಿಹಾಸಕಾರರು 'ಅನೌಪಚಾರಿಕ ಸಾಮ್ರಾಜ್ಯಗಳು' (informal empires) ಎಂದು ಗುರುತಿಸುತ್ತಾರೆ. ಅಲ್ಲಿ ಸ್ಥಳೀಯರು ಮತ್ತು ಹೊರಗಿನವರ ನಡುವಿನ ಬಲಾಬಲದ ಅಸಮಾನತೆಯು ನೇರ ಸೇರ್ಪಡಿಕೆಗಿನ್ನೂ (annexation) ದಾರಿಯಾಗಿರಲಿಲ್ಲ.

ದೈಹಿಕ ಪ್ರಾಬಲ್ಯವು ವಿವಿಧ ಹಂತದ ಸೈದ್ಧಾಂತಿಕ ಅವಲಂಬನದ ಜೊತೆಗೂಡಿತ್ತು. ಯುರೋಪಿಯನ್ ದೇಶಗಳ ನಡುವಿನ ಉಗ್ರ ಸಂಘರ್ಷಗಳು ಮತ್ತು ಸ್ಪರ್ಧೆಗಳಲ್ಲಿ ಪ್ರಖರಗೊಳ್ಳುತ್ತಿದ್ದ ಸಾಮಾಜಿಕ ಪರಿಕಲ್ಪನೆಗಳು, ಸಾಂಸ್ಥಿಕ ರಚನೆಗಳು, ಮತ್ತು ವಿಧಿವಿಧಾನಗಳು ಅ-ಯುರೋಪೀಯ (non-European) ಜನರ ನಿಯಂತ್ರಕಗಳು ಹಾಗೂ ಮಾದರಿಗಳೆನಿಸಿದವು. ಆದಾಗ್ಯೂ, ಆ ಜನರು ಪಶ್ಚಿಮದ ಕೊಡುಗೆಯ ವಿನಮ್ರ ಸ್ವೀಕರ್ತರಾಗಿರಲಿಲ್ಲ ಅಥವ ಪ್ರತಿರೋಧವನ್ನೇ ತೋರದೆ ಅವುಗಳಿಗೆ ಬಲಿಪಶುಗಳಾದರು ಎನ್ನುವುದೂ ಸರಿಯಲ್ಲ. ಅವರು ಪಾಶ್ಚಿಮಾತ್ಯ ಅಭಿಮತಗಳನ್ನು ಮತ್ತು ಕೌಶಲಗಳನ್ನು ಪಡೆದುಕೊಂಡು ತಮ್ಮ ಬದುಕಿಗೆ ಮಾರ್ಪಡಿಸಿಕೊಂಡ ಪ್ರಕ್ರಿಯೆಯು, ಅವರ ಮೇಲಿನ ಯುರೋಪೀಯ ಅಧಿಕಾರಸ್ಥರ ಪ್ರಾಬಲ್ಯದ ಸ್ವರೂಪ ಹಾಗೂ ವ್ಯಾಪ್ತಿಗೆ ಮಿತಿಗಳನ್ನೊಡ್ಡಿತು. ಈ ಕೃತಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಿರುವ ಕಾಲಮಾನದ ಆರಂಭದಲ್ಲಿ ಜಗತ್ತು ಬಹು-ಕೇಂದ್ರಿತವಾಗಿಯೇ ಇತ್ತು. ಯುರೋಪಿಯನ್ನರು ಹಾಗೂ ಅವರ ಸಾಗರೋತ್ತರ ವಸಾಹತುಶಾಹಿಗಳಿಗೆ ಈಗಾಗಲೇ ಬಲಿಷ್ಠ ಹಿಡಿತವುಳ್ಳ ಪ್ರತಿಸ್ಪರ್ಧಾತ್ಮಕ ಪ್ರಾಧಾನ್ಯಗಳು ಒದಗಿ ಬಂದಿದ್ದರೂ ಸಹ; ಪೂರ್ವ ಏಶಿಯಾ, ದಕ್ಷಿಣ ಏಶಿಯಾ ಮತ್ತು ಆಫ್ರಿಕಾ, ತಮ್ಮ ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಹಲವು ಕ್ಷೇತ್ರಗಳಲ್ಲಿನ ಚೈತನ್ಯ ಹಾಗೂ ಮುಂತೊಡಗುವ ಶಕ್ತಿಯನ್ನು ಉಳಿಸಿಕೊಂಡಿದ್ದವು. ಆ ಅವಧಿಯ ಕೊನೆಯಲ್ಲಿ, ಜಪಾನಿನ ಉತ್ಥಾನ ಮತ್ತು ಯುರೋಪಿನಾಚೆಗಿನ ರಾಷ್ಟ್ರೀಯತೆಗಳ ಪ್ರಾರಂಭದ ತರುವಾಯ, ಯುರೋಪಿನ 'ಯಜಮಾನ್ಯಕ್ಕೆ' ಗಮನಾರ್ಹವಾದ ಸವಾಲನ್ನು ಒಡ್ಡಲಾಯಿತು. ಆದ್ದರಿಂದ, ಆ ಅವಧಿಯ ಚರಿತ್ರೆಯು, ವಿವಿಧ ವಿಷಯಗಳನ್ನು ಮತ್ತು ಪರಸ್ಪರ ವಿರೋಧಾತ್ಮಕವೆಂದು ತೋರುವ ಸಂಗತಿಗಳನ್ನು ವಿಶದೀಕರಿಸಬೇಕಾಗುತ್ತದೆ. ಪಶ್ಚಿಮದ ಕ್ರೂರ ಪ್ರಭುತ್ವವನ್ನು ದಾಖಲಿಸುವಾಗ, ಜಾಗತಿಕ ವಿದ್ಯಮಾನಗಳ ಪರಸ್ಪರಾವಲಂಬನೆಯ ಸಂಚಿತ್ರಣವನ್ನು ನೀಡಬೇಕಾಗುತ್ತದೆ. ಹಾಗೆಯೇ, ಜಗತ್ತಿನ ಬಹುಭಾಗದಲ್ಲಿ ಈ ಯುರೋಪೀಯ ಪ್ರಭುತ್ವವು ಕೇವಲ ಭಾಗಶಃ ಹಾಗೂ ತಾತ್ಕಾಲಿಕವಾಗಿತ್ತು ಎನ್ನುವುದನ್ನೂ ಅದು ತೋರಿಸಬೇಕಾಗುತ್ತದೆ.

**ಕೃತಿಯ ಸಂರಚನೆ (Organization)**

The Birth of the Modern World (ಆಧುನಿಕ ಜಗತ್ತಿನ ಉಗಮ) ಕೃತಿಯು, ಜಾಗತಿಕ ಇತಿಹಾಸದ ನಿರೂಪಣೆಯಲ್ಲ. ಬದಲಾಗಿ, ಅದರ ಬಗೆಗಿನ ಚಿಂತನೆ ಎಂದು ಕರೆಯಬಹುದು. ಇದರ ೩, ೪, ೭ ಮತ್ತು ಕೊನೆಯ ಅಧ್ಯಾಯಗಳು ೧೭೮೦ರಿಂದ ೧೯೧೪ರ ನಡುವಿನ ದೀರ್ಘ ಅವಧಿಯ ಜಾಗತಿಕ ಘಟನೆಗಳನ್ನು ಕಾಲಾನುಕ್ರಮಿತ ವಿಭಾಗಗಳಲ್ಲಿ ಸಂಯೋಜಿಸಲು ಪ್ರಯತ್ನಿಸುತ್ತವೆ. ಅವು, ತುಲನಾತ್ಮಕವಾಗಿ 'ಸ್ಥಿರ'ವೆಂದು ಕರೆಯಬಹುದಾದ ಕಾಲವನ್ನು, ಜಗತ್ತಿನಾದ್ಯಂತದ ಬಿಕ್ಕಟ್ಟಿನ ಕಾಲಗಳೊಂದಿಗೆ ಹೋಲಿಸಿ ನೋಡುತ್ತವೆ. ವಿಸ್ತೃತ ಸರಣಿಯ ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳ ನಡುವಿನ ಕೆಲವು ಸಹ-ಸಂಬಂಧಗಳನ್ನು ಆಯ್ದು, ಅವುಗಳಿಗೆ ಒತ್ತು ನೀಡುವುದು ಅವುಗಳ ಉದ್ದೇಶ. ಉದಾಹರಣೆಗೆ ೩ನೇ ಅಧ್ಯಾಯವು, ಯುರೋಪು ಮತ್ತು ಉತ್ತರ ಅಮೆರಿಕಾಗಳಲ್ಲಿನ ೧೭೭೬ರ ನಂತರದ ತಲೆಮಾರಿನ ಕ್ರಾಂತಿಯುಗ ಮತ್ತು 'ಜಾಗತಿಕ ಸಾಮ್ರಾಜ್ಯಶಾಹಿಯ ಮೊದಲ ಯುಗದಲ್ಲಿ' ಅ-ಯುರೋಪೀಯರ ಮೇಲಿನ ಯುರೋಪಿಯನ್ನರ ಪ್ರಭುತ್ವದ ಸಮಕಾಲಿಕ ಆಕ್ರಮಣದ ನಡುವಿನ ಸೈದ್ಧಾಂತಿಕ ಮತ್ತು ರಾಜಕೀಯ ಕೊಂಡಿಗಳಿಗೆ ಪುನಃ

ಒತ್ತು ನೀಡುತ್ತದೆ. ಯುರೋಪಿನ ೧೮೪೮ರ ಕ್ರಾಂತಿಗಳ ಬಗೆಗಿನ ಇತ್ತೀಚಿನ ಮರುವಿಶ್ಲೇಷಣೆಗಳು, ಮಧ್ಯ ಶತಮಾನದಲ್ಲಿ ಚೀನಾದಲ್ಲಿ ನಡೆದ ಕ್ಷೋಭೆಗಳು ಮತ್ತು ೧೮೫೭-೯ರಲ್ಲಿ ಭಾರತದಲ್ಲಿ ನಡೆದ ಮಹಾದಂಗೆಯಂತಹ ಮಹತ್ವದ ವಿದ್ಯಮಾನಗಳನ್ನು ಆನುಕೂಲ್ಯ (vantage) ಅಂಶಗಳೊಂದಿಗೆ ಅವಲೋಕಿಸುವುದನ್ನು ಸಾಧ್ಯವಾಗಿಸಿವೆ. ಅಧ್ಯಾಯ ೪ರಲ್ಲಿ, ಅಮೆರಿಕನ್ ಅಂತರ್ಯುದ್ಧವನ್ನು ಬರೀ ಅಮೆರಿಕಾಗೆ ಸಂಬಂಧಿಸಿದ ಬಿಕ್ಕಟ್ಟಾಗಿ ಪರಿಗಣಿಸದೆ, ಜಾಗತಿಕ ವಿದ್ಯಮಾನವೆಂಬುದಾಗಿ ಗ್ರಹಿಸಲಾಗಿದೆ. ಹಾಗೆಯೇ ಅಧ್ಯಾಯ ೬ರಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ರಾಷ್ಟ್ರೀಯತೆ, ಸಾಮ್ರಾಜ್ಯವಾದ, ಜನಾಂಗೀಯ ಪ್ರತ್ಯೇಕತೆಗಳನ್ನು ಎಂದಿನಂತೆ ಪ್ರತ್ಯೇಕ ನೆಲೆಯಲ್ಲಿ ನೋಡುವ ಬದಲು, ಅಂತಹುದೇ ವಿಶ್ಲೇಷಣಾ ನೆಲೆಯಲ್ಲಿ ಗ್ರಹಿಸಲಾಗಿದೆ.

ಈ ಅಧ್ಯಾಯಗಳು; ರಾಷ್ಟ್ರೀಯ ಚರಿತ್ರೆಗಳು ಮತ್ತು 'ಪ್ರಾದೇಶಿಕ ಅಧ್ಯಯನಗಳು' (Area Studies) ವಿಸ್ತೃತ ಜಗತ್ತಿನಲ್ಲಿ ಉಂಟಾಗುವ ಬದಲಾವಣೆಗಳನ್ನು ಸಮಗ್ರ ನೆಲೆಯಲ್ಲಿ ಗ್ರಹಿಸಬೇಕೆಂಬ ಪ್ರಸ್ತಾಪಕ್ಕೆ ಮತ್ತೊಮ್ಮೆ ಒತ್ತು ನೀಡುತ್ತವೆ. ವಿಚಾರಗಳು ಮತ್ತು ರಾಜಕೀಯ ಚಳುವಳಿಗಳು, ಸಾಗರಗಳು ಹಾಗೂ ಗಡಿಗಳನ್ನು "ದಾಟಿ" ದೇಶದಿಂದ ದೇಶಕ್ಕೆ ಪ್ರಯಾಣಿಸಿವೆ. ಉದಾಹರಣೆಗೆ, ಅಂತರ್ಯುದ್ಧ ಮುಗಿಯುವ ೧೮೬೫ರ ಹೊತ್ತಿಗೆ ಅಮೆರಿಕನ್ ಪ್ರಗತಿಪರರು, ಫ್ರೆಂಚ್ ಬೆಂಬಲಿತ ಸಂಪ್ರದಾಯವಾದಿಗಳಿಂದ ಆಕ್ರಮಣಕ್ಕೊಳಗಾದ ಬೆನಿಟೊ ಹುವಾರೆ (Benito Juarez) ಅವರ ಮೆಕ್ಸಿಕನ್ ತೀವ್ರ ಸುಧಾರಣಾವಾದಿ ಸರಕಾರಕ್ಕೆ ಬೆಂಬಲ ನೀಡಿದ್ದರು. ಯುರೋಪಿನಲ್ಲಿ ಅಧಿಕಾರಿಶಾಹಿಯ ವಿರುದ್ಧದ ೧೮೪೮ರ ಬಂಡಾಯಗಾರರ ನಾಯಕರಾಗಿದ್ದ ಜೂಸೆಪ್ಪೇ ಗ್ಯಾರಿಬಾಲ್ಡಿ (Giuseppe Garibaldi) ಮತ್ತು ಇತರ ಕ್ರಾಂತಿಕಾರಿಗಳಿಂದ ಮೆಕ್ಸಿಕನ್ ತೀವ್ರ ಸುಧಾರಣಾವಾದಿಗಳಿಗೆ ಆಗಲೇ ಉತ್ಸಾಹಪೂರ್ಣ ಬೆಂಬಲ ದೊರಕಿತ್ತು. ಸಮಾನ ರೀತಿಯ ಅನುಭವಗಳು ಜಗತ್ತಿನುದ್ದಕ್ಕೂ ಒಗ್ಗಟ್ಟಿನ ನೆಲೆಯೊಂದನ್ನು ರೂಪಿಸಿದ್ದವು. ಆದರೂ, ಜಾಗತಿಕ ಬದಲಾವಣೆಗಳ ನಿಟ್ಟಿನ ಅನಾವರಣವು (exposure) ಬುದ್ಧಿಜೀವಿಗಳು, ರಾಜಕಾರಣಿಗಳು ಮತ್ತು ಸಾಮಾನ್ಯ ಜನರು ಸಮಾನರೂಪತೆಗಿಂತಲೂ ವಿಭಿನ್ನತೆಗೆ ಒತ್ತು ನೀಡುವುದನ್ನು ಪ್ರೋತ್ಸಾಹಿಸಿತು. ಉದಾಹರಣೆಯಾಗಿ, ೧೮೮೦ರ ದಶಕದ ಹೊತ್ತಿಗೆ ಕ್ರಿಶ್ಚಿಯನ್ ಮಿಶನರಿಗಳು ಮತ್ತು ಪಾಶ್ಚಿಮಾತ್ಯ ಸರಕುಗಳ ಪ್ರಭಾವವು; ಭಾರತೀಯರು, ಅರಬ್ಬರು ಮತ್ತು ಚೀನೀಯರಿಗೆ ತಮ್ಮ ವಿಶಿಷ್ಟಧಾರ್ಮಿಕ ಆಚರಣೆಗಳು, ದೈಹಿಕ ವರ್ತನೆಯ ಸ್ವರೂಪಗಳು, ಹಾಗೂ ತಮ್ಮ ಸ್ಥಳೀಯ ಕುಶಲಕರ್ಮಿಗಳ ಉತ್ಕೃಷ್ಟತೆಯ ಬಗ್ಗೆ ಹೆಚ್ಚಿನ ಅರಿವನ್ನು ನೀಡಿತು. ಕ್ರಮೇಣ ಈ ವಿಭಿನ್ನತೆಯ ಬಗೆಗಿನ ಸಂವೇದನಾಶೀಲತೆಯು ಮತ್ತಷ್ಟು ಹೆಚ್ಚಿನ ಜಾಗತಿಕ ಸಂಪರ್ಕಗಳನ್ನು ಸಹ ಸೃಜಿಸಿತು. ಭಾರತೀಯ ಕಲಾವಿದರು ತಮ್ಮ ಸಮಕಾಲೀನ ಜಪಾನೀ ಕಲಾವಿದರು ಶುದ್ಧ ಸೌಂದರ್ಯಶಾಸ್ತ್ರ ಪರಂಪರೆಯನ್ನು ಪಿತ್ರಾರ್ಜಿತವಾಗಿ ಪಡೆದವರೆಂಬುದಾಗಿ ಪರಿಗಣಿಸಿ, ಅವರ ಶೈಲಿಯನ್ನು ತಮ್ಮ ಸ್ವಂತ ಕಲಾಕೃತಿಗಳಲ್ಲಿ ಸಹ ಅಳವಡಿಸಿಕೊಂಡರು. ಈ ಬಗೆಯ ಸಂಪರ್ಕಗಳ 'ಪಾರ್ಶ್ವಸ್ಥ ಚರಿತ್ರೆ' (lateral history) ಮತ್ತು ಕೆಲವು ನಿರ್ದಿಷ್ಟ ಸಂಸ್ಥೆಗಳು ಮತ್ತು ಸಿದ್ಧಾಂತಗಳ ಬೆಳವಣಿಗೆಯ 'ಲಂಬಸ್ಥ ಚರಿತ್ರೆಯ' (vertical history), ಸಂಮಿಶ್ರಣವು ಈ ಪುಸ್ತಕದಾದ್ಯಂತದ ಉದ್ದೇಶವೆನಿಸಿದೆ.

ಹಾಗಾಗಿಯೇ, ಅಧ್ಯಾಯ ೧, ೨, ೫ ಮತ್ತು ಪುಸ್ತಕದ ಎರಡನೆಯ ಭಾಗವು ಹೆಚ್ಚು ವಿಷಯಾಧಾರಿತವಾಗಿದೆ. ಈ ಅಧ್ಯಾಯಗಳು, ಹತ್ತೊಂಬತ್ತನೆಯ ಶತಮಾನದಲ್ಲಿ ಘಟಿಸಿದ ಮಹತ್ತರ ಬದಲಾವಣೆಗಳ ಲಕ್ಷಣಗಳನ್ನು ತಿಳಿಸುವಲ್ಲಿ, ಇತಿಹಾಸಕಾರರಂತೆಯೇ ಹತ್ತೊಂಬತ್ತನೆಯ ಶತಮಾನದಲ್ಲಿನ ಲೇಖಕರು ಮತ್ತು ಪ್ರಸಕ್ತ ವಿದ್ಯಮಾನಗಳನ್ನು ಕುರಿತು ಬರೆಯುವವರು ಬಳಸುವ ಮಹತ್ವದ ಸಾಮಾಜಿಕ ಪರಿಕಲ್ಪನೆಗಳನ್ನು ಪರಿಗಣಿಸುತ್ತವೆ. ಆಧುನಿಕ ಪ್ರಭುತ್ವದ ಉದಯ, ವಿಜ್ಞಾನ, ಕೈಗಾರಿಕೀಕರಣ, ಉದಾರವಾದ, ಮತ್ತು 'ಧರ್ಮದ' ಪರಿಕಲ್ಪನೆಗಳು ಅವುಗಳಲ್ಲಿ ಬಹಳ ಮುಖ್ಯವಾದವು ಎಂಬುದಾಗಿ ಕಂಡುಬರುತ್ತದೆ. ಪ್ರಾದೇಶಿಕ ಮತ್ತು ರಾಷ್ಟ್ರೀಯ ಚರಿತ್ರೆಗಳಿಂದ ಹಲವಾರು ಸಾಮಗ್ರಿಗಳನ್ನು ಕಲೆಹಾಕಿ, ಈ ಸಿದ್ಧಾಂತಗಳು ಮತ್ತು ಸಾಂಸ್ಥಿಕ ರಚನೆಗಳು ಬೇರೆ ಬೇರೆ ಸ್ಥಳಗಳು ಹಾಗೂ ಕಾಲಾವಧಿಯಲ್ಲಿ ಹೇಗೆ ಬೇರೂರಿ ಪ್ರಬಲವಾದವು ಎನ್ನುವುದನ್ನು ನಿದರ್ಶಿಸುವುದು ಈ ಅಧ್ಯಾಯಗಳ ಉದ್ದೇಶವಾಗಿದೆ. ಆಧುನಿಕತೆಯ ಬಾಹ್ಯ ಪ್ರಸರಣವು; ಪ್ರಬಲ, "ವಿವೇಕಶೀಲ" ಯುರೋಪಿಯನ್ ಅಥವ ಅಮೆರಿಕನ್ ಕೇಂದ್ರಸ್ಥವಾಗಿತ್ತೆಂಬ ಸಾಮಾನ್ಯ ದೃಷ್ಟಿಕೋನವನ್ನು

ಆಶ್ರಯಿಸದೆ, ಸಂಪರ್ಕಗಳ ಮತ್ತು ಪ್ರಕ್ರಿಯೆಗಳ ಇತಿಹಾಸವನ್ನು ಒದಗಿಸಲು ಅವು ಪ್ರಯತ್ನಿಸುತ್ತವೆ. ಜಾಗತಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ; ಪೂರ್ಣ ಅಥವಾ ಅರೆ ವಸಾಹತೀಕರಣಕ್ಕೊಳಪಟ್ಟ ಅ-ಯುರೋಪಿಯನ್ ಮತ್ತು ಯುರೋಪು ಮತ್ತು ಅಮೆರಿಕನ್ ಸಮಾಜದಲ್ಲಿನ ಅಧೀನಕ್ಕೊಳಪಟ್ಟ ಸಮುದಾಯಗಳ ಚಟುವಟಿಕೆಯ ಮಹತ್ವಕ್ಕೆ ಈ ಕೃತಿಯು ಇಲ್ಲಿಯೂ ಮತ್ತೆ ಒತ್ತು ನೀಡುತ್ತದೆ. ಉದಾಹರಣೆಗೆ, ೧೮೭೦ರ ನಂತರದ ಯುರೋಪಿಯನ್ ರೋಮನ್ ಕ್ಯಾಥೊಲಿಕ್ ಶ್ರೇಣಿವ್ಯವಸ್ಥೆಯ ಪುನರ್ರಚನೆಯು, ಕ್ರೈಸ್ತಧರ್ಮದ ತರಹವೇ ಹಿಂದೂ, ಕನಫ್ಯೂಶಿಯನ್ ಮತ್ತು ಬೌದ್ಧ ಲೋಕಗಳಲ್ಲಿ ನಡೆಯುತ್ತಿದ್ದ 'ವಿಶ್ವ ಧರ್ಮಗಳನ್ನು' ರೂಪಿಸುವ ಅತ್ಯಂತ ವಿಸ್ತೃತ ಪ್ರಕ್ರಿಯೆಯ ಒಂದು ಭಾಗವಾಗಿತ್ತು. ಪ್ರತ್ಯಕ್ಷ ಕಾರ್ಯಕಾರಣಸಂಬಂಧವಾಗಿರುವ (direct caustaion), ಇದು, ಕೇವಲ ಹೋಲಿಕೆಯ ವಿಷಯವಲ್ಲ. ಔಪಚಾರಿಕವಾಗಿ ತಮ್ಮ ಅಧೀನದಲ್ಲಿರುವವರ ನಡುವೆ ಪ್ರಸರಿಸುತ್ತಿದ್ದ ಪುನರ್ಜೀವಿತ ಇಸ್ಲಾಂ ಅಥವ ಇತರೆ ಧಾರ್ಮಿಕ ಸಂಪ್ರದಾಯಗಳ ಒತ್ತಡಕ್ಕೀಡಾಗಿದ್ದ ಕ್ರಿಶ್ಚಿಯನ್ ಚರ್ಚುಗಳು, ಸಾಗರೋತ್ತರ ಮಿಶನರಿ ಚಟುವಟಿಕೆಯಲ್ಲಿನ ತಮ್ಮ ಐಕಮತ್ಯದ ಅಗತ್ಯದಿಂದಾಗಿ ಒಂದುಗೂಡಿ ಕೆಲಸ ಮಾಡಲು ಪ್ರಾರಂಭಿಸಿ, ಹೊಸ ಸಂಸ್ಥೆಗಳನ್ನು ರಚಿಸಿದವು.

ಈ ಕೃತಿಯು ಮೊದಲನೆಯ ಮಹಾಯುದ್ಧದ ಪ್ರಾರಂಭಕ್ಕೂ ಮೊದಲಿನ ಅವಧಿಯ ಅವಲೋಕನದೊಂದಿಗೆ ಕೊನೆಗೊಳ್ಳುತ್ತದೆ. ಅಂತರರಾಷ್ಟ್ರೀಯ ನೆಲೆಯಲ್ಲಿ ಘಟಿಸುತ್ತಿದ್ದ ಆರ್ಥಿಕ ಬದಲಾವಣೆಗಳು ಮತ್ತು ರಾಜತಾಂತ್ರಿಕ ಪೈಪೋಟಿಗಳು ರಾಷ್ಟ್ರ-ಪ್ರಭುತ್ವ ಮತ್ತು ಸಾಮ್ರಾಜ್ಯಗಳ ಮೇಲೆ ಹಿಂದೆಂದೂ ಕಾಣದಿದ್ದ ಒತ್ತಡಗಳೊಂದಿಗೆ ಮುಖಾಮುಖಿಯಾಗಿದ್ದ ಕಾಲವದು. ಮೊದಲನೇ ಮಹಾಯುದ್ಧವು ಜಾಗತಿಕ ವ್ಯವಸ್ಥೆಯ ಯುರೋಪು ಕೇಂದ್ರದಲ್ಲಿ ಅಂತರ್ಯುದ್ಧವಾಗಿ ಪ್ರಾರಂಭವಾಗಿದ್ದರೂ ಸಹ ಹ್ಯೂ ಸ್ಟ್ರಾಚನ್ (Hew Strachan) ಸ್ಪಷ್ಟಪಡಿಸುವಂತೆ, ಅದು ಮಹಾಯುದ್ಧವೇ. ಆ ಸಂಘರ್ಷವು 'ಅನಿವಾರ್ಯವಾಗಿರಲಿಲ್ಲ. ಆದರೆ ಇಪ್ಪತ್ತನೆಯ ಶತಮಾನದುದ್ದಕ್ಕೂ ಅನುರಣಿಸಿದ ಅದರ ಸ್ಫೋಟಕ ಶಕ್ತಿಯು ಮಾತ್ರ ಯುರೋಪಿನಿಂದಾಚೆಯೇ ಘಟಿಸಿದ ಹಲವಾರು ಸ್ಥಳೀಯ ಬಿಕ್ಕಟ್ಟುಗಳು ಒಟ್ಟುಗೂಡಿದ್ದರ ಫಲಿತಾಂಶವೇ ಹೌದು.

ಜಾಗತಿಕ ಇತಿಹಾಸವನ್ನು ಬರೆಯುವ ಪ್ರಯತ್ನವು ವಿಶ್ಲೇಷಣೆ ಮತ್ತು ನಿರೂಪಣೆಯ ಬಗ್ಗೆ ಹಲವಾರು ಗಂಭೀರ ಸ್ವರೂಪದ ಪ್ರಶ್ನೆಗಳನ್ನು ಎತ್ತುತ್ತದೆ. ಚರ್ಚೆಗೆ ಮುನ್ನ, ಮನುಷ್ಯ ದೇಹಕ್ಕೆ ಸಂಬಂಧಪಟ್ಟ ರೂಢಿಗಳ ಹರವಿನಲ್ಲಿ ಸಮರೂಪತೆಯ ಬೆಳವಣಿಗೆಯನ್ನು ಪರಿಗಣಿಸಿ, ಇಲ್ಲಿ ಅವುಗಳಲ್ಲಿನ ಮೂರು ಅಂಶಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಮೊದಲನೆಯ ಸಮಸ್ಯೆ: 'ಆದ್ಯ ಪ್ರವರ್ತಕರು' (Prime Movers) ಮತ್ತು ಆರ್ಥಿಕ ಅಂಶ**

ಹೆಚ್ಚಿನ ವೃತ್ತಿಪರ ಇತಿಹಾಸಕಾರರ ಮನಸ್ಸಿನಲ್ಲಿ, 'ಪರಿಸ್ಥಿತಿಗಳು ಬದಲಾದದ್ದೇಕೆ' ಎಂಬ ಪ್ರಶ್ನೆಯಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಬದುಕಿದ್ದ ಇತಿಹಾಸಕಾರರು ಮತ್ತು ತತ್ವಶಾಸ್ತ್ರಜ್ಞರ ಗ್ರಹಿಕೆಯು; ಮಹತ್ತರವಾದ ಬೌದ್ಧಿಕ ಮತ್ತು ಆಧ್ಯಾತ್ಮಿಕ ಬದಲಾವಣೆಗಳು ಚರಿತ್ರೆಯನ್ನು ಮುನ್ನಡೆಸಿದವು ಎಂಬ ನಿಟ್ಟಿನಲ್ಲಿ ಪ್ರವೃತ್ತವಾಗಿತ್ತು. ಅವರ ಪ್ರಕಾರ, ದೇವರು, ಅಥವಾ ತರ್ಕಶೀಲತೆ (Spirit of Reason), ಅಥವಾ ಬಿಡುಗಡೆಯ ತೀವ್ರ ಇಚ್ಛೆಯು (Urge for Liberation) ಜಗತ್ತಿನಲ್ಲಿ ಪ್ರವಹಿಸುತ್ತಿತ್ತು. ಅವರಲ್ಲಿ ಕೆಲವರಿಗೆ ಯುರೋಪಿಯನ್ ಕ್ರಿಶ್ಚಿಯನ್ನಿನ 'ನಾಗರಿಕಗೊಳಿಸುವ ಧರ್ಮಪ್ರಚಾರದಲ್ಲಿ' (Civilizing Mission) ನಂಬಿಕೆ ಇತ್ತು. ಉಳಿದವರು, ಪೈಪೋಟಿ, ಉಳಿವು, ಮತ್ತು ಅವನತಿಯಂತಹ ನೈಸರ್ಗಿಕ ನಿಯಮಗಳ ಪ್ರಕಾರ ಜನಾಂಗಗಳು ಮತ್ತು ನಾಗರಿಕತೆಗಳ ಏಳುಬೀಳುಗಳು ಘಟಿಸುತ್ತವೆಯೆಂದು ನಂಬಿದ್ದರು. ಇಪ್ಪತ್ತನೆಯ ಶತಮಾನದಲ್ಲಿ ಬದಲಾವಣೆಗೆ ಸಂಬಂಧಪಟ್ಟಂತೆ ಭೌತವಾದಿ (materialist) ವಿವರಣೆಗಳು ಮುಂಚೂಣಿಗೆ ಬಂದವು. ೧೯೫೦ರ ಹೊತ್ತಿಗೆ ಹಲವಾರು ಪ್ರಧಾನ ಇತಿಹಾಸಕಾರರು ಸಮಾಜವಾದಿ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದು, ೧೭೫೦ರ ನಂತರದ ಮಾನವ ವ್ಯವಹಾರಗಳಲ್ಲಿನ ಬದಲಾವಣೆಯನ್ನು ವಿವರಿಸುವಲ್ಲಿ; ಕೈಗಾರಿಕಾ ಬಂಡವಾಳಶಾಹಿಯ ಪ್ರಬಲ ಶಕ್ತಿಯ ಸತರ್ಕವನ್ನು (logic) ಮನಗಂಡರು. ಈ ದೃಷ್ಟಿಕೋನವು ಕೇಂದ್ರಿತವಾದುದಾಗಿದೆ.

ಒಂದು ಹಂತದಲ್ಲಿ, ಹತ್ತೊಂಬತ್ತನೆಯ ಶತಮಾನದಲ್ಲಿ ಘಟಿಸಿದ ಮಹತ್ತರವಾದ ಐತಿಹಾಸಿಕ ಬದಲಾವಣೆಯೆಂದರೆ ಅತ್ಯಂತ ಪ್ರಭಾವಶಾಲಿ ಪ್ರಭುತ್ವಗಳು ಮತ್ತು ಸಮಾಜಗಳು ನಗರೀಕೃತ ಕೈಗಾರಿಕೀಕರಣದತ್ತ ವಾಲಿದ್ದು ಎನ್ನುವುದು ವಾಸ್ತವವೇ. ಬರೀ ಪಶ್ಚಿಮದಲ್ಲಿ ಮಾತ್ರವಲ್ಲ, ಏಶಿಯಾ ಮತ್ತು ಆಫ್ರಿಕಾದಲ್ಲೂ ಸಹ ಶ್ರಮವನ್ನು ತಮ್ಮ ಅಧೀನವಾಗಿಸಿಕೊಂಡು ವರಮಾನವನ್ನು ಆದಷ್ಟೂ ಹೆಚ್ಚಿಸಿಕೊಳ್ಳುವ ಬಂಡವಾಳಶಾಹಿತನವೇ ಸಾಮಾಜಿಕ ಬದಲಾವಣೆಯ ನಿಷ್ಠುರ ಶಕ್ತಿಯಾಗಿತ್ತು.

ಎರಿಕ್ ಹಾಬ್ಸ್ಬಾಮ್ (Eric Hobsbawm) ತನ್ನ ನಾಲ್ಕು ಸಂಪುಟಗಳಲ್ಲಿ, ವಿಶೇಷವಾಗಿ The Age of Capitalನಲ್ಲಿ ಇದನ್ನು ಸ್ಪಷ್ಟಪಡಿಸುತ್ತಾನೆ. ಇಂಗ್ಲಿಷ್ ಭಾಷೆಯಲ್ಲಿ ಮುದ್ರಿತವಾಗಿರುವ ಜಾಗತಿಕ ಇತಿಹಾಸದ ಕೃತಿಗಳಲ್ಲೇ ಅತ್ಯಂತ ಸಮರ್ಥವಾಗಿ ಮತ್ತು ಸುಸಂಗತವಾಗಿ ಬರೆಯಲ್ಪಟ್ಟ ಚರಿತ್ರೆ ಇದು. ಆದರೂ, ೨೦೦೨ರಲ್ಲಿ ಹಾಬ್ಸ್ಬಾಮನ ಆತ್ಮಕತೆಯು ಪ್ರಕಟವಾದಾಗ, ಪೆರ್ರಿ ಆ್ಯಂಡರ್ಸನ್ (Perry Anderson) ಹೇಳಿದಂತೆ, ಹತ್ತೊಂಬತ್ತನೆಯ ಶತಮಾನದ ಪ್ರಮುಖ ಬೌದ್ಧಿಕ ಮತ್ತು ರಾಜಕೀಯ ಬೆಳವಣಿಗೆಗಳು; ಅಂತರ್ನಿಹಿತ (underlying) ಕೈಗಾರಿಕಾ ಬಂಡವಾಳದ ಸಾಮರ್ಥ್ಯದ ಬೆಳವಣಿಗೆಯನ್ನು ನೇರವಾಗಿ ಪ್ರತಿಬಿಂಬಿಸುವ ಆ ಕಾಲಮಾನದಲ್ಲಿ ಅನಿವಾರ್ಯತಃ (necessarily) ಘಟಿಸಿದವುಗಳಲ್ಲ. ಆರ್ಥಿಕ ಸ್ವರೂಪಗಳು, ಸಿದ್ಧಾಂತಗಳು ಮತ್ತು ಪ್ರಭುತ್ವಗಳು ಸದಾ ಸಮಕಾಲಿಕವಾಗಿರಲಿಲ್ಲ. ಅವು ಪರಸ್ಪರ ಪ್ರಭಾವವನ್ನು ಬೀರುವ ಪ್ರವೃತ್ತಿಯನ್ನು ಹೊಂದಿದ್ದವು. ಆ ಕಾಲಾವಧಿಯ ಮಹತ್ತರ ರಾಜಕೀಯ ಘಟನೆಯಾದ ಫ್ರೆಂಚ್ ಕ್ರಾಂತಿಯು ಘಟಿಸಿದಾಗ ಬ್ರಿಟನ್ನಿನಲ್ಲಿ ಸಹ ಹೇಳಿಕೊಳ್ಳುವಂತಹ ಕೈಗಾರಿಕೀಕರಣ ನಡೆದಿರಲಿಲ್ಲ. ಅಲ್ಲದೇ, ಈಗ ಕೆಲವು ಇತಿಹಾಸಕಾರರು ಆ ಕ್ರಾಂತಿಯನ್ನು ಮಧ್ಯಮವರ್ಗದ ಗೆಲುವೆಂಬುದಾಗಿ ಗ್ರಹಿಸುತ್ತಾರೆ. ಹಲವಾರು ವಕೀಲರು ಮತ್ತು 'ಸಾಧಾರಣ ಮಟ್ಟದ ಜನರು' (middling people) ಕ್ರಾಂತಿಯಲ್ಲಿ ಭಾಗವಹಿಸಿದ್ದೇನೋ ನಿಜವೇ. ಆದರೆ ಅವರೆಲ್ಲಾ ಪ್ರಾದೇಶಿಕ ಗುಂಪುಗಳ ಮತ್ತು ಶ್ರೀಮಂತವರ್ಗದ ಹಿಂಬಾಲಕರೇ ಹೊರತು, ಮುಮ್ಮೊದಲ (incipient) ಬಂಡವಾಳಶಾಹಿಗಳಾಗಿರಲಿಲ್ಲ. ಬಂಡವಾಳಶಾಹಿಯ ಉಚ್ಛ್ರಾಯ ಸ್ಥಿತಿ ಎಂದು ಹಾಬ್ಸ್ಬಾಮ್ ಗುರುತಿಸುವ ೧೮೭೦ರಲ್ಲಿ ಸಹ ಹೆಚ್ಚಿನ ಸಮಾಜಗಳಲ್ಲಿ ಭೂಮಾಲೀಕರು ಮತ್ತು ಶ್ರೀಮಂತವರ್ಗದವರೇ ಬಲಿಷ್ಠರಾಗಿದ್ದರು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗವನ್ನು 'ಬಂಡವಾಳಶಾಹಿ ಯುಗ' ಎಂದು ಕರೆಯಬಹುದಾದರೂ ಆ ಅವಧಿಯನ್ನು ಬಂಡವಾಳಕ್ಕೇ 'ಸೀಮಿತಗೊಳಿಸಲು' ಸಾಧ್ಯವಾಗುವುದಿಲ್ಲ. ಅದು ಶ್ರೀಮಂತವರ್ಗದವರ, ಭೂಮಾಲೀಕರ ಮತ್ತು ಪುರೋಹಿತಶಾಹಿಗಳ ಯುಗವೇ ಆಗಿದ್ದು, ಪ್ರಪಂಚದ ಹೆಚ್ಚು ಭಾಗದಲ್ಲಿ ರೈತಾಪಿ ಯುಗವಾಗಿತ್ತು.

ಈ ಸಮಸ್ಯೆಗಳ ಹಿನ್ನೆಲೆಯಲ್ಲಿ, ಕೆಲವು ಇತಿಹಾಸಕಾರರು ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ, ಪ್ರಭುತ್ವ ಮತ್ತು 'ಸರ್ಕಾರೀಯತೆಯನ್ನು' (governmentality) ಅದರಲ್ಲೂ ವಿಶೇಷವಾಗಿ ದರ್ಪದಿಂದ ತುಂಬಿದ ಹಾಗೂ ವರ್ಗೀಕರಣನಿರತ ಪಾಶ್ಚಿಮಾತ್ಯ ಶೈಲಿಯ ಪ್ರಭುತ್ವವನ್ನು ತಮ್ಮ ಐತಿಹಾಸಿಕ ನಾಟಕೀಯ ಘಟನಾವಳಿಗಳಲ್ಲಿ; 'ಆದ್ಯ ಪ್ರವರ್ತಕ' (prime mover) ಎಂದು ಕರೆದರು. ಆದರೂ ಇದು, ಸಮಸ್ಯೆಯನ್ನು ವಸ್ತುತಃ ಬಗೆಹರಿಸಲಿಲ್ಲ. ಆಧುನಿಕ ಪ್ರಭುತ್ವದ ಅಸ್ತಿತ್ವವು, ಕಾಲಮಾನದ ಮಹತ್ವದ ಆರ್ಥಿಕ ಬದಲಾವಣೆಗಳಿಂದ ಕಟ್ಟುನಿಟ್ಟಾಗಿ ನಿಷ್ಕರ್ಷಿಸಪಡದಿದ್ದಾಗ್ಯೂ, ಒಂದು ಹಂತದಲ್ಲಿ, ಅವುಗಳೊಂದಿಗೆ ಪ್ರತ್ಯಕ್ಷತಃ ಅನುದ್ದೇಶಿತ ಸಂಬಂಧವನ್ನು ಹೊಂದಿತ್ತು. ಜೊತೆಗೆ, ಪ್ರಭುತ್ವದ ಅಥವಾ ಸರ್ಕಾರೀಯತೆಯ ಉಗಮಕ್ಕೆ ವಿಸ್ತೃತ ಅರ್ಥದಲ್ಲಿ ಒತ್ತು ನೀಡಿದಾಗ್ಯೂ, ನಿಜಕ್ಕೂ, ಆಧುನಿಕ ಪ್ರಭುತ್ವವು ವಿಕಸಿತಗೊಂಡಿದ್ದೇಕೆ ಎನ್ನುವ ಅಂತರ್ನಿಹಿತ ಪ್ರಶ್ನೆಯಂತೂ ಇದ್ದೇ ಇದೆ. ಆ ಯುಗದ ಅತ್ಯಂತ ಹೊಸ ರೀತಿಯ ರಾಜಕೀಯ ಯೋಜನೆಯಾದ ಅಮೆರಿಕಾ ಸಂಯುಕ್ತ ಸಂಸ್ಥಾನವು ೧೮೩೦ರ ತನಕವೂ ಕೈಗಾರೀಕರಣದ ಪ್ರಕ್ರಿಯೆಗೆ ಅಷ್ಟಾಗಿ ಒಡ್ಡಿಕೊಂಡಿರಲಿಲ್ಲ ಹಾಗೂ ಅದರ ರಚನೆ ಮತ್ತು ಸಂವಿಧಾನವು, ಗರ್ವಿಷ್ಟ ಯುರೋಪಿಯನ್ ಪ್ರಭುತ್ವಕ್ಕೆ 'ವಿರುದ್ಧವಾದ' ಯಶಸ್ವಿ ಕ್ರಾಂತಿಯನ್ನು ಪ್ರತಿನಿಧಿಸಿತು ಎನ್ನುವುದನ್ನು ನೆನೆಸಿಕೊಂಡಲ್ಲಿ, ಈ ಒಗಟು ಇನ್ನಷ್ಟು ನಿಗೂಢವಾಗುತ್ತದೆ.

ಇಂತಹ ಆಳವಾದ ಕಾರ್ಯಕಾರಣ ಸಂಬಂಧದ ವಿಷಯಗಳನ್ನು ಚರ್ಚಿಸುವುದು ಈ ಕೃತಿಯ ಮೂಲ ಉದ್ದೇಶವಲ್ಲ. ಆದಾಗ್ಯೂ, ಯಾವುದೇ ಜಾಗತಿಕ ಇತಿಹಾಸವು; ರಾಜಕೀಯ ಸಂರಚನೆ, ರಾಜಕೀಯ ವಿಚಾರಗಳು, ಹಾಗೂ ಆರ್ಥಿಕ ಚಟುವಟಿಕೆಗಳ ನಡುವೆ ಹೆಚ್ಚು ಸಂಕೀರ್ಣ ಅಂತಃಕ್ರಿಯೆಯತ್ತ ಗಮನಹರಿಸಬೇಕಾಗುತ್ತದೆ ಎಂಬುದನ್ನು ಈ ಕೃತಿಯು ಸೂಚಿಸಬಯಸುತ್ತದೆ. ತರ್ಕದ ನಿಟ್ಟಿನಲ್ಲಿ, ಆರ್ಥಿಕ ಸ್ವರೂಪವು ನಿಶ್ಚಯವಾಗಿಯೂ ಅತ್ಯವಶ್ಯಕ ಪಾತ್ರವನ್ನುಳಿಸಿಕೊಳ್ಳುತ್ತದೆ. ಪೂರ್ಣ-ಪ್ರಮಾಣದ ಕೈಗಾರಿಕೀಕರಣಕ್ಕೂ ಮುಂಚೆಯೇ ತೀವ್ರಗೊಳ್ಳುತ್ತಿದ್ದ ಸ್ಥಳೀಯ ಆರ್ಥಿಕತೆಯ ಸ್ವರೂಪಗಳು ಬದಲಾವಣೆಗಳನ್ನು ನಿರ್ದೇಶಿಸುವ ಚಾಲಕಶಕ್ತಿಗಳಾಗಿದ್ದವು. ಅಧ್ಯಾಯ ೨ರಲ್ಲಿ ಆರ್ಥಿಕ ಇತಿಹಾಸಕಾರ ಯನ್ ದೆ ವ್ರೀಸ್ (Jan de Vries) ಅವರ 'ಶ್ರಮಶೀಲ ಕ್ರಾಂತಿ' (industrious revolution) ಎಂಬ ಪರಿಕಲ್ಪನೆಯನ್ನು ಜಗತ್ತಿನಾದ್ಯಂತ ಕೊನೇ ಪಕ್ಷ ೧೬೫೦ರ ಹೊತ್ತಿಗೆ ತೀವ್ರವಾಗುತ್ತಿದ್ದ ಹಲವಾರು ಆರ್ಥಿಕ ಸ್ವರೂಪಗಳನ್ನು ಗುರುತಿಸಲು ಫಲಪ್ರದವಾಗಿ ವಿಸ್ತೃತಗೊಳಿಸಬಹುದು.

ಹದಿನೆಂಟನೆಯ ಶತಮಾನದುದ್ದಕ್ಕೂ 'ಶ್ರಮಶೀಲ ಕ್ರಾಂತಿಗಳು' ವಿಭಿನ್ನ ನೆಲೆಗಳಲ್ಲಿ ಸಮಾಜದ ಪುನರ್ರಚನೆಯನ್ನು ಮುಂದುವರಿಸಿದ್ದವು. ದಕ್ಷಿಣ ಚೀನಾದಿಂದ ಹಿಡಿದು ಮೆಸ್ಸ್ಯಾಚುಸೆಟ್ಸ್‌ವರೆಗೂ ಬಂಡವಾಳ ಮತ್ತು ಶ್ರಮವನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳಲಾಗುತ್ತಿತ್ತು.. ಸಣ್ಣ ಪ್ರಮಾಣದ ತಾಂತ್ರಿಕ ಆವಿಷ್ಕಾರಗಳು; ಸರಕುಗಳ ವಿತರಣೆಯಲ್ಲಿನ ಹಾಗೂ ಜನರ ವಸ್ತುಗತ ಅಭ್ಯಾಸಗಳ ಮಾರ್ಪಾಡುಗಳಿಗೆ ತಾಳೆಯಾಗಹತ್ತಿದ್ದವು. ಬೇಸಾಯಗಾರ ಕುಟುಂಬಗಳು ಸಮೃದ್ಧ ಕೃಷಿಕ ಕುಟುಂಬಗಳಾದವು. ಸಣ್ಣಪುಟ್ಟ ಅಂಗಡಿಗಳ ಮಾಲೀಕರು ಆ್ಯಮ್ಸ್ಟರ್ಡ್ಯಾಮ್ (Amsterdam), ಮಲಾಕ (Malacca) ಮತ್ತು ಫೆಜ್‌ಗಳಲ್ಲಿ (Fez) ನಗರೀಯ ಮಧ್ಯಮವರ್ಗದವರೆನಿಸಿ, ಉತ್ತಮ ಗುಣಮಟ್ಟದ ಊಟ, ಬಟ್ಟೆಬರೆ, ಹೆಚ್ಚಿನ ಗೌರವ ಮತ್ತು ಸ್ಥಾನಮಾನಗಳನ್ನು ಬಯಸಲಾರಂಭಿಸಿದರು.

ಈ ಕೃತಿಯಲ್ಲಿ ಶ್ರಮಶೀಲ ಕ್ರಾಂತಿಗಳ ಮಹತ್ವಕ್ಕೆ ಒತ್ತು ನೀಡಿದ್ದಾಗ್ಯೂ, ಚಾರಿತ್ರಿಕ ಕಾರಣತತ್ವದ ನೆಲೆಯಲ್ಲಿ ಇನ್ನೊಂದು ರೀತಿಯ ಆರ್ಥಿಕ ಚಾಲಕಶಕ್ತಿಗಳಿಗೆ ಅನಿವಾರ್ಯತಃ ಆದ್ಯತೆಯನ್ನು ನೀಡಲಾಗಿದೆ ಎಂದೇನೂ ಅಲ್ಲ. ಶ್ರಮಶೀಲ ಕ್ರಾಂತಿಗಳು ವಸ್ತುಗತ ಸಾಮಗ್ರಿಶಕ್ತಿಗಳ ವಿತರಣೆಯಲ್ಲಿನ ಕೇವಲ ಭಾವಶೂನ್ಯ ಬದಲಾವಣೆಗಳಲ್ಲ. ಇಂದಿನ ಪರಿಭಾಷೆಯಲ್ಲಿ ಹೇಳುವುದಾದರೆ, ಅವು ತರ್ಕದ [(discourse) - ಟಿಪ್ಪಣಿ ನೋಡಿ] ನೆಲೆಯಲ್ಲಿ ನಡೆದಂತಹ ಕ್ರಾಂತಿಗಳು. ಆಳುವ ವರ್ಗಗಳ ಆಶಯಗಳು ಮತ್ತು ಬದುಕಿನ ಕ್ರಮಗಳ ಮಾಹಿತಿಯು ಅದಾಗಲೇ ವೇಗವಾಗಿ ಹರಡುತ್ತಿದ್ದುದರಿಂದ, ಜನರ ಆಸೆ ಆಕಾಂಕ್ಷೆಗಳ ವ್ಯಾಪ್ತಿಗಳಲ್ಲೂ ಬದಲಾವಣೆಗಳು ಕಾಣಿಸಿಕೊಳ್ಳಲಾರಂಭಿಸಿದ್ದವು. ತಮ್ಮನ್ನು ಹೆಚ್ಚು ಮನೋಹರ ಹಾಗೂ ಉತ್ತೇಜಕವಾಗಿ ಪ್ರತಿಬಿಂಬಿಸುತ್ತಿದ್ದ ರಾಜಾಸ್ಥಾನಗಳ ಉಪಭೋಗಗಳನ್ನು ಮಧ್ಯಮವರ್ಗೀಯ ಜನರು ಅನುಸರಿಸಬಯಸಿದರು. ಅಂಗಡಿಮುಂಗಟ್ಟುದಾರರನ್ನು ಸಬಲರನ್ನಾಗಿಸಿದ ಈ ಮೊದಲಿನ ಸಂಕಲ್ಪನಾತ್ಮಕ ಬದಲಾವಣೆಗಳ ಸಮುಚ್ಚಯವು ದುಡಿಮೆಗೆ ಹೊಸ ಬೇಡಿಕೆಗಳನ್ನು ಸೃಷ್ಟಿಸಿ, ವರ್ತಕರನ್ನು ಸುಖಭೋಗದ ಸಾಧನಗಳ ತಲಾಶಿಯಲ್ಲಿ ಸಾಗರಗಳಾದ್ಯಂತ ರವಾನಿಸಿತು. ಹೊಸ ಹಾಗೂ ಹೆಚ್ಚು ಆಕ್ರಮಣಕಾರಿ ಪ್ರಭುತ್ವಗಳು, ವಿಶೇಷವಾಗಿ ಪಶ್ಚಿಮ ಯುರೋಪಿನಲ್ಲಿ, ಈ ಬದಲಾವಣೆಗಳ ಲಾಭವನ್ನು ಪಡೆದು, ಶ್ರಮಶೀಲ ಕ್ರಾಂತಿಗಳನ್ನು ಜಗತ್ತಿನಾದ್ಯಂತ ಸಶಸ್ತ್ರ ಹಡಗು ಸಾಗಣೆ ಹಾಗೂ ಏಕಸ್ವಾಮ್ಯ ಕಂಪೆನಿಗಳೊಂದಿಗೆ ಸಂಪರ್ಕಿಸಲು ಪ್ರಾರಂಭಿಸಿದವು. ಕೆರೀಬಿಯನ್ ದ್ವೀಪಗಳಲ್ಲಿ ಬಲಾತ್ಕಾರದಿಂದ ಹೇರಲ್ಪಟ್ಟ ಗುಲಾಮ ಪದ್ಧತಿಯು ಶ್ರಮಶೀಲ ಕ್ರಾಂತಿಯ ಒಂದು ಆತ್ಯಂತಿಕ ಉದಾಹರಣೆಯನ್ನು ಪ್ರತಿನಿಧಿಸುತ್ತದೆ.

ಈ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಅಸಮಾನ ಹಾಗೂ ಅಸ್ಥಿರವಾಗಿದ್ದವು. ಅವು ಸಮುದಾಯಗಳು ಹಾಗೂ ವಿವಿಧ ಸಮಾಜಗಳ ನಡುವೆ ತಾರತಮ್ಯವನ್ನು ಸೃಷ್ಟಿಸಿ, ನೆರೆಹೊರೆಯಲ್ಲಿ ಸಂಪತ್ತಿನ ದಾಹ, ಮತ್ಸರ, ಮತ್ತು ಅಪನಂಬಿಕೆಗಳಿಗೆ ಹಾದಿ ಮಾಡಿಕೊಟ್ಟು ಕಡಲಾಚೆಯ ಯುದ್ಧಗಳಿಗೆ, ಅಸಮ ತೆರಿಗೆ ಪದ್ಧತಿಗಳಿಗೆ, ಸಾಮಾಜಿಕ ತಲ್ಲಣಗಳಿಗೆ ಹಾಗೂ ಸ್ಥಾಪಿತ ಅಧಿಕಾರ, ಅರಸೊತ್ತಿಗೆ ಮತ್ತು ಧಾರ್ಮಿಕತೆಗಳನ್ನು ಪ್ರಶ್ನಿಸುವುದಕ್ಕೆ ಎಡೆಮಾಡಿಕೊಟ್ಟವು. ಪ್ರಕ್ಷುಬ್ಧತೆಯು

ವಿಶ್ವವ್ಯಾಪಿಯಾಗಿತ್ತು. ಮಧ್ಯ ಅರೇಬಿಯಾದ ತತ್ತ್ವ ಶಾಸ್ತ್ರಜ್ಞರು ಮತ್ತು ಧಾರ್ಮಿಕ ಬೋಧಕರಿಬ್ಬರೂ ನೂತನ ಸಂಪರ್ಕಗಳು ಮತ್ತು ತಾವು ಹಿಡಿತವನ್ನು ಸಡಿಸಿಲಿದ್ದ ಬಂಡಾಯಗಳ ಪರಿಣಾಮವನ್ನು ಅನುಭವಿಸಿದರು. ಈ ಹಿನ್ನೆಲೆಯಲ್ಲಿ ಜಗತ್ತಿನಾದ್ಯಂತ ೧೭೨೦ ಮತ್ತು ೧೮೨೦ರ ನಡುವೆ, ಅದರಲ್ಲೂ ೧೭೮೦ರ ನಂತರ ನಡೆದ ಹಲವಾರು ಸ್ಥಳೀಕೃತ ಸಂಘರ್ಷಗಳು ನಿಯಂತ್ರಣ ತಪ್ಪಿದವು. ಆಕ್ರಮಣಶೀಲ ಫ್ರೆಂಚ್ ಕ್ರಾಂತಿಕಾರಿ ಪ್ರಭುತ್ವವೂ ಸಹ ಹಲವಾರು ಉಗ್ರ ವೈರಿಗಳನ್ನು ಹುಟ್ಟುಹಾಕಿಕೊಂಡಿತ್ತು. ಯುರೋಪಿಯನ್ ಪ್ರಭುತ್ವ ಮತ್ತದರ ವಸಾಹತಿನ ಉಪಶಾಖೆಗಳು ಹಾಗೂ ಅಕ್ಕಪಕ್ಕದ ಅ-ಯುರೋಪೀಯ ಪ್ರಭುತ್ವಗಳು; ವಿಶೇಷವಾಗಿ ಒಟೋಮನ್, ಚೀನೀ ಮತ್ತು ಟೊಕೋಗವ ಜಪಾನ್ ಸಾಮ್ರಾಜ್ಯಗಳು ತಮ್ಮ ಮಹತ್ವಾಕಾಂಕ್ಷೆಯ ಪ್ರಮಾಣವನ್ನು ವಿಸ್ತರಿಸುವ ಅನಿವಾರ್ಯಕ್ಕೆ ಒಳಗಾಗಿದ್ದವು. ಈ ಪ್ರಭುತ್ವಗಳ ನಾಯಕರು, ಇಲ್ಲಿಯವರೆಗೆ ಸ್ವಾಧೀನದಲ್ಲಿದ್ದ ಸಮಾಜದ ವಲಯಗಳ ಒಳಹೊಕ್ಕು, ಹೊಸ ವಿಚಾರಧಾರೆಗಳನ್ನು ಯಥೋಚಿತಗೊಳಿಸುವುದಲ್ಲದೆ ಅವನ್ನು ಮಾರ್ಪಡಿಸಬೇಕಿತ್ತು.

ಕ್ರಾಂತಿಯುಗದ ರಾಜಕೀಯ ಮತ್ತು ಸೈದ್ಧಾಂತಿಕ ಬದಲಾವಣೆಗಳನ್ನು; ಹಿಂದಿನ ಆಳ್ವಿಕೆಯ ಅಸಾಂಗತ್ಯ ಮತ್ತು ಸಂಘರ್ಷಗಳ ಆಧಾರದಲ್ಲಿ ಅಥವಾ ಅಂತಿಮವಾಗಿ, ಕೇವಲ ಬಂಡವಾಳದ ಬೆಳವಣಿಗೆಯ ನಿಟ್ಟಿನಲ್ಲಿ, ಮುಂಚೆಯೇ ಊಹಿಸಲು ಅಸಾಧ್ಯವಾಗಿದ್ದು, ಅವು "ಅನರ್ಥಕಾರಿಯಾಗಿದ್ದವು." ಬಿಕ್ಕಟ್ಟಿನಿಂದ  ಹುಟ್ಟಿದ ಹೊಸ ಸಿದ್ಧಾಂತಗಳಿಂದ ಶಕ್ತಿಯುತವಾಗಿದ್ದ ಪ್ರಭುತ್ವಕ್ಕೆ ಒಂದು ರೀತಿಯ ಆನೆಕಾಲುರೋಗ ತಗುಲಿಕೊಂಡಂತಿತ್ತು. ಇದರಿಂದ, ಗಣ್ಯರು ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದುದ್ದಕ್ಕೂ ಸುಸ್ಥಿತಿ ಮತ್ತು ನ್ಯಾಯಬದ್ಧತೆಗೆ ಸಂಬಂಧಪಟ್ಟ ಸಮಸ್ಯೆಗಳೊಂದಿಗೆ ಗುದ್ದಾಡುವಂತಾಯಿತು. ಜಗತ್ತಿನ ಹೆಚ್ಚಿನ ಭಾಗದಲ್ಲಿ ಆರ್ಥಿಕ ಸಮರೂಪತೆಗಳು ಅಸ್ತಿತ್ವಕ್ಕೆ ಬರುವ ಮುಂಚೆಯೇ ಸೈದ್ಧಾಂತಿಕ ಮತ್ತು ರಾಜಕೀಯ ಸಂಘರ್ಷವು ಜಾಗತಿಕ ಪ್ರಮಾಣಕ್ಕೇರಿತ್ತು. ಹಾಗಾಗಿ, ಬಂಡವಾಳದ ಬೆಳವಣಿಗೆಯೇ ಪಲ್ಲಟಗಳನ್ನು ಉಂಟುಮಾಡಿದ ಏಕಮಾತ್ರ ಶಕ್ತಿಯಲ್ಲ. ಅಧಿಕಾರ, ಸ್ವಾಮ್ಯ, ನ್ಯಾಯ ಮತ್ತು ಪವಿತ್ರತೆಗಳ ನಿಟ್ಟಿನ ವಿಸ್ತೃತ ಆಕಾಂಕ್ಷೆಗಳಿಂದ ಈಗಾಗಲೇ ಸೃಜಿಸಲ್ಪಟ್ಟ ಸಾಮಾಜಿಕ ಪರಿಸರದಲ್ಲಿ ಅದು ಪ್ರಸರಿಸಲ್ಪಟ್ಟಿತು.

ಈಗ ಅಡೆತಡೆಯಿಲ್ಲದೇ ಬೆಳೆದಂತೆ ಕಾಣುವ ಕೈಗಾರಿಕೀಕರಣದೆಡೆಗಿನ ಪಲ್ಲಟವು ಜಾಗತಿಕ ಹಂತದಲ್ಲಿ ಅಲ್ಲಲ್ಲಿ ಹಾಕಿದ ತೇಪೆಯ ಮಾದರಿಯಲ್ಲಿ ಪ್ರಾರಂಭಗೊಂಡದ್ದು, ಸುಮಾರು ೧೮೪೦ರ ನಂತರವೇ. ಅದು, ಮತ್ತೊಂದು ಬಿಕ್ಕಟ್ಟುಗಳ ಸರಣಿಯಲ್ಲಿ ಜಾಗತಿಕ ವ್ಯವಸ್ಥೆಯು ನಲುಗುತ್ತಿದ್ದ ಕಾಲವೂ ಹೌದು. ಆ ಬಿಕ್ಕಟ್ಟುಗಳೆಂದರೆ: ಯುರೋಪಿನ ೧೮೪೮ರ ಕ್ರಾಂತಿಗಳು, ಏಶಿಯಾದ ಮಹಾ ದಂಗೆಗಳು ಮತ್ತು ಅಮೆರಿಕಾದಲ್ಲಿನ ಆಂತರಿಕ ಯುದ್ಧ. ಆಳುವ ವರ್ಗಗಳು ಸಾಮಾಜಿಕ ಸುಸ್ಥಿತಿಯನ್ನು ಸ್ಥಿರೀಕರಿಸುವ ಪ್ರಯತ್ನದಲ್ಲಿ ಕೈಗಾರಿಕೀಕರಣಕ್ಕೆ ಬೆಂಬಲ ಕೊಡುತ್ತಿದ್ದವು ಅಥವಾ ಕನಿಷ್ಠ ಪಕ್ಷ ಅದಕ್ಕೊಂದು ಚೌಕಟ್ಟನ್ನು ಒದಗಿಸಲು ಪ್ರಯತ್ನಿಸುತ್ತಿದ್ದವು. ಕೈಗಾರಿಕೀಕರಣವು ಪ್ರಭುತ್ವಕ್ಕೆ ಹೊಸ ಸಂಪನ್ಮೂಲಗಳನ್ನು ಮತ್ತು ಸೈನ್ಯಗಳಿಗೆ ಹೊಸ ಆಯುಧಗಳನ್ನು ಒದಗಿಸುತ್ತಿತ್ತು. ಹಾಬ್ಸ್ಬಾಮ್ ಊಹಿಸಿದಂತೆ, ೧೮೭೦ರ ದಶಕದ ಹೊತ್ತಿಗೆ ಬಂಡವಾಳಯುಗ ಪ್ರಾರಂಭವಾಗಿತ್ತು. ಆದರೂ ಬಂಡವಾಳದ ಮಂದಿ, ತಮ್ಮ ಸ್ಥಾನಮಾನ ಹಾಗೂ ಗೌರವಾರ್ಹತೆಗಳನ್ನು ಪಡೆಯಲು; ರಾಜರು, ಕುಲೀನರು, ಭೂ ಮಾಲೀಕರು ಮತ್ತು ಹೊಸ ಹಾಗೂ ವಾಸ್ತವಿಕ ದೃಷ್ಟಿಯ ರಾಷ್ಟ್ರ-ಪ್ರಭುತ್ವದ ಕಾರ್ಯಾಲಯಗಳಲ್ಲಿ ಕರ್ಮಚಾರಿಗಳಾಗಿದ್ದ ನೌಕರಶಾಹಿಗಳೊಂದಿಗೆ ಪ್ರಭಾವವನ್ನು ಹಂಚಿಕೊಳ್ಳಬೇಕಿತ್ತು. ಅಧ್ಯಾಯ ೯ ಮತ್ತು ೧೧ರಲ್ಲಿ ವ್ಯಕ್ತಪಡಿಸಿರುವಂತೆ, ಬಂಡವಾಳಯುಗವು ಶ್ರೇಣಿಕೃತ ವ್ಯವಸ್ಥೆಯನ್ನು ಶಾಶ್ವತಗೊಳಿಸಿದ ಕಾಲವಷ್ಟೇ ಅಲ್ಲದೆ, ಧರ್ಮಗಳು ಹೆಚ್ಚು ಸಶಕ್ತಗೊಂಡು, ವಿಶೇಷ ಗಮನವನ್ನು ಅಪೇಕ್ಷಿಸತೊಡಗಿದ ಕಾಲವೂ ಹೌದು.

ಹೆಚ್ಚು ವಿಸ್ತೃತ ಅರ್ಥದಲ್ಲಿ ಹೇಳುವುದಾದರೆ; ಆರ್ಥಿಕ ಬದಲಾವಣೆಗಳು, ಸೈದ್ಧಾಂತಿಕ ಸೃಜನೆಗಳು, ಹಾಗೂ ಪ್ರಭುತ್ವದ ಕ್ರಿಯಾವಿಧಿಗಳಿಂದ ಸಂಘಟಿಸಲ್ಪಟ್ಟ ಸಂಕೀರ್ಣ ಸಮಾಂತರರೇಖಿ ಶಕ್ತಿಗಳಿಂದ ಚಾರಿತ್ರಿಕ ಬೆಳವಣಿಗೆಗಳು ನಿಷ್ಕರ್ಷಿಸಲ್ಪಟ್ಟವು. ಜಗತ್ತಿನ ಆರ್ಥಿಕತೆಯಲ್ಲಿನ ಬೆಳವಣಿಗೆಗಳು; ಸೈದ್ಧಾಂತಿಕ ಹಾಗೂ ರಾಜಕೀಯ ಸಂರಚನೆಗೂ ಮೊದಲೇ ಘಟಿಸಿದವೆಂಬ  ಸರಳೀಕೃತ ಗ್ರಹಿಕೆ ವಸ್ತುತಃ ಸರಿಯಲ್ಲ. ಈ ಕ್ಷೇತ್ರಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಾಗೂ

ಬೇರೆ ಬೇರೆ ಪ್ರಮಾಣದಲ್ಲಿ ಪರಸ್ಪರ ಒಳಹೊಕ್ಕು, ಪ್ರಭಾವಿಸಿಕೊಂಡಿವೆ. ಕೆಲವು ಕಾಲಘಟ್ಟಗಳಲ್ಲಿ ಪ್ರಭುತ್ವ ಹಾಗೂ ಜನರು ಅದರ ಬಗ್ಗೆ ಸೃಷ್ಟಿಸಿದ ಕಥಾನಕಗಳು ಚಾರಿತ್ರಿಕ ಬದಲಾವಣೆಯ ಹಿಂದಿನ 'ಸಂಚಾಲಕವೆನಿಸಿದ್ದವು. ೧೮೧೫ ಮತ್ತು ೧೮೫೦ರ ನಡುವಿನ ಅವಧಿಯಂತಹ ನಿರಂತರ ಪರಿವರ್ತನೆ ಹಾಗೂ ಅಸ್ಥಿರತೆಯ ಕಾಲಘಟ್ಟಗಳೂ ಇವೆ. ಅಲ್ಲದೇ, ಮಹತ್ವಪೂರ್ಣ ಆರ್ಥಿಕ ಪುನರ್ರಚನಾ ಪ್ರಯತ್ನಗಳು ಒಟ್ಟುಗೂಡಿ, ಸರಕಾರೀಯತೆಯ ದಿಕ್ಕು ಮತ್ತು ಅದರ ಸಿದ್ಧಾಂತಗಳನ್ನು ನಿಷ್ಕರ್ಷಿಸಿದ ಕಾಲಮಾನಗಳನ್ನೂ ಕಾಣಬಹುದಾಗಿದೆ. ಕಾಲಾಂತರದಲ್ಲಿ; ಇದರಲ್ಲಿ ಭಿನ್ನತೆಗಳು ಕಾಣಿಸಿಕೊಂಡ ಕಾರಣ, ಖಂಡಗಳಾದ್ಯಂತ ಈ ಅಂಶಗಳಲ್ಲಿನ ಸಮತೋಲನವು ಸಮಾಜದಿಂದ ಸಮಾಜಕ್ಕೆ ವಿದ್ರುಶಗೊಂಡಿತು (differ).

**ಎರಡನೆಯ ಸಮಸ್ಯೆ: ಜಾಗತಿಕ ಇತಿಹಾಸ ಮತ್ತು 'ಆಧುನಿಕೋತ್ತರವಾದ' (Postmodernism)**

ಇತ್ತೀಚೆಗೆ ಪ್ರಾಮುಖ್ಯತೆ ಪಡೆದಿರುವ ಕೆಲವು ಇತಿಹಾಸಕಾರರು, ಈ ನಿಟ್ಟಿನಲ್ಲಿ ಆಲೋಚಿಸದೆ; ಬಂಡವಾಳ, ಪ್ರಭುತ್ವ, ಸೈದ್ಧಾಂತಿಕ ಬದಲಾವಣೆಯ 'ಬೃಹತ್ ಕಥಾನಕಗಳೆಲ್ಲವನ್ನೂ' ತಿರಸ್ಕರಿಸಿದ ಕಾರಣ, ಜಾಗತಿಕ ಚರಿತ್ರೆಯನ್ನು ಬರೆಯುವಾಗಿನ ಎರಡನೆಯ ಸಮಸ್ಯೆಯು ಉದ್ಭವಿಸಿದೆ. ಸುಮಾರು ೧೯೮೦ರ ನಂತರದಲ್ಲಿ, ಕೆಲವು ಇತಿಹಾಸಕಾರರು 'ಆಧುನಿಕೋತ್ತರವಾದಿ (postmodernist)' ಅಥವಾ 'ವಸಾಹತೋತ್ತರ (postcolonial)' ಎಂಬ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದಾರೆ. ವಿಸ್ತೃತ ತುಲನಾತ್ಮಕ ಇತಿಹಾಸಗಳು, ಅಥವಾ ಬೃಹತ್-ಕಥಾನಕಗಳಿಗೆ ಇವರು ವಿರುದ್ಧವಾಗಿದ್ದು; ತಾವು ನಿರೂಪಿಸಲಿಚ್ಛಿಸುವ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಪ್ರಕ್ರಿಯೆಗಳೊಂದಿಗೆ ಇವು ಶಾಮೀಲಾಗಿವೆಯೆಂಬ (complicit) ತರ್ಕವನ್ನು ಮಂಡಿಸುತ್ತಾರೆ. ಮೇಲೆ ವಿವರಿಸಿದ ಪ್ರಭುತ್ವ ಅಥವಾ ಬಂಡವಾಳದ ಆಖ್ಯಾನಗಳು, ಅಂತಹ ಬರಹಗಾರರ ಎರಡು ಆಪಾದನೆಗಳಿಗೆ ಗುರಿಯಾಗಬಲ್ಲವು. ಅದಕ್ಕೆ ಬದಲಾಗಿ, ಈ ಶೈಲಿಯಲ್ಲಿ ಬರೆಯುವ ಚರಿತ್ರಕಾರರು ನಿರ್ಬಲ ಜನಸಮುದಾಯಗಳ 'ವಿಕೇಂದ್ರಿತ' (decentered) ಆಖ್ಯಾನಗಳ ಪುನಃಪ್ರಾಪ್ತಿಗೆ (recover) ಪ್ರಯತ್ನಿಸುತ್ತಾರೆ. ಈ ನಿರ್ಬಲಗೊಳಿಸಲ್ಪಟ್ಟ ಜನರು ಅಂದಿನ ರಾಜಕೀಯ ಭಾಷಣಗಳನ್ನು ಮತ್ತು ಸರ್ಕಾರಿ ವರದಿಗಳನ್ನು ಬರೆದ ಯುರೋಪಿಯನ್ ಮತ್ತು ಅಮೆರಿಕನ್ ಪುರುಷ ಬಂಡವಾಳಶಾಹಿಗಳ ಅಧೀನಕ್ಕೆ ಒಳಗಾದವರು. ಹಾಗಾಗಿ, ಅವರ ದನಿಗಳನ್ನು ಜಾಗತಿಕ ಇತಿಹಾಸದಂತಹ ಬೃಹತ್ ಕಥಾನಕಗಳಲ್ಲಿ ನಂತರದ ಇತಿಹಾಸಕಾರರಿಂದ ವ್ಯವಸ್ಥಿತವಾಗಿ ದಮನಿಸಲಾಗಿದೆ. ಕೆಲವು ಇತಿಹಾಸದ ಬರವಣಿಗೆಯಲ್ಲಿನ ಈ ಆಧುನಿಕೋತ್ತರ ತಿರುವು, ಒಂದು ರೀತಿಯ ಬಿಕ್ಕಟ್ಟಿನ ಹರವನ್ನು ಸೃಷ್ಟಿಸಿದೆ. 'ಜಾಗತೀಕರಣವು' ಇಂದಿನ ಅತ್ಯಂತ ಷೋಕಿಯ ಪರಿಕಲ್ಪನೆಯೆನಿಸಿದ್ದು; ಜಾಗತಿಕ ಇತಿಹಾಸಗಳಿಗೆ ಶೈಕ್ಷಣಿಕ ಹಾಗೂ ಜನಪ್ರಿಯ ವಲಯಗಳ ಬೇಡಿಕೆಯು ಅತ್ಯಂತ ವ್ಯಾಪಕವಾಗುತ್ತಿದೆ. ಆದರೂ ಜಾಗತಿಕ ಇತಿಹಾಸದ ಬರವಣಿಗೆಯಲ್ಲಿರುವ ಕೆಲವು ಮೂಲಭೂತ ನಿಲುವುಗಳು ಮನುಷ್ಯರ ಅನುಭವವನ್ನು ಸಮರೂಪೀಕರಣಕ್ಕೆ ಒಳಪಡಿಸುತ್ತವೆಂದೂ, "ಅಧೀನ ಸಮುದಾಯಗಳ ಚರಿತ್ರೆಯನ್ನು" ಕಡೆಗಣಿಸಲಾಗಿದೆಯೆಂದು ಆಧುನಿಕೋತ್ತರರು ಕಟುವಾಗಿ ಟೀಕಿಸುತ್ತಾರೆ.

ಮಾನವಿಕ ವಿಜ್ಞಾನಗಳೆಲ್ಲವೂ ಒಂದೇ ವಿಧಾನವನ್ನೇಕೆ ಅನುಸರಿಸಬೇಕೆಂಬುದಕ್ಕೆ ಯಾವುದೇ ಕಾರಣವಿಲ್ಲ. ಈ ರೀತಿಯ ವಿವಾದಗಳು ಗುಣಾತ್ಮಕವಾಗಿಯೂ ಇರಬಲ್ಲವು. 'ನಡೆದದ್ದು ಹೀಗೆ' ಎಂದು ಹೇಳಿದಾಗ, 'ಯಾರ ಪ್ರಕಾರ?' 'ಏನದರ ಅರ್ಥ' ಎಂಬ ಪ್ರಶ್ನೆಗಳಿಂದ ಅದು ಸವಾಲನ್ನು ಎದುರಿಸಿದಾಗ, ವಿಭಿನ್ನ ರೀತಿಯ ಚಾರಿತ್ರಿಕ ಬರವಣಿಗೆಯ ಪುಸ್ತಕಗಳು ಒಂದೇ ಕಪಾಟಿನಲ್ಲಿ ಕಾಣಸಿಕ್ಕಾಗ ಚರಿತ್ರೆಯು ಸದಾ ವಿಕಸಿತಗೊಂಡಿದೆ. ೧೯೬೦ ಮತ್ತು ೮೦ರ ದಶಕಗಳಲ್ಲಿ ಇನ್ನೂ ಪ್ರಬಲವಾಗಿದ್ದ ಮಾರ್ಕ್ಸಿಸ್ಟ್ ಚಿಂತಕರನ್ನು ಯುರೋಪು ಮತ್ತು ಉತ್ತರ ಅಮೆರಿಕಾದ ನವ-ಸಂಪ್ರದಾಯವಾದಿ ಇತಿಹಾಸಕಾರರು ಪ್ರಶ್ನಿಸಿದ್ದನ್ನು ಗಮನಿಸಿದಾಗ ಇದು ನಿಜವೆಂದು ಹೇಳಬಹುದು. ಒಂದಂತೂ ನಿಜ. ಬಡವರು, ಅಧೀನಸ್ಥ ಹೆಣ್ಣು ಅಥವಾ 'ದೇಶವಾಸಿಯ' (native) ನಿರ್ದಿಷ್ಟ ಅನುಭವಗಳ ಬಗ್ಗೆ ಬರೆವಾಗಲೂ ಸಹ, ಆಧುನಿಕೋತ್ತರ ಅಥವಾ ವಸಾಹತೋತ್ತರ ಚರಿತ್ರಕಾರರು ಪ್ರಭುತ್ವ, ಧರ್ಮ, ವಸಾಹತುಶಾಹಿ ನೀತಿ, ಎಲ್ಲ ವಿಸ್ತೃತ ಪ್ರತ್ಯಕ್ಷ ವಿಷಯಗಳು ಹಾಗೂ

ಕೆಲವೊಮ್ಮೆ ಇಂತಹ ವರದಿಗಳಲ್ಲಿ ಹಾಗೆಂದು ಭಾವಿಸಲಾಗಿರುವುದನ್ನು ಸತತವಾಗಿ ಪ್ರಸ್ತಾಪಿಸುತ್ತಾರೆ. ಹಾಗಾಗಿ, ಆಧುನಿಕೋತ್ತರ ಕೃತಿಗಳು ತಮ್ಮ ಮೂಲ (origin) ಮತ್ತು ನಿಹಿತಾರ್ಥದಲ್ಲಿ (implication) ರಾಜನೀತಿಕ (political) ಮತ್ತು ನೀತಿಪೂರ್ಣವಾಗಿರುವ ತಮ್ಮದೇ ಆದ ಅಂತರ್ನಿಹಿತ 'ಬೃಹತ್ ಕಥನಗಳನ್ನು' ಸಾಮಾನ್ಯವಾಗಿ ಮರೆಮಾಚುತ್ತವೆ. ಉದಾಹರಣೆಗೆ, ಏಕಾತ್ಮಕ ಪ್ರಭುತ್ವ, ಪುರುಷಪ್ರಾಧಾನ್ಯತೆ, ಅಥವಾ ಪಶ್ಚಿಮದ ಜ್ಞಾನೋದಯದ ವಿಚಾರವಾದದಂತಹ (enlightenment rationalism) ಪ್ರಾಬಲ್ಯದ ಚಾರಿತ್ರಿಕ ಚಾಲಕಶಕ್ತಿಗಳು ಅಷ್ಟು ಪ್ರಬಲವಾಗಿಲ್ಲದಿದ್ದಲ್ಲಿ, ಪ್ರಪಂಚವು ಉತ್ತಮವಾಗಿ ವಿಕಸನಗೊಳ್ಳಬಹುದಿತ್ತು ಎಂಬುದಾಗಿ ಈ ಬಹುತೇಕ ಎಣಿಕೆಗಳು (accounts) ಭಾವಿಸಿದಂತೆ ತೋರುತ್ತದೆ. ಹಾಗೆ ನೋಡಿದರೆ, 'ತುಣುಕಿನ' (fragment) ಇತಿಹಾಸವೂ ಸೇರಿದಂತೆ, ಎಲ್ಲ ಇತಿಹಾಸಗಳೂ ನಿಸ್ಸಂದೇಹವಾಗಿಯೂ ಸಾರ್ವತ್ರಿಕ (universal) ಇತಿಹಾಸಗಳೇ. ಜಾಗತಿಕ ಇತಿಹಾಸದ ಬರವಣಿಗೆಯು, ಸುಲಭವಾಗಿ ಕಾಣಿಸದ ಹಲವಾರು ಬೃಹತ್ ಕಥಾನಕಗಳನ್ನು ಹೆಕ್ಕಿ ತೆಗೆಯುವಲ್ಲಿ ಸಹಾಯಕವಾಗಬಲ್ಲದು. ನಿರ್ದಿಷ್ಟವಾಗಿ ಕಾರ್ಯಕಾರಣದ ನೆಲೆಯಿಂದ ಸಂಶೋಧಿಸುವಾಗ ಅದು ಹೆಚ್ಚು ಅನುಭವಕ್ಕೆ ಬರುತ್ತದೆ. ಬದಲಾಣೆಯೇಕೆ ಉಂಟಾಗುತ್ತದೆಯೆಂಬುದು ಸದಾ ಇತಿಹಾಸಕಾರರ ಮುಖ್ಯ ಕಾಳಜಿಯಾಗಿದೆ. ಈ ಕಾರಣಕ್ಕಾಗಿಯೇ ಜಾಗತಿಕ-ಚಾರಿತ್ರಿಕ ಮಟ್ಟದಲ್ಲಿ ಸಿಗುವ ಎಲ್ಲಾ ಸಂಪನ್ಮೂಲಗಳನ್ನು, ಕಾರ್ಯನೀತಿಗಳನ್ನು, ಪ್ರಬಲ ಸಮುದಾಯಗಳ ಮತ್ತು ಅವರ ಬೆಂಬಲಿಗರ ನಡುವಿನ ಪರಸ್ಪರ ಸಂಘರ್ಷಗಳನ್ನು ಪರಿಗಣಿಸುವುದು ಮತ್ತು ಚರಿತ್ರೆಯಿಂದ ಆಚೆ ಇಡಲ್ಪಟ್ಟ ಜನರ ಅನುಭವಗಳನ್ನು ದಾಖಲಿಸುವುದು ಮುಖ್ಯವಾಗುತ್ತದೆ.

ಇತಿಹಾಸ ಸೃಜನೆಯ ಪ್ರಮುಖ ಕೇಂದ್ರಗಳಿಂದ ಆಚೆ ಇರುವ ವ್ಯಕ್ತಿ ಮತ್ತು ಸಮುದಾಯಗಳ ಅನುಭವಗಳು ಮುಖ್ಯವಲ್ಲವೆಂಬುದು ಇಲ್ಲಿನ ಪ್ರತಿಪಾದನೆಯಲ್ಲ. ಅಂಚಿನ ಸಮುದಾಯಗಳು ಹೇಗೆ ಬೃಹತ್ ಕಥಾನಕಗಳನ್ನು ಸೃಷ್ಟಿಸುತ್ತವೋ, ಹಾಗೆಯೇ ಅವುಗಳಿಂದ ಸೃಷ್ಟಿಸಲ್ಪಡುತ್ತವೆಂಬುದೂ ನಿಜವೇ. ವಿಶೇಷವಾಗಿ ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದ ಮೊದಲು, ಚಾರಿತ್ರಿಕವಾಗಿ ಕೇಂದ್ರೀಯವೆನಿಸುವುದು (central) "ಅಂಚಿನಲ್ಲಿರುವ" ಜನಸಮುದಾಯಗಳಿಗೆ ಸಾಮಾನ್ಯವಾಗಿತ್ತು. ಅಲೆಮಾರಿಗಳು ಮತ್ತು ಬುಡಕಟ್ಟು ಯೋಧರು ಚಕ್ರಾಧಿಪತ್ಯದ ಸೇನಾಪತಿಗಳಾದರು. ಕ್ಷೌರಿಕ-ಶಸ್ತ್ರವೈದ್ಯರುಗಳು ವಿಜ್ಞಾನಿಗಳಾದರು. ನರ್ತಕಿಯರು ರಾಣಿಯ ಪಟ್ಟವನ್ನು ಧರಿಸಿದರು. ಜನರು ಆಗಿಂದಾಗ್ಗೆ ರಾಷ್ಟ್ರ ಮತ್ತು ಅಂತಸ್ತುಗಳ ನಮ್ಯ (flexible) ಗಡಿಗಳನ್ನು ಸುಲಭವಾಗಿ ದಾಟಿದರು. ಚಾರಿತ್ರಿಕ ಪರಿಣಾಮಗಳು ಮುಕ್ತವಾಗಿದ್ದವು. ಚಾರಿತ್ರಿಕ ಬದಲಾವಣೆಯನ್ನು ಕೇವಲ ಬಂಡವಾಳ, ಆಧುನಿಕ ಪ್ರಭುತ್ವ, ಅಥವಾ ರಾಷ್ಟ್ರಗಳ ಪರಿಕಲ್ಪನೆಯ ಹುಟ್ಟು ಹಾಗೂ ಬೆಳವಣಿಗೆಗೆ ಮಾತ್ರವೇ ಸೀಮಿತಗೊಳಿಸಿದಲ್ಲಿ; ಈ ಬದಲಾವಣೆಯ ನಿಟ್ಟಿನಲ್ಲಿ ವಸ್ತುತಃ ಕುತೂಹಲಕಾರಿಯಾಗಿದ್ದ ಬಹುತೇಕ ಅಂಶಗಳನ್ನು ಮರೆಮಾಚಿ, ಅವನ್ನು ವರ್ಜಿಸಿದಂತೆ ಎಂಬುದರಲ್ಲಿ ಸಂದೇಹವಿಲ್ಲ. ಆದರೂ 'ಸುದೀರ್ಘ ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಸಮರೂಪತೆಯೆಡೆಗಿನ ಚಾರಿತ್ರಿಕ ಬದಲಾವಣೆಯ ಮಹತ್ವವನ್ನು ಅಲ್ಲಗಳೆಯುವುದು ಕ್ಲಿಷ್ಟಕರ. ಆಧುನಿಕೋತ್ತರ ಇತಿಹಾಸಕಾರರೂ ಸೇರಿದಂತೆ ಕೆಲವರು ಅದನ್ನು ಅಲ್ಲಗಳೆದಿದ್ದಾರೆ.

೧೯೧೦ಳರ ಹೊತ್ತಿಗೂ ಅಸಾಂಪ್ರದಾಯಿಕ, ಉಲ್ಲಂಘನಶೀಲ ಮತ್ತು ಚಲನಶೀಲ ಶಕ್ತಿಗಳನ್ನು ಎಲ್ಲ ಕಡೆಗಳಲ್ಲೂ ಕಾಣಬಹುದಿತ್ತು. ಯುರೋಪಿನ ಹೃದಯಭಾಗದಲ್ಲಿ ಸಹ ಆಧುನಿಕ ಕ್ರೈಸ್ತ ಧರ್ಮದ ಗೆಲುವಿಗೆ, ಆಧ್ಯಾತ್ಮವಾದದ ಪ್ರಫುಲ್ಲತೆ ಮತ್ತು ಗೋಪನೀಯ (esoteric) ಉಪಶಮನದ (healing) ಉಪಾಸನಾ ಪದ್ಧತಿಗಳು (cult) ಸವಾಲನ್ನೊಡ್ಡಿದ್ದವು. ಸಂಪ್ರದಾಯವಾದಿ ಇಸ್ಲಾಮ್ ಧರ್ಮದ ಉತ್ಥಾನವು ಸಹ, ಹಿಂದೂ, ಬೌದ್ಧ ಮತ್ತು ಆಫ್ರಿಕನ್ ಬುಡಕಟ್ಟು ಚಿಕಿತ್ಸಕರು ಪವಿತ್ರ ಸ್ಥಾನಗಳಲ್ಲಿ ಮುಸ್ಲಿಂ ಉಪಾಸಕರ ಜೊತೆಗೂಡಲು ಈಗಲೂ ಅವಕಾಶವನ್ನೀಯುತ್ತಿದ್ದ ವ್ಯಾಪಕ ಸಂದಿಗ್ಧತೆಯ ಸವಾಲನ್ನೆದುರಿಸಿತು. ಆಧುನಿಕ ಪ್ರಭುತ್ವ ಮತ್ತು ರಾಷ್ಟ್ರೀಯತೆಗಳ ಗೆಲುವನ್ನು ನಿರಾಕರಿಸುವ ಹೊಸ ಶಕ್ತಿಕೇಂದ್ರಗಳು ಸಾಕಷ್ಟು ಹುಟ್ಟಿಕೊಂಡವು. ಪ್ರಬಲವೆನಿಸಿದ್ದ ಸಂಘಟಿತ ಕಾರ್ಮಿಕ ವರ್ಗವೂ ಅವುಗಳಲ್ಲೊಂದು. ಅಂತೆಯೇ, ಈ ಊಹಿಸಲಾಗದ ಮತ್ತು ಮಾನಕೀಕೃತವಲ್ಲದ ( unstandardized) ಮಾನವ ಜೀವನ ಹಾಗೂ ಆಲೋಚನೆಗಳ ಸ್ವರೂಪಗಳು

ಸರ್ಕಾರೀಯತೆಯ ಸಾಮಾನ್ಯ ಸ್ವರೂಪಗಳ ಅಂಕಿತದಿಂದ ಗುರುತಿಸಲ್ಪಡುವುದು ಹೆಚ್ಚಾಯಿತು. ರಾಷ್ಟ್ರವನ್ನು ಕುರಿತ ಸಾಮಾನ್ಯ ವಿಚಾರಗಳು ಮತ್ತು ಅಂತರಾಷ್ಟ್ರೀಯ ಬಂಡವಾಳ ಮಾರುಕಟ್ಟೆಗಳ ಕಾರ್ಯನಿರ್ವಹಣೆಗಳಿಂದ ಅವು ಪ್ರಭಾವಿತಗೊಂಡವು. ಕಾಲ ಜ್ಞಾನಿಗಳು ಮತ್ತು ಆಧ್ಯಾತ್ಮಿಕವಾದಿಗಳು ಮುದ್ರಣಾಲಯಗಳನ್ನು ಬಳಸತೊಡಗಿ, ಕಾರ್ಮಿಕ ಸಂಘಟನೆಗಳ ನಾಯಕರು ಬ್ಯಾಂಕುಗಳಲ್ಲಿ ದುಡ್ಡನ್ನಿಟ್ಟು, ಮಹಾನ್ ಕಾರ್ಪೋರೇಶನ್ನುಗಳ ಮಾದರಿಯಲ್ಲಿ ತಮ್ಮ ಟಿಪ್ಪಣಿ, ವರದಿಗಳನ್ನು ಇತ್ತೇದಿಸಿದರು (update). ಹಾಗಾಗಿ, ಈ ಕೃತಿಯು; ನಿರ್ಬಲರ ಅಥವಾ ಸಾಮಾಜಿಕ ವಿಘಟನೆಯ ಅಧ್ಯಯನ ಹಾಗೂ ಆಧುನಿಕತೆಯನ್ನು ಸೃಜಿಸಿದ ವಿಸ್ತೃತ ಪ್ರಕ್ರಿಯೆಗಳ ಅಧ್ಯಯನಗಳ ನಡುವೆ ವೈರುಧ್ಯಗಳಿವೆ ಎಂಬ ನಿಲುವನ್ನು ತಳ್ಳಿಹಾಕುತ್ತದೆ.

**ಮೂರನೆಯ ಸಮಸ್ಯೆ: "ಆಧುನಿಕ ಎಂಬ ಒಗಟಿನ" ಮುಂದುವರಿಕೆ**

ಈ ಪುಸ್ತಕದ ಶೀರ್ಷಿಕೆಯಲ್ಲಿ ಮತ್ತು ಎಲ್ಲ ಪ್ರಸಕ್ತ ಮಾನವಿಕ ವಿಜ್ಞಾನಗಳಲ್ಲಿ ಬಳಸಲ್ಪಟ್ಟಿರುವ 'ಆಧುನಿಕ' ಎಂಬ ಪದಕ್ಕೆ ಸಂಬಂಧಿಸಿದ ವಿಷಯವನ್ನು ಈಗ ನೇರವಾಗಿ ಕೈಗೆತ್ತಿಕೊಳ್ಳುವುದು ಯುಕ್ತವೆನಿಸುತ್ತದೆ. ೧೯೫೦ ಮತ್ತು ೬೦ರ ದಶಕಗಳಲ್ಲಿ, ಎಸ್. ಎನ್. ಐಸೆನ್ಸ್ಟಾಟ್ (S.N. Eisenstadt) ಮತ್ತು ಇತರರು ಜಾಗತಿಕ ಬೆಳವಣಿಗೆಗಳ ಹತೋಟಿಯನ್ನು ಸೂಚಿಸಲು ಈ ಪದವನ್ನು ಬಳಸಿದರು. ಈ ಜಾಗತಿಕ ಬೆಳವಣಿಗೆಗಳು ಒಟ್ಟುಗೂಡಿ, ಮಾನವ ಸಂಘಟನೆ ಮತ್ತು ಅನುಭವಗಳಲ್ಲಿ ಮುನ್ನಡೆಯ ಹೆಜ್ಜೆಯನ್ನು ಸೃಜಿಸಿದವು. ಇದನ್ನು ಅವರು 'ಆಧುನಿಕತೆ' ಎಂದು ಕರೆದರು. ಅವರು ಸಂಚಿತ್ರಗೊಳಿಸಿದ ಈ ಬದಲಾವಣೆಗಳು, ಮಾನವ ಜೀವನದ ಹಲವಾರು ವಿವಿಧ ಕ್ಷೇತ್ರಗಳಲ್ಲಿ ಪರಿಣಾಮವನ್ನುಂಟುಮಾಡಿವೆ. ಹೆಚ್ಚಾಗಿ ನಗರೀಕರಣದ ಜೊತೆಯಲ್ಲೇ ಗುರುತಿಸಲ್ಪಡುವ ಬದಲಾವಣೆಯೆನಿಸಿದ; ದೊಡ್ಡ ಹಾಗೂ ವಿಸ್ತೃತ ಕುಟುಂಬಗಳು ಬಿಡಿ ಕುಟುಂಬಗಳಾಗಿ (nuclear family) ಬದಲಾದ ಪ್ರಕ್ರಿಯೆಯನ್ನು ಇವು ಒಳಗೊಂಡಿವೆ. ಕೈಗಾರಿಕೀಕರಣ, ವ್ಯಕ್ತಿಕೇಂದ್ರಿತ ರಾಜಕೀಯ ಹಕ್ಕುಗಳು, ಮತ್ತು ಧರ್ಮನಿರಪೇಕ್ಷತೆ, ಕುಂದುತ್ತಿದೆ ಎಂದು ಭಾವಿಸಲಾದ ಧಾರ್ಮಿಕ ಮನೋಭಾವಗಳನ್ನೂ ಅವು ಒಳಗೊಂಡಿದ್ದವು. ಐವತ್ತು ವರುಷಗಳ ಹಿಂದೆ ರಚಿಸಲಾಗಿದ್ದ ಮ್ಯಾಕ್ಸ್ ವೆಬರ್ (Max Weber) ಎಂಬ ಜರ್ಮನ್ ಸಮಾಜಶಾಸ್ತ್ರಜ್ಞನ ಮೂಲ ಕೃತಿಗಳ ಆಧಾರದ ಮೇಲೆ ಅವುಗಳ ಮಾದರಿಗಳು ಹಲವು ರೀತಿಯಲ್ಲಿ ಸೃಜಿಸಲ್ಪಟ್ಟಿದ್ದವು. ಸೈದ್ಧಾಂತಿಕ ಬದಲಾವಣೆಗಳು ಸ್ವತಂತ್ರವಾಗಿ ನಿರ್ವಹಿಸುವ ಪಾತ್ರಗಳಿಗೆ ತನ್ನ ಸಿದ್ಧಾಂತಗಳಲ್ಲಿ ಒತ್ತು ನೀಡಿದ್ದಾಗ್ಯೂ, ವೆಬರ್‌ನ ಮನಸ್ಸಿನಲ್ಲಿ ಸದಾ ಕಾರ್ಲ್ ಮಾರ್ಕ್ಸ್ (Karl Marx) ನೆಲೆಯೂರಿದ್ದ. ಹಾಗಾಗಿಯೇ, ಐಸೆನ್ಸ್ಟಾಟ್ ಹಾಗೂ ಆ ಕಾಲದ ಪ್ರಗತಿಪರ ಚಿಂತಕರ ಹಾಗೂ ಮಾರ್ಕ್ಸಿಸ್ಟ್ ಬರಹಗಾರರ ಕಾಲಾನುಕ್ರಮಣಿಕೆಗಳಲ್ಲಿ (chronology) ಹಲವಾರು ಹೋಲಿಕೆಗಳಿವೆ. ಅವರೆಲ್ಲರೂ ಆಧುನಿಕದ ಮೂಲಗಳನ್ನು ಹದಿನಾರನೆಯ ಶತಮಾನದಲ್ಲಿ ಗುರುತಿಸಿ, ಹತ್ತೊಂಬತ್ತನೆಯ ಶತಮಾನವು ಅದರ ಸಂಕ್ರಮಣ ಸ್ಥಿತಿಯೆಂಬ ನಿರ್ಧಾರಕ್ಕೆ ಬರುತ್ತಾರೆ. ಎಲ್ಲರೂ, ಜಾಗತಿಕ ಬದಲಾವಣೆಗಳೆಲ್ಲದರ ಮೂಲವನ್ನು ಪಶ್ಚಿಮವೆಂಬುದಾಗಿ ಗುರುತಿಸಿ, ಪಶ್ಚಿಮವಲ್ಲದ್ದು ಕೇವಲ ಅದರ ಸ್ವೀಕರ್ತವೆನಿಸಿದ್ದು, ಅಂತಿಮವಾಗಿ ಅದನ್ನು ಒಳಗೊಳ್ಳುತ್ತದೆಂದು ತಿಳಿಸುತ್ತಾರೆ.

೧೯೮೦ರ ಹೊತ್ತಿಗೆ, ಯುದ್ಧೋತ್ತರ 'ಆಧುನಿಕತಾ ಶಾಸ್ತ್ರಜ್ಞರು' ಪರಸ್ಪರ ವಿರೋಧವುಳ್ಳ ಹಲವಾರು ದಿಕ್ಕುಗಳಿಂದ ಟೀಕೆಗೆ ಗುರಿಯಾಗಿದ್ದರು. ಜನಸಂಖ್ಯಾಶಾಸ್ತ್ರ ಪರಿಣತರು, ವಿಸ್ತೃತ ಕುಟುಂಬಗಳು ಬಿಡಿ ಕುಟುಂಬಗಳಾಗಿ ಬದಲಾದವೆಂಬ ವಿಚಾರವನ್ನು ಗುಮಾನಿಯಿಂದ ನೋಡಲಾರಂಭಿಸಿದರು. ಆರ್ಥಿಕ ಚರಿತ್ರಕಾರರು, ಮಾನವ ವಿಕಾಸವು ಕೈಗಾರಿಕೀಕರಣ ಎಂಬ ಹಂತವನ್ನು ಹಾದುಹೋಗಲೇಬೇಕಾದ 'ಅಗತ್ಯದ' ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಲಾರಂಭಿಸಿದ್ದರು. ಸಮಾಜಶಾಸ್ತ್ರಜ್ಞರು, ಧರ್ಮನಿರಪೇಕ್ಷತೆಯ ಯಶಸ್ಸಿಗೆ ಸವಾಲನ್ನೊಡಲು, ೧೯೭೯ರಲ್ಲಿ ಇರಾನಿನಲ್ಲಿ ನಡೆದ ಇಸ್ಲಾಮಿಕ್ ಕ್ರಾಂತಿಯನ್ನು ಅಥವಾ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿನ ಶುಭಸಂದೇಶೀಯ (evangelical) ಕ್ರೈಸ್ತಧರ್ಮದ ಮುನ್ನಡೆಯನ್ನು ಉಲ್ಲೇಖಿಸಲಾರಂಭಿಸಿದ್ದರು. ಪಾಶ್ಚಿಮಾತ್ಯ ಆಧುನಿಕತೆ ಮತ್ತು ಸೆನೆಗಲ್ ಅಥವಾ ಇಂಡೋನೇಶಿಯಾದ ಆಧುನಿಕತೆ ಬೇರೆಬೇರೆಯೇ ಆಗಿರಬಹುದಾದ ಸಾಧ್ಯತೆಗಳೂ ಇವೆ ಎಂಬ ನಿಟ್ಟಿನಲ್ಲಿ; ೧೯೮೦ರ ನಂತರ ಚಿಂತಕರು,

‘ಅನೇಕಾತ್ಮಕ ಆಧುನಿಕತೆಯ’ ಬಗ್ಗೆ (multiple modernities) ಚರ್ಚಿಸಲಾರಂಭಿಸಿದರು. ಇವರ ತರ್ಕಗಳು; ಹತ್ತೊಂಬತ್ತನೆಯ ಶತಮಾನದಲ್ಲಿಯೂ ಸಹ ಜರ್ಮನಿ, ರಷಿಯಾ, ಮತ್ತು ಚೀನಾದ ರಾಜಕಾರಣಿಗಳು ಮತ್ತು ಚಿಂತಕರು, ‘ತಮ್ಮದೇ ಆದ ಆಧುನಿಕತೆಗಾಗಿ’ ಮಂಡಿಸಿದ ವಾದಗಳಿಗೆ ಸದೃಶವಾಗಿತ್ತು. ಇಪ್ಪತ್ತೊಂದನೆಯ ಶತಮಾನದ ಮೊದಲ ದಶಕದಲ್ಲಿಯೂ ಅದರ ಬಗ್ಗೆ ಗೊಂದಲಗಳಿದ್ದವು. ಜಾದೂಕಲೆಯ ಭಾವಾವೇಶ, ಸಂವೇದನೆ, ಭಯಾಶ್ಚರ್ಯಗಳು ಹಿಗ್ಗುತ್ತಾ ಕುಗ್ಗುತ್ತಾ ಮರಳಿ ಪೂರ್ವಸ್ಥಿತಿಗೆ ಮರಳುವ ಸ್ಥಿತಿಸ್ಥಾಪಕತ್ವದೆಡೆಗೆ (resilience) ಗಮನಸೆಳೆಯುತ್ತಾ ಆಧುನಿಕ ತತ್ವಶಾಸ್ತ್ರಜ್ಞ ಬ್ರುನೊ ಲಟೂರ್ (Bruno Latour), ಇದು, ಮಧ್ಯಮರ್ಗದ (bourgeois) ಏಕೋದ್ದಿಷ್ಟ (individual) ವಿಷಯವಿನ್ನೂ ಪ್ರಬಲವಾಗಿದೆಯೆಂಬ ವಿಚಾರಕ್ಕೆ ವ್ಯತಿರಿಕ್ತವಾಗಿದ್ದು; ‘ನಾವೆಂದೂ ಆಧುನಿಕರಾಗಿರಲೇ ಇಲ್ಲ’ ಎಂಬುದಾಗಿ ಘೋಷಿಸಿದ. ಅದೇ ಹೊತ್ತಿಗೆ, ಇತರೆ ಸಮಾಶಾಸ್ತ್ರಜ್ಞರು, ಅದರಲ್ಲೂ ಪ್ರಮುಖವಾಗಿ ಅರ್ನೆಸ್ಟ್ ಗೆಲ್ನರ್ (Ernest Gellner), ಆಲನ್ ಮೆಕ್ಫರ್ಲೇನ್ (Alan Macfarlane) ಮತ್ತು ಡೇವಿಡ್ ಲ್ಯಾಂಡ್ಸ್ (David Landes) ಅವರುಗಳು, ಮಾನವಕುಲದ ಕಟ್ಟಕಡೆಯ ಮುನ್ನಡೆಯೆನಿಸಿದ ‘ಆಧುನಿಕ ಎಂಬ ಒಗಟಿನ’ (riddle of the modern) ವಾಸ್ತವವನ್ನು ಬಲವಾಗಿ ಪ್ರತಿಪಾದಿಸಿದರು.

ಎಲ್ಲಕ್ಕಿಂತ ಹೆಚ್ಚಾಗಿ, ನಾನು ಆಧುನಿಕ ಎಂದು ಎಂದು ಭಾವಿಸುವುದೇ ಆಧುನಿಕವಾಗಿರುವ ಪ್ರಕ್ರಿಯೆಯ ಅತ್ಯಂತ ಅವಶ್ಯಕ ಭಾಗ ಎನ್ನುವುದನ್ನು ಈ ಕೃತಿ ಒಪ್ಪಿಕೊಳ್ಳುತ್ತದೆ. ‘ಕಾಲದೊಂದಿಗೆ ಹೆಜ್ಜೆ ಹಾಕುವ’ ಮಹತ್ವಾಕಾಂಕ್ಷೆಯೇ ಆಧುನಿಕತೆ. ಅದೊಂದು ಅನುಕರಣೆ ಮತ್ತು ತೆಗೆದುಕೊಳ್ಳುವ <u>ಪ್ರಕ್ರಿಯೆ.</u> 1780 ಮತ್ತು 1914ರ ನಡುವಿನ ಅವಧಿಯಲ್ಲಿ ಹೆಚ್ಚಿನ ಮಂದಿ ತಾವು ಆಧುನಿಕರೆಂತಲೂ, ಅಥವಾ ತಮಗೆ ಇಷ್ಟವಿರಲಿ, ಇಲ್ಲದಿರಲಿ, ಆಧುನಿಕ ಜಗತ್ತಿನಲ್ಲಿ ಬದುಕಿದ್ದೇವೆಂಬುದಾಗಿಯೂ ನಿಶ್ಚಯಿಸಿದ್ದರು. ಹದಿನೆಂಟನೆಯ ಶತಮಾನದ ಸ್ಕಾಟಿಶ್ ಮತ್ತು ಫ್ರೆಂಚ್ ತತ್ವಶಾಸ್ತ್ರಜ್ಞರು, ಮಾನವನ ಹಿಂದಿನ ಕಾಲದ ಬಹುತೇಕ ಎಲ್ಲ ವಿಚಾರಗಳನ್ನು ನಿಸ್ಸಂದೇಹವಾಗಿ ವರ್ಜಿಸಬಹುದೆಂದು ನಂಬಿದ್ದರು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ, ತಾಂತ್ರಿಕ ಆಧುನಿಕತೆಯ ಚಿಹ್ನೆಗಳಾದ ಕಾರು, ಫೋನು, ವಿಮಾನ ಇತ್ಯಾದಿಗಳು ಆ ಸಂವೇದನೆಯನ್ನು ನಾಟಕೀಕರಿಸಿದವು (dramatize). ಅಂತೆಯೇ, 1900ರ ಹೊತ್ತಿಗೆ ಹಲವಾರು ಏಶಿಯನ್ ಮತ್ತು ಆಫ್ರಿಕನ್ ಗಣ್ಯರು ಇದನ್ನು; ರಿವಾಜು, ಸಂಪ್ರದಾಯ, ಪಿತೃಪ್ರಧಾನತೆ, ಹಳೆಯ ಧಾರ್ಮಿಕ ಪದ್ದತಿಗಳು, ಮತ್ತು ಸಮುದಾಯಗಳು ಸವೆಯುತ್ತಿರುವ ಕಾಲಘಟ್ಟವೆಂದು ಭಾವಿಸಿದ್ದು, ಮತ್ತೂ ಸವೆಯತಕ್ಕದ್ದೆಂದು ನಂಬಿದ್ದರು. ಮತ್ತೊಂದೆಡೆ, ಎಲ್ಲೋ ಕೆಲವು ಚಿಂತಕರು, ಆಧುನಿಕದ ಮಹಾಪೂರದ ಬಗ್ಗೆ ಇಷ್ಟೇ ಬಲವಾದ ನಂಬಿಕೆಯನ್ನು ಹೊಂದಿದ್ದರೂ ಸಹ ಈ ಬೆಳವಣಿಗೆಗಳ ಬಗ್ಗೆ ಪ್ರಲಾಪಿಸಲಾರಂಭಿಸಿದ್ದರು.

ಒಂದು ಹಂತದಲ್ಲಿ, ಆಗ ಹತ್ತೊಂಬತ್ತನೆಯ ಶತಮಾನವು ನಿಶ್ಚಿತವಾಗಿಯೂ ಆಧುನಿಕತೆಯ ಯುಗವೆನಿಸಿತ್ತು. ಏಕೆಂದರೆ, ಸಮಾಜದ ವ್ಯವಸ್ಥೆಯನ್ನು ನಿಯಂತ್ರಿಸಿದ ಸಾಕಷ್ಟು ಮಂದಿ ಚಿಂತಕರು, ಮುತ್ಸದ್ದಿಗಳು, ಮತ್ತು ವಿಜ್ಞಾನಿಗಳು ಹಾಗೆ ಭಾವಿಸಿದ್ದರು. ಜಗತ್ತಿನಾದ್ಯಂತ ಅತ್ಯಂತ ಬಡವರು ಹಾಗೂ ಅಧೀನಸ್ಥ ಜನರು; ಈ ಕಲ್ಪಿತ ಆಧುನಿಕ ಯುಗದ ಚಿಹ್ನೆಗಳನ್ನು ತಮ್ಮದಾಗಿಸಿಕೊಂಡು, ತಮ್ಮ ಅಂತಸ್ತು ಮತ್ತು ಬದುಕುಳಿಯುವ ಸಾಧ್ಯತೆಗಳನ್ನು ಸುಧಾರಿಸಿಕೊಳ್ಳಬಹುದೆಂದು ಯೋಚಿಸಿದ ಕಾರಣದಿಂದಾಗಿಯೂ ಇದು ಆಧುನಿಕ ಯುಗವೆನಿಸಿದೆ. ಆ ಚಿಹ್ನೆಗಳು ಜೇಬು ಗಡಿಯಾರಗಳಿರಬಹುದು, ಛತ್ರಿಗಳಿರಬಹುದು, ಅಥವಾ ಹೊಸ ಧಾರ್ಮಿಕ ಪಠ್ಯಗಳೇ ಇರಬಹುದು.

ಹತ್ತೊಂಬತ್ತನೆಯ ಶತಮಾನಕ್ಕೂ ಹಿಂದಿನ ಜನರು ಮಾನವ ಚರಿತ್ರೆಯ ಯುಗಪ್ರವರ್ತಕ ಬದಲಾವಣೆಗಳನ್ನೆಂದಿಗೂ ಗ್ರಹಿಸಿರಲಿಲ್ಲವೆಂಬುದು ಈ ಹೇಳಿಕೆಯ ಅರ್ಥವಲ್ಲ. ಅವರು ಅದನ್ನು ಗ್ರಹಿಸಿದ್ದರಾದರೂ; ಈ ಬದಲಾವಣೆಗಳನ್ನು ಅವರು ವಿವರಿಸಿದ ಮತ್ತು ನಿರೂಪಿಸಿದ ಎರಡು ರೀತಿಗಳು, ಆಧುನಿಕವೆಂಬ ವಿಚಾರಕ್ಕೆ ಅಗತ್ಯವಿರುವ ಪ್ರಾಪಂಚಿಕ ಮಾನವ ವ್ಯವಹಾರಗಳಲ್ಲಿನ ಅದೇ ರೀತಿಯ ಮುನ್ನಡೆಯನ್ನು ಧ್ವನಿಸಲಿಲ್ಲ. ಈ ಮುಂಚಿನ ವ್ಯಾಖ್ಯಾನಕಾರರು, ಸಾಮಾನ್ಯತಃ (generally) ಮಾನವ ಸಮಾಜದ ಬದಲಾವಣೆಗಳನ್ನು “ನವೀಕರಣಗಳೆಂದು” ಗ್ರಹಿಸಿದ್ದರು. ಉದಾಹರಣೆಗೆ, ನವೋದಯ

ಯುರೋಪಿನ ವಿದ್ವಾಂಸರು; ಜನರ ಇತಿಹಾಸವನ್ನು ಗ್ರಹಿಸುವ ರೀತಿಯನ್ನು ಬದಲಿಸುತ್ತಿದ್ದು, ಅವರ ವಿಚಾರಗಳನ್ನು ನೂತನ ಮುದ್ರಣ ಮಾಧ್ಯಮದಲ್ಲಿ ಪ್ರಸರಿಸುತ್ತಿದ್ದಾಗಲೂ, ಉತ್ಕೃಷ್ಟ ಪ್ರಾಚೀನತೆಯ ಪರಿಪೂರ್ಣ ಅಧ್ಯಯನವನ್ನು ಪುನಃಸ್ಥಾಪಿಸಲಾಗಿತ್ತು ಎಂಬುದಾಗಿ ಭಾವಿಸುತ್ತಾರೆ. ಹಾಗೆಯೇ, ಹದಿನೆಂಟನೆಯ ಶತಮಾನದ ಚೀನೀ ವಿದ್ವಾಂಸರ ಪ್ರಕಾರ, ಹಿಂದಿನ ರಾಜಪ್ರಭುತ್ವಗಳಿಗಿಂತಲೂ ಚಿಂಗ್ ರಾಜವಂಶದ ಆಳ್ವಿಕೆಯ ಶ್ರೇಣಿಯು ಅತ್ಯಂತ ಉನ್ನತ ಮಟ್ಟದಲ್ಲಿದ್ದಾಗ್ಯೂ, ಈ ಸಮಕಾಲಿಕ ರಾಜವಂಶದ ಅತ್ಯುತ್ತಮ ಆಳ್ವಿಕೆಯ ಆಶ್ರಯದಲ್ಲಿ, ಹಿಂದಿನ ಆಳ್ವಿಕೆಗಳ ಧರ್ಮಶ್ರದ್ಧೆ ಮತ್ತು ಪಾಂಡಿತ್ಯಪೂರ್ಣ ಜಗತ್ತನ್ನು ಪುನಃಸ್ಥಾಪಿಸಲಾಗಿತ್ತು.

ಸಹಸ್ರವರ್ಷೀಯ ಕ್ರಮವು; ಮಾನವ ಇತಿಹಾಸದಲ್ಲಿನ ಪ್ರಮುಖ ಬದಲಾವಣೆಗಳನ್ನು ಜನರು ಗ್ರಹಿಸುವ ಮತ್ತೊಂದು ವಿಧಾನವೆನಿಸಿದೆ. ಈ ಅನುಭೂತಿಯ ನಿಟ್ಟಿನಲ್ಲಿ ಜನರು; ಅಲೌಕಿಕ ಅಥವ ಸ್ವರ್ಗೀಯತೆಯು ಅದು ಹೇಗೋ ಮನುಷ್ಯ ಇತಿಹಾಸದ “ಒಳತೂರಿ”, ದೈವತ್ವ ಅಥವಾ ಸದ್ಗುಣ ಅಥವಾ ಕಾಲಜ್ಞಾನದ ಹೊಸ ಕಾಲಘಟ್ಟವನ್ನು ತಂದಿತೆಂಬುದಾಗಿ ನಂಬಿದ್ದರು. ಸುಮಾರು ೧೭೬೦ರ ನಂತರದಲ್ಲಿ ಅನೇಕ ಚಿಂತಕರು ಮತ್ತು ರಾಜನೀತಿಜ್ಞರನ್ನು ಎಡೆಬಿಡದೆ ಕಾಡಿದ ಆಧುನಿಕತೆಯೆಡೆಗಿನ ಧರ್ಮನಿರಪೇಕ್ಷತೆಯ ಸ್ಥಳಾಂತರದ ವಿಚಾರಕ್ಕೆ ಇದು ಭಿನ್ನವಾದುದು. ಹಿಂದಿನ ವಿಚಾರಧಾರೆಯ ಈ ಎರಡು ಶೈಲಿಗಳು ಹತ್ತೊಂಬತ್ತನೆಯ ಶತಮಾನದಲ್ಲೂ ಉಳಿದುಕೊಂಡು ಆಧುನಿಕ ಎಂಬ ವಿಚಾರದಲ್ಲಿ ತನ್ನ ಗುರುತನ್ನುಳಿಸಿದೆ. ಹಾಗೆ ನೋಡಿದರೆ, ಈ ಅನುಭೂತಿಗಳೆಲ್ಲವೂ ಯಾವ ರೀತಿಯಲ್ಲಿ ಒಟ್ಟಾಗಿ ಸೇರಿಸಲ್ಪಟ್ಟಿವೆಯೆಂಬುದು ಆ ಕಾಲದ ಅತ್ಯಂತ ಕುತೂಹಲ ಕೆರಳಿಸುವ ಅಂಶಗಳಲ್ಲಿ ಒಂದೆನಿಸಿದೆ. ಉದಾಹರಣೆಗೆ; ವೈಜ್ಞಾನಿಕ, ಆಧುನಿಕತಾವಾದಿ ಮಾರ್ಕ್ಸಿಸಮ್ಮಿನಲ್ಲಿ ಸಹ ಭೂಮಿಯ ಮೇಲೆ ಮರಳಿ ಸ್ಥಾಪಿಸಬಹುದಾದ ಸ್ವರ್ಗದ ಪರಿಕಲ್ಪನೆಯ ಛಾಯೆಯಿದೆ. ಹಾಗೆಯೇ, ಶತಮಾನದ ಮಧ್ಯ ಭಾಗದಲ್ಲಿನ ಚೀನಾದ ತಾಯ್ಪಿಂಗ್ ಕ್ರಾಂತಿಕಾರರಂತೆ, ಹಳೆಯ ಶೈಲಿಯ ಸಿದ್ಧಾಂತಗಳನ್ನೊಳಗೊಂಡ ದೃಢಸಂಕಲ್ಪದ ಸಹಸ್ರವರ್ಷೀಯ ನಾಯಕತ್ವಗಳು, ನಾಗರಿಕತೆಯ ಸಂಕೇತವಾಗಿ, ಕಾರ್ಯೋಪಯೋಗಿ ಸಾಧನಗಳೆನಿದ ಫಿರಂಗಿ ನೌಕೆಗಳು ಮತ್ತು ತಂತಿ ಸಂದೇಶದ (telegraph) ಮಾರ್ಗಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದವು. ಆಧುನಿಕತೆಯ ಮಹತ್ವಾಕಾಂಕ್ಷೆಯು ನಿಜಕ್ಕೂ ವಿಲಕ್ಷಣವಾದುದಾಗಿತ್ತು.

ಆದರೂ, ಹಿಂದೆ ಇದ್ದವರು ಹಾಗೆ ಭಾವಿಸಿದ್ದರಿಂದಾಗಿ, ಅದು ವಾಸ್ತವವಿದ್ದಿರಬೇಕು ಎಂಬ ವಾದವು ಇತಿಹಾಸಕಾರರಿಗೆ ಸಮ್ಮತವಾಗಲಾರದು. ಪ್ರತ್ಯಕ್ಷವಾಗಿ ವ್ಯಕ್ತಪಡಿಸಲಾದ ವಿಚಾರಧಾರೆಗಳು, ಆಚರಣೆಗಳು ಮತ್ತು ಪಠ್ಯಗಳಿಂದಾಚೆ, ಅಂದಿನ ಕಾಲದಲ್ಲಿನ ಮರಳಿ ಪಡೆದುಕೊಳ್ಳಬಹುದಾದ ಯಾವ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪ್ರವೃತ್ತಿಗಳು, ಈ ಕಾಲಘಟ್ಟದಲ್ಲಿ ಆಧುನಿಕ ಎಂಬುದಾಗಿ ಪದನಾಮಿತಗೊಳಿಸಬಹುದಾದ ಯಾವುದೋ ಒಂದು ರೂಪುಗೊಳ್ಳುತ್ತಿದೆಯೆಂಬ ಛಾಪನ್ನು (impression) ಧಾರಣಮಾಡುತ್ತವೆ? ಅಂದು ನಡೆಯುತ್ತಿದ್ದ ಬದಲಾವಣೆಗಳು ಅತ್ಯಂತ ತೀವ್ರವಾಗಿದ್ದು, ಅವುಗಳ ಅಂತಃಕ್ರಿಯೆಗಳು ಅತ್ಯಂತ ಗಹನವಾಗಿದ್ದ ಕಾರಣ, ಆ ಕಾಲವನ್ನು ‘ಆಧುನಿಕ ಜಗತ್ತಿನ ಉಗಮವೆಂಬುದಾಗಿ’ ನಿರೂಪಿಸುವುದು ಯುಕ್ತವೆಂಬುದು ಈ ಕೃತಿಯ ನಿಲುವು. ರಾಷ್ಟ್ರ-ವ್ಯವಸ್ಥೆಯ ಉಗಮವನ್ನು ಒಳಗೊಂಡಿದ್ದ ಅದು, ಜಾಗತಿಕ, ವಾಣಿಜ್ಯ ಹಾಗೂ ಬೌದ್ಧಿಕ ಸಂಪರ್ಕಗಳ ಬೃಹತ್ ವಿಸ್ತರಣೆಯೊಂದಿಗೆ, ಕೇಂದ್ರೀಕೃತ ಅಧಿಕಾರ ಅಥವ ಜನಾಂಗೀಯ ಒಗ್ಗಟ್ಟನ್ನು ಆಗ್ರಹಿಸಿತು. ಒಂದು ರಾಷ್ಟ್ರದಿಂದ ಇನ್ನೊಂದು ರಾಷ್ಟ್ರಕ್ಕೆ ಕೈಗಾರಿಕೀಕರಣದ ಪ್ರಸರಣ ಹಾಗೂ ನಗರ ಜೀವನದ ನೂತನ ಶೈಲಿಯು ಈ ಗಂಭೀರ ಬೆಳವಣಿಗೆಗಳನ್ನು ಸಂಯುಕ್ತಗೊಳಿಸಿತು. ಈ ಪ್ರವೃತ್ತಿಗಳೆಲ್ಲದರ ವಿಲೀನವು, ಮಾನವನ ಸಾಮಾಜಿಕ ಸಂಘಟನೆಯಲ್ಲಿನ ಬದಲಾವಣೆಯ ಹೆಜ್ಜೆಯನ್ನು ಸೂಚಿಸುತ್ತದೆ. ಬದಲಾವಣೆಯ ವ್ಯಾಪ್ತಿ ಮತ್ತು ಪ್ರಮಾಣಗಳು ಅಗಾಧ ರೀತಿಯಲ್ಲಿ ವಿಸ್ತರಿಸಿದವು. ಒಟ್ಟಿನಲ್ಲಿ ಹೇಳುವುದಾದರೆ, ಆಧುನಿಕತೆ ಎನ್ನುವುದು ಬರೀ ಪ್ರಕ್ರಿಯೆಯಷ್ಟೇ ಅಲ್ಲ, ಅದು ಒಂದು ಕಾಲಮಾನವೂ ಹೌದು. ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಪ್ರಾರಂಭಗೊಂಡ ಅದು, ಇಂದಿನ ತನಕವೂ ಹಲವಾರು ರೂಪಗಳಲ್ಲಿ ಮುಂದುವರಿಯುತ್ತಲೇ ಇದೆ.

ಹಾಗಾದರೆ, ಆಧುನಿಕತೆ ಹುಟ್ಟಿದ್ದು ಎಲ್ಲಿ? ಹತ್ತೊಂಬತ್ತನೆಯ ಶತಮಾನದ ಚಿಂತಕರು; ಬಹುತೇಕ ಸಜೀವವಸ್ತುಗಳಂತೆಯೇ ಸಮಾಜಗಳು, ಹೆಚ್ಚು ಸಂಕೀರ್ಣ ವ್ಯವಸ್ಥೆಯಾಗಿ ವಿಕಾಸಗೊಂಡಿವೆಯೆಂದು ತರ್ಕಿಸಿದರು., ಹೆಚ್ಚು ಸಂಕೀರ್ಣವೆನಿಸಿದ ಪಾಶ್ಚಿಮಾತ್ಯ ಸಮಾಜಗಳು ಯೋಗ್ಯತಮವೆನಿಸಿದ್ದ (fittest) ಕಾರಣದಿಂದಾಗಿ, ಬದುಕುಳಿದವು. ಕೆಲವು ಪಾಶ್ಚಿಮಾತ್ಯ ಸಮಾಜಗಳು ವ್ಯಾಪಾರ ವಹಿವಾಟನ್ನು ನಿರ್ವಹಿಸಿದ, ಯುದ್ಧಗಳನ್ನು ನಿಭಾಯಿಸಿದ, ಮತ್ತು ತಮ್ಮ ಕಾರ್ಯನೀತಿಗಳನ್ನು ಸಾರ್ವಜನಿಕವಾಗಿ ಚರ್ಚೆಗೊಳಪಡಿಸಿದ ರೀತಿಗಳಿಂದಾಗಿ,ಮಧ್ಯಾವಧಿ ಪ್ರತಿಸ್ಪರ್ಧಾತ್ಮಕ ಲಾಭವನ್ನು (competitive advantage) ಉಳಿಸಿಕೊಂಡಿದ್ದವು ಎಂಬ ವಾದವನ್ನು ಈ ಕೃತಿ ಒಪ್ಪಿಕೊಳ್ಳುತ್ತದೆ. ಆದಾಗ್ಯೂ, ಈ ಲಾಭಗಳು ಅಂತರ್ನಿಹಿತವಾದವುಗಳಲ್ಲ (inherent). ಅವು ಪ್ರಾಸಂಗಿಕ, ಅಂತಃಕ್ರಿಯಾತ್ಮಕ (interactive), ಹಾಗೂ ತುಲನಾತ್ಮಕವಾಗಿ ಅಲ್ಪಕಾಲೀನವಾದವುಗಳು. ಯುರೋಪಿನಿಂದಾಚೆಯ ಪ್ರಭುತ್ವಗಳು ಹಾಗೂ ಸಮಾಜಗಳು ಹೊಸ ರೀತಿಯ ರಾಜಕೀಯ ಮತ್ತು ಸಾಮಾಜಿಕ ಕ್ರಿಯೆಗಳನ್ನು ತ್ವರಿತವಾಗಿ ಅಳವಡಿಸಿಕೊಂಡವು. ಹಾಗಾಗಿ, ಈ ಕೃತಿಯು; 'ಆಧುನಿಕತೆಯ ಕ್ರಾಂತಿಯನ್ನು' ಜಗತ್ತಿನಾದ್ಯಂತ ಹಲವಾರು ವಿವಿಧ ಮಾಧ್ಯಮಗಳು ಮತ್ತು, ವಿಚಾರಧಾರೆಗಳು ಹಲವಾರು ಕಾಲಘಟ್ಟಗಳಲ್ಲಿ ಮತ್ತು ರೀತಿಗಳಲ್ಲಿ ಸಶಕ್ತಗೊಳಿಸಿದವು ಎಂದು ತೋರಿಸುವುದರ ಮೂಲಕ ಅದನ್ನು ಸಾಪೇಕ್ಷಗೊಳಿಸುತ್ತದೆ. ಹಾಗಾಗಿಯೇ, ಚೀನಾ ಸಮುದ್ರದಲ್ಲಿ ಮತ್ತು ಆಗ್ನೇಯ ಏಶಿಯಾದಲ್ಲಿನ ಜಾಗತಿಕ ವ್ಯಾಪಾರ ವಹಿವಾಟಿನ ವಿಸ್ತರಣೆಗೆ ಸಂಬಂಧಿಸಿದಂತೆ, ಹ್ಯಾಮ್ಬರ್ಗ್ ಅಥವಾ ನ್ಯೂಯಾರ್ಕಿನ ಕುಲೀನ ಬಂಡವಾಳಷಾಹಿಗಳಷ್ಟೇ ಚೀನಾದ ಹಳೆಯ ಶೈಲಿಯ ಕೌಟುಂಬಿಕ ವ್ಯವಹಾರ ಸಂಸ್ಥೆಗಳೂ ಮುಖ್ಯವಾಗುತ್ತವೆ. ಪಶ್ಚಿಮ ಆಫ್ರಿಕಾದಲ್ಲಿನ ಇಸ್ಲಾಮಿಕ್ ಬೋಧಕರು ಪ್ರವಾದಿಯ ದಿನಗಳ ಅವಲೋಕನದ ನಿಟ್ಟಿನಲ್ಲಿ, ಆ ಪ್ರಾಂತ್ಯಕ್ಕೆ ಲಿಪಿಬದ್ಧ ಅಕ್ಷರವನ್ನು ತಂದ ಹಾಗೂ ಕಾನೂನನ್ನು ರೂಪಿಸುವ ಮೂಲಕ ವ್ಯವಸ್ಥೆಯನ್ನು ಜಾರಿಗೊಳಿಸಿದ ಪ್ರತಿನಿಧಿಗಳೆನಿಸಿದ್ದಾರೆ. ಆಧುನಿಕತೆಯೆಡೆಗಿನ ಪಲ್ಲಟವು ನಿಶ್ಚಯವಾಗಿ ಅದಕ್ಕೂ ಮುಂಚೆಯೇ ಘಟಿಸಿತು. ಆ ಪ್ರಕ್ರಿಯೆಯು ಪ್ರಾರಂಭದಲ್ಲಿ ಹೆಚ್ಚು ಪ್ರಬಲವಾಗಿ ನಡೆದದ್ದು ಪಶ್ಚಿಮ ಯುರೋಪ್ ಮತ್ತು ಅದರ ಉತ್ತರ ಅಮೆರಿಕಾದ ವಸಾಹತುಗಳಲ್ಲಿ. ೧೯೧೪ರ ಮುಂಚೆ ಜಗತ್ತಿನ ಬಹುತೇಕ ಭಾಗಗಳಲ್ಲಿ ಜನರು ಈ ಸಾರ್ವಲೌಕಿಕ ಆಧುನಿಕತೆಯೊಂದಿಗೆ ಬಹಳ ವಿಭಿನ್ನ ರೀತಿಯಲ್ಲಿ ಸೆಣಸುತ್ತಿದ್ದರೇ ಹೊರತು, ಪಶ್ಚಿಮವನ್ನು ಸಾರಾಸಗಟಾಗಿ ಅನುಕರಿಸುತ್ತಿರಲಿಲ್ಲ. ಪಶ್ಚಿಮವು ಆಧುನಿಕತೆಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಂತೆಯೇ ಆಧುನಿಕತೆಯನ್ನು ಕೆಲಕಾಲದ ಮಟ್ಟಿಗೆ ನಿಯಂತ್ರಿಸಿದ್ದೂ ಹೌದು. ಹತ್ತೊಂಬತ್ತನೆಯ ಶತಮಾನದ ನಡುಭಾಗದ ಹೊತ್ತಿಗೆ, ಪ್ರಪಂಚದಾದ್ಯಂತ ಹಲವಾರು ಹೊಸ ಅನುಕರಣಾಯೋಗ್ಯರು ಮತ್ತು ನಿಯಂತ್ರಕರು ಹೊಮ್ಮಿದ್ದೂ ಉಂಟು. ಭಾಗಶಃ ತನಗೆ ತಾನೇ ರೂಪಿಸಿಕೊಂಡ ಜಪಾನೀ ಆಧುನಿಕತೆ ಅವುಗಳಲ್ಲಿ ಅತ್ಯಂತ ಮಹತ್ವದ್ದು.

ಈ ಕೃತಿ ಸುಮಾರು ನೂರಾ ನಲವತ್ತು ವರ್ಷಗಳ ಜಾಗತಿಕ ಇತಿಹಾಸವನ್ನು ಒಳಗೊಂಡಿದೆ. ಆ ಅವಧಿಯಲ್ಲಿ ಜಗತ್ತಿನ ಸಮಾಜಗಳು ಒಂದು ರೀತಿಯ ಸಮರೂಪತೆಯತ್ತ ಸಾಗಿದ್ದನ್ನು ನೋಡಬಹುದು. ಹೋಲಿಸಬಹುದಾದಂತಹ ಬದಲಾವಣೆಯ ಪ್ರಕ್ರಿಯೆಗಳು ಸಹಸ್ರಾರು ವರ್ಷಗಳಿಂದ ಮುಂದುವರಿಯುತ್ತಿರುವುದು ನಿಜವೇ. ವಿಶ್ವ ಧರ್ಮಗಳ ಪ್ರಸರಣವು ಸ್ವತಃ ಸಮರೂಪತೆಯೆಡೆಗಿನ ಗಮನಾರ್ಹ ಪಲ್ಲಟಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ಶಾರೀರಕ ಆಚರಣೆಯಲ್ಲಿನ ಪಲ್ಲಟಗಳನ್ನು ಒಳಗೊಂಡಿದೆ. ಸುಮಾರು ೧೭೫೦ರ ನಂತರ ಸಾಮಾಜಿಕ ಸಂಘಟನೆಯ ಪ್ರಮಾಣ ಮತ್ತು ಆಕಾಂಕ್ಷೆಗಳು ಬಹುಶಃ ಕೇವಲ ಎರಡೇ ಪೀಳಿಗೆಗಳಲ್ಲಿ ವ್ಯಾಪಕವಾಗಿ ಹಿಗ್ಗಿದವು. ಪಶ್ಚಿಮದಲ್ಲಿನ ಹಾಗೂ ಪಶ್ಚಿಮೇತರ ಭಾಗಗಳಲ್ಲಿನ ಹೆಚ್ಚು ತ್ವರಿತಗತಿಯ ಸಂಪರ್ಕಗಳು, ಬೃಹತ್ ರಾಜಕೀಯ ಸಂಘಟನೆಗಳು, ಮತ್ತು 'ನಾಗರಿಕತೆ'ಗೆ ಸಂಬಂಧಿಸಿದ ಹೆಚ್ಚು ಮಹತ್ವಾಕಾಂಕ್ಷೆಯ ವಿಚಾರಧಾರೆಗಳು ಈ ಬದಲಾವಣೆಗಳಿಗೆ ಶಕ್ತಿಯನ್ನು ನೀಡಿದವು. ಅದೇ ಹೊತ್ತಿನಲ್ಲಿ, ಸಮಾಜಗಳು ತಮ್ಮೊಳಗೇ ಇನ್ನಷ್ಟು ಸಂಕೀರ್ಣವಾಗುತ್ತಾ, ತೀವ್ರ ಶ್ರೇಣೀಕರಣಕ್ಕೆ ಪಕ್ಕಾದವು. ಸಂಪತ್ತು ಮತ್ತು ಸಾಮರ್ಥ್ಯದ ಮಟ್ಟಿಗೆ ಸಮಾಜಗಳ ನಡುವಿನ ವ್ಯತ್ಯಾಸಗಳು ಹೆಚ್ಚು ಸುಸ್ಪಷ್ಟಗೊಂಡವು. ಈ ವಿದ್ಯಮಾನವನ್ನೇ ಬೇರೆ ಬೇರೆ ಸಮಾಜಕ್ಕೆ ಸೇರಿದ ಜನರು ಬೇರೆ ಬೇರೆ ರೀತಿಯಲ್ಲಿ 'ಆಧುನಿಕ' ಎಂಬುದಾಗಿ ಅರ್ಥೈಸಿಕೊಂಡರು. ಈ ಸ್ಥೂಲ ಹೇಳಿಕೆಗಳು, ರಾಜಕೀಯ, ಸಾಂಸ್ಕೃತಿಕ, ಮತ್ತು ಆರ್ಥಿಕ ಬದಲಾವಣೆಗಳನ್ನು ಒಟ್ಟಾಗಿ ತಂದು ಯಾವುದಕ್ಕೂ ಅತಿಯಾದ ಒತ್ತನ್ನು

ನೀಡದೆ, ಅವು ಪರಸ್ಪರ ಹೇಗೆ ಪ್ರಭಾವಿಸಿದವು ಎಂಬುದನ್ನು ತೋರಿಸಿ, ವಿಶ್ಲೇಷಣಾತ್ಮಕ ಚರಿತ್ರೆಯೊಂದಕ್ಕೆ ಪ್ರಾರಂಭಿಕ ನೆಲೆಯನ್ನು ಒದಗಿಸುತ್ತವೆ.

**ಪ್ರಮಾಣಕಗಳ ಪಾಲನೆ: ಶಾರೀರಕ ಆಚರಣೆ**

ಇದೀಗ ಈ ಅಧ್ಯಾಯವು ಸ್ಪಷ್ಟ ಸಂವೇದನೆಯೊಂದರ ಸಮರೂಪತೆಯ ಉದಾಹರಣೆಯತ್ತ ಗಮನಹರಿಸುತ್ತದೆ: ಅದೆಂದರೆ, ಉಡಿಗೆತೊಡಿಗೆ ಮತ್ತು ಶಾರೀರಕ ವರ್ತನೆ. ಉಡಿಗೆತೊಡಿಗೆ ಮತ್ತು ವರ್ತನೆಗಳಲ್ಲಿ ಸಾಮ್ಯತೆ ಇದ್ದರೂ ಸಹ ಜನರ ಆಲೋಚನೆಗಳು ಮತ್ತು ನಂಬಿಕೆಗಳಲ್ಲಿ ವ್ಯತ್ಯಾಸಗಳಿರಬಹುದು. ಆದರೂ, ಕನಿಷ್ಟ ಪಕ್ಷ ಈ ಸಾಮ್ಯತೆಯು ಜನರು ತಾವು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ನಿರ್ದಿಷ್ಟ ರೀತಿಯಲ್ಲಿಯೇ ಇರಬೇಕು ಎನ್ನುವ ಅವಶ್ಯಕತೆಯನ್ನು ತಿಳಿಸುತ್ತದೆ. ೧೭೮೦ರಲ್ಲಿ ಜಗತ್ತಿನ ಅತ್ಯಂತ ಪ್ರಬಲ ಗಂಡಸರು ಚೀನೀ ಮ್ಯಾಂಡರಿನ್ ನೀಳುಡುಪುಗಳು, ಫ್ರೆಂಚ್ ಶೈಲಿಯ ಕಸೂತಿ ಹಾಕಿದ ಫ್ರಾಕ್ ಕೋಟುಗಳು, ಪೆಸಿಫಿಕ್ ಮತ್ತು ಆಫ್ರಿಕಾದ ಭಾಗಗಳ ವಾಡಿಕೆಯ ಮನೆಯುಡುಪು, ಹೀಗೆ ಬಗೆಬಗೆಯ ದಿರಿಸುಗಳನ್ನು ಧರಿಸುತ್ತಿದ್ದರು. ೧೯೧೦ಳರ ಹೊತ್ತಿಗೆ ಸಾರ್ವಜನಿಕ ಕಾರ್ಯಕ್ಷೇತ್ರಗಳಲ್ಲಿ ವ್ಯವಹರಿಸುವ ಅತ್ಯಂತ ಪ್ರಮುಖ ಪುರುಷರು ತಾವು ಎಲ್ಲಿಯೇ ಇದ್ದರೂ, ಅಧಿಕ ಸಂಖ್ಯೆಯಲ್ಲಿ  ಪಾಶ್ಚಿಮಾತ್ಯ ಶೈಲಿಯ ಪೋಷಾಕನ್ನೇ ಧರಿಸಲಾರಂಭಿಸಿದ್ದರು. ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದ ಬ್ರಿಟನ್ ಮತ್ತು ಉತ್ತರ ಅಮೆರಿಕಾಗಳಲ್ಲಿ ಕ್ರಿಶ್ಚಿಯನ್ ಪುನರುಜ್ಜೀವನದ ಧರ್ಮಬೋಧಕರ ಮೆಚ್ಚುಗೆ ಗಳಿಸಿದ್ದ ತಲೆಟೊಪ್ಪಿ ಮತ್ತು ಕಪ್ಪು ಬಣ್ಣದ ಮುಂಜಾನೆಯ ಕೋಟುಗಳನ್ನು ಚೀನೀ ರಾಷ್ಟ್ರೀಯವಾದಿಗಳು ಮತ್ತು ನವ ಜಪಾನಿನ ನಾಯಕರು ಧರಿಸಲಾರಂಭಿಸಿದ್ದನ್ನು ಗಮನಿಸಬಹುದು.

ಈ ಗಾಂಭೀರ್ಯವು, ಅದಕ್ಕೂ ಹಿಂದೆ ಕುಲೀನ ಗಂಡಸರು ಮತ್ತು ಸಮಕಾಲೀನ ಹೆಂಗಸರು ತೊಡುತ್ತಿದ್ದ ಭರ್ಜರಿಯಾದ ಸಂಕೀರ್ಣ ದಿರಿಸುಗಳಿಗೆ ತದ್ವಿರುದ್ಧವಾದ ಹೊಣೆಗಾರಿಕೆ ಮತ್ತು ಸ್ವಯಂ-ಶಿಸ್ತನ್ನು ಸೂಚಿಸುತ್ತಿತ್ತು. ಈ ನಿಟ್ಟಿನಲ್ಲಿ, ದ್ವಂದ್ವಯುದ್ಧ ಮತ್ತು ಅಬ್ಬರದ ಔತಣ ಸಮಾರಂಭಗಳ ಆಚರಣೆಯ ಪರಿತ್ಯಾಗವನ್ನು ಇಲ್ಲಿ ಗಮನಿಸಬಹುದು. ಈ ಬದಲಾವಣೆಯು ಪಾಶ್ಚಾತ್ಯ ಉಡಿಗೆಯ ಸ್ಪಷ್ಟ ಸ್ವೀಕರಣದಲ್ಲಿ ಮಾತ್ರವಲ್ಲದೆ, ಪಾಶ್ಚಾತ್ಯವಲ್ಲದ ದಿರಿಸುಗಳಲ್ಲಿ ಅಥವ ದಿರಿಸಿನ ಸಮ್ಮಿಶ್ರ ಪ್ರಕಾರಗಳಲ್ಲಿನ ಅದೇ ರೀತಿಯ ಸಮರೂಪತೆಯ ಸಂವೃದ್ಧಿಯಲ್ಲಿಯೂ ಕಾಣಿಸಿಕೊಂಡಿತೆಂಬುದು ಪ್ರಮುಖವಾದುದು. ಚೀನಾ ಮತ್ತು ಜಪಾನಿನಲ್ಲಿ ಉಡುಪು ಸುಧಾರಣಾ ಚಳುವಳಿಗಳು ಪೋಷಾಕು ಮತ್ತು ಕಿಮೊನೊಗಳನ್ನು ತಯಾರಿಸುವ ಮತ್ತು ಧರಿಸುವ ಮಾದರಿಗಳನ್ನು ಒದಗಿಸಲು ಪ್ರಯತ್ನಿಸಿದವು. ಈ ಉಡಿಗೆತೊಡಿಗೆಗಳಲ್ಲಿನ ಸಮರೂಪತೆಯ ಸಂವೃದ್ಧಿಯು, ಎಲ್ಲ ರೀತಿಯ ಕಾಮಪ್ರಚೋದಕ ಹಾಗೂ ಅತಿರೇಕದ ವರ್ತನೆಗಳಿಗೆ ಕಡಿವಾಣ ಹಾಕುವವರೆಗೂ ಹೋಯಿತು. ಭಾರತೀಯ ಸಮಾಜ ಸುಧಾರಕರು ಹೋಳಿ ಹಬ್ಬದಲ್ಲಿ ಜನರು ಸಾರ್ವಜನಿಕವಾಗಿ ಅಶ್ಲೀಲ ಹಾಡುಗಳನ್ನು ಹಾಡುವ ಸಂಪ್ರದಾಯವನ್ನು ನಿಲ್ಲಿಸಲು ಪ್ರಯತ್ನಿಸಿದ್ದನ್ನು ಉದಾಹರಣೆಯಾಗಿ ನೋಡಬಹುದು.

ಈ ಸಮರೂಪತೆ ಸೂಕ್ಷ್ಮವಾಗಿ ಮಾರ್ಪಡಿಸಲ್ಪಟ್ಟ ಉಡುಪುಗಳಲ್ಲೂ ಕಾಣಿಸಿಕೊಂಡಿತು. ಜನರು ಹಲವಾರು ಕಾರಣಗಳಿಗಾಗಿ ತಮ್ಮ ವಿಶಿಷ್ಟತೆಯ ಛಾಪನ್ನು ಮೂಡಿಸಲು ಬಯಸುತ್ತಿದ್ದರು. ಸಮರೂಪತೆ (uniformity) ಎಂದರೆ ಏಕರೂಪತೆ (homogeneity) ಅಲ್ಲ. ದೊಡ್ಡ ಪ್ರಮಾಣದಲ್ಲಿ ಸಾಮ್ಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ಆಚರಣೆಗಳ ಹೊಂದಾಣಿಕೆ. ನ್ಯೂಜಿಲ್ಯಾಂಡಿನ ಆಕ್ಲ್ಯಾಂಡಿನಲ್ಲಿರುವ ನ್ಯಾಶನಲ್ ಗ್ಯಾಲರಿಯ ಗೋಡೆಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ಮಾವೊರಿ ಪ್ರಮುಖರ ವರ್ಣಚಿತ್ರಗಳು ಈಗಲೂ ಅವರ ದೇಹದ ಮೇಲಿನ ಬಣ್ಣಬಣ್ಣದ ಸಾಂಪ್ರದಾಯಿಕ ಹಚ್ಚೆಗಳನ್ನು ಬಿಂಬಿಸುತ್ತಿದ್ದರೂ ಸಹ ಅನೇಕ ಪ್ರಮುಖರು ಕಪ್ಪು ಕೋಟನ್ನು ಧರಿಸಿ ಬಿಳಿಯ ಬಿಲ್ಲುಗಂಟುಳ್ಳ ಟೈ (bow tie) ಧರಿಸಿರುವುದನ್ನು ಕಾಣಬಹುದು. ಮಹಾನ್ ಅಮೆರಿಕನ್ ಇಂಡಿಯನ್ ಯುದ್ಧನಾಯಕ ಗೆರೊನಿಮೊನ

(ಗೊಯಾತ್ಲೆ) ಸಮಕಾಲಿಕ ಭಾವಚಿತ್ರಗಳಲ್ಲಿ ಆತ ಸೂಟು ಹಾಗೂ ನಡುವಂಗಿಯನ್ನು ಧರಿಸಿರುವುದನ್ನು ಮತ್ತು ಯೋಧನಂತೆ ಕೈಯಲ್ಲಿ ಬಂದೂಕನ್ನು ಹಿಡಿದು ವಿಶೇಷ ಭಂಗಿಯಲ್ಲಿರುವುದನ್ನು ಕಾಣಬಹುದು. ತನ್ನ ಬದುಕಿನ ನಂತರದ ವರ್ಷಗಳಲ್ಲಿ ಆತ ಜೀವನೋಪಾಯಕ್ಕಾಗಿ ಇಂತಹ ಸಹಿಹಾಕಿದ ಭಾವಚಿತ್ರಗಳನ್ನು ಮಾರುತ್ತಿದ್ದ.

ಮಿಲಿಟರಿ ಪೋಷಾಕುಗಳೂ ಸಹ ಕೆಲವು ಆಂತರಿಕ ಮಾರ್ಪಾಡುಗಳನ್ನೊಳಗೊಂಡ ಶೈಲಿಯೊಂದಿಗೆ ಸಮರೂಪತೆಯತ್ತ ಸಾಗಿದ್ದವು. ಮೆತ್ತೆಯನ್ನು ತುಂಬಿದ ಯುದ್ಧಕವಚ, ಮತ್ತು ಸಮುರಾಯ್‌ನ ಲೋಹದ ಶಿರಸ್ತ್ರಾಣ, ಒಟೊಮನ್ ಅರಮನೆಯ ಅಂಗರಕ್ಷಕ ಜ್ಯಾನಿಸರಿ (janissary) ಅಥವಾ ಎದೆಕವಚ ತೊಟ್ಟು ಕುದುರೆಯ ಮೇಲೆ ಕುಳಿತಿರುವ ಆಸ್ಟ್ರಿಯಾದ ಕ್ವಿರಸಿಅರ್ (cuirassier), ಈ ವೈವಿಧ್ಯಗಳೆಲ್ಲವೂ ಒಂದು ಶತಮಾನದೊಳಗೆ ಮಾಯವಾಗಿ ನೀರಸವಾಗಿ ಕಾಣುವ ಕಾರ್ಯ ಸಮರ್ಥ (operational) ಪೋಷಾಕುಗಳು ಬಂದವು. ಇದೇ ಮಾದರಿಯ, ಬ್ರಿಟಿಷ್ ಭಾರತೀಯ ಸೈನ್ಯವು 'ಖಾಕಿ' ಎಂದು ಕರೆಯುತ್ತಿದ್ದ ಬೂದುಗಂದು ಬಣ್ಣದ ಉಡುಪು, ೧೮೯೯-೧೯೦೨ರ ನಡುವಿನ ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಮರೆಯಲ್ಲಿ ನಿಂತು ಗುಂಡು ಹೊಡೆಯುವ ವೈರಿಗಳಿಂದ ಬ್ರಿಟಿಷ್ ಸೈನಿಕರಿಗೆ ಸ್ವಲ್ಪ ಮಟ್ಟಿನ ರಕ್ಷಣೆ ನೀಡಿತ್ತು. ಅದೇ ಹೊತ್ತಿಗೆ, ಮೇಲ್ವರ್ಗದ ಗಂಡಸರ ಸಾಂಪ್ರದಾಯಿಕ ಉಡುಪೇ ಒಂದು ರೀತಿಯ ಸಮವಸ್ತ್ರದಂತಿತ್ತು. ಈಜಿಪ್ಟ್, ಅಲ್ಜೀರಿಯಾ, ಮತ್ತು ಮಲಯಾಗಳಲ್ಲಿ ಸಮಾಜ ಸುಧಾರಕರು 'ಫೆಸ್' (Fez) ಎಂಬ ಒಟೊಮನ್ ಶೈಲಿಯ ತುದಿ ಕತ್ತರಿಸಿದ ಶಂಕುವಿನಾಕಾರದ, ಮಾಸಲು ಕೆಂಪಾದ ಗೊಂಡೆಯ ಕುಚ್ಚುಳ್ಳ ತುರ್ಕಿಟೊಪ್ಪಿಗೆಗಳನ್ನು ಧರಿಸುತ್ತಿದ್ದರು. ಇದು ಪಾಶ್ಚಿಮಾತ್ಯ ಶೈಲಿಯ ಹ್ಯಾಟಿನ ರೂಪಾಂತರವಷ್ಟೆ. ಇಸ್ಲಾಮಿಕ್ ಪ್ರಾರ್ಥನೆಗೆ ಸಹ ಇದು ಸೂಕ್ತವಾಗಿತ್ತು. ತಲೆಯ ಸುತ್ತ ಸುತ್ತಬೇಕಾದ ಸಾಂಪ್ರದಾಯಿಕ ರುಮಾಲಿನ ಕಿರಿಕಿರಿಯನ್ನು ತಪ್ಪಿಸಲು, ಇದನ್ನು ಒಂದೇ ಬಟ್ಟೆಯ ತುಂಡಿನಿಂದ ಮಾಡಲಾಗಿತ್ತು.

ಸಮರೂಪತೆಯ ಉಡಿಗೆತೊಡಿಗೆಯೆಡೆಗಿನ ಒಲವು ಕಾರ್ಮಿಕ ವರ್ಗಗಳು, ರೈತರು ಹಾಗೂ ಕೆಳದರ್ಜೆಯ ಸಮುದಾಯಗಳ ಗಂಡಸರಲ್ಲಿ ಅಷ್ಟಾಗಿ ಕಂಡುಬರಲಿಲ್ಲ. ಕ್ರಾಂತಿಕಾಲದಲ್ಲಿ ಪ್ಯಾರಿಸ್ಸಿನಲ್ಲಿ ಸತ್ತ ಬಡವರನ್ನು ಕುರಿತ ಇತಿಹಾಸಕಾರ ರಿಚರ್ಡ್ ಕಾಬ್ (Richard Cobb) ಅವರ ಅಧ್ಯಯನವು, ಅವರೆಲ್ಲರು ಬೇಡವಾಗಿ ಬಿಸಾಡಲ್ಪಟ್ಟ ವಿವಿಧ ಕಾಲದ ಹಾಗೂ ಶೈಲಿಯ ತುಂಡುಪಂಡುಗಳನ್ನು (bits and pieces) ಅಥವಾ ಸಾದ್ಯಂತವಾಗಿ ತೇಪೆ ಹಾಕಿದ ಬಟ್ಟೆಗಳನ್ನು ಧರಿಸಿದ್ದರು ಎಂಬುದಾಗಿ ತಿಳಿಸುತ್ತದೆ. ೧೯೦೦ರ ಹೊತ್ತಿಗೂ ಬಡವರಿಗೆ ಉತ್ತಮ ಉಡಿಗೆತೊಡಿಗೆಗಳು ಶಕ್ಯವಿರಲಿಲ್ಲ. ಆದರೂ ಕಾರ್ಖಾನೆಯ ಸ್ಥಿತಿಗತಿಗಳು ಹಾಗೂ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾ ಚಳುವಳಿಗಳ ಫಲವಾಗಿ ಸಾರ್ವಜನಿಕ ವಲಯಗಳಲ್ಲಿನ ಗಂಡಸರು ಪ್ರಾಂತೀಯ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳ ನಡುವೆಯೂ ಒಂದೇ ತರದ ಉಡಿಗೆಯನ್ನು ಹೆಚ್ಚಾಗಿ ಧರಿಸಲು ಪ್ರಾರಂಭಿಸಿದರು. ೧೭೮೦ರಲ್ಲಿದ್ದ ತರಾವರಿಯ ಸ್ಕರ್ಟು, ಧೋತಿ, ಪೈಜಾಮ, ಕಿಮೊನೊ, ಮತ್ತು ನಿಲುವಂಗಿಗಳ ಬದಲಾಗಿ ಚರ್ಮದ ಬೂಟು, ಬಟ್ಟೆಯ ಟೊಪ್ಪಿ, ಶರ್ಟು ಮತ್ತು ಪ್ಯಾಂಟುಗಳು ಕಾಣಿಸಿಕೊಳ್ಳಲಾರಂಭಿಸಿದವು. ಆಫ್ರಿಕನ್ ಮತ್ತು ದಕ್ಷಿಣ ಅಮೆರಿಕನ್ ಇಂಡಿಯನ್ ಗಣಿ ಕೈಗಾರಿಕೆಗಳಲ್ಲಿ, ಕಾರ್ಮಿಕ ವರ್ಗದ ದರ್ಜೆಯ ಚಿಹ್ನೆಯಾಗಿ ಸಮರೂಪತೆಯ ಗುರುತುಗಳ ಪ್ರಸರಣವನ್ನು ಕಾಣಬಹುದು. ಇದಕ್ಕೆ ವ್ಯತಿರಿಕ್ತವಾಗಿ, ಪ್ರಪಂಚದ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಪೆಸಿಫಿಕ್ ಮತ್ತು ಆಫ್ರಿಕಾಗಳಲ್ಲಿನ ನೆಲಸಿಗರು (settlers) ಮತ್ತು ವಲಸಿಗ ಆಡಳಿತಾಧಿಕಾರಿಗಳು, ಬಿಳಿಯರಲ್ಲದವರು "ಸ್ಥಳೀಯ ಉಡುಪನ್ನು" ಉಳಿಸಿಕೊಳ್ಳಬೇಕೆಂದು ಒತ್ತಾಯಿಸುವ ಮೂಲಕ ಉದ್ದೇಶಪೂರ್ವಕವಾಗಿ ಬಿಳಿಯರಲ್ಲದ ಸ್ಥಳೀಯರ ಜನಾಂಗೀಯ ಹಾಗೂ ಸಾಮಾಜಿಕ ಅಂತಸ್ತಿನ ಕೆಳದರ್ಜೆಯು ಎದ್ದು ಕಾಣುವಂತೆ ಮಾಡಿದರು. ನ್ಯಾಸಾಲ್ಯಾಂಡಿನಲ್ಲಿ ಬ್ರಿಟಿಷ್ ಅಧಿಕಾರಿಗಳು ಆಫ್ರಿಕನ್ನರು ಬೂಟುಗಳನ್ನು ಧರಿಸುವುದನ್ನು ಆಕ್ಷೇಪಿಸಿದ್ದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಆದರೆ ಇಂತಹ ಕಾನೂನುಬದ್ಧ ಹೇರಿಕೆಗಳು ಹಳೆಯ ಉಡುಪಿನ ಪದ್ಧತಿಗಳ ಸಂಪನ್ನತೆಯನ್ನು ಸ್ವತಃ ಉಪೇಕ್ಷಿಸಿದವಲ್ಲದೆ, ದಾಸ್ಯದ ದ್ಯೋತಕವೆನಿಸಿದ ಸಮರೂಪತೆಯ ತಮ್ಮದೇ ಆದ ಪ್ರಕಾರಗಳನ್ನು (type) ಹೇರಿದವು.

ಶಿಷ್ಟವರ್ಗದ ಹಿರಿಯ ಹೆಂಗಸರ ಉಡಿಗೆತೊಡಿಗೆಗಳಲ್ಲಿ ಅಷ್ಟೇನೂ ಸಮರೂಪತೆ ಕಾಣಿಸಲಿಲ್ಲ. ಹಲವು ಸಮಾಜ ಸುಧಾರಕರು (ಗಂಡಸರು) ತಮ್ಮ ಹೆಂಗಸರಿಗೆ ಪಾಶ್ಚಿಮಾತ್ಯ ಶೈಲಿಗಳಿಗಿಂತಲೂ ಸಾಂಪ್ರದಾಯಿಕ ಉಡಿಗೆಯ ಪರಿಷ್ಕೃತ

ರೂಪಗಳನ್ನು ಸೂಚಿಸಿದರು. ಪ್ರಕ್ರಿಯೆ ಹಾಗೂ ಮಹತ್ವಾಕಾಂಕ್ಷೆಯ ನಿಟ್ಟಿನಲ್ಲಿ ಅಪಾಯಕಾರಿಯೆನಿಸಿದ ಆಧುನಿಕತೆಯು ಹೆಣ್ಣಿಗಿಂತಲೂ ಗಂಡಸಿಗೇ ಹೆಚ್ಚು ಸೂಕ್ತವೆಂದು ಭಾವಿಸಲಾಗಿತ್ತು. ಹಲವಾರು ಸಮಾಜಗಳಲ್ಲಿ ಹೆಂಗಸಿನ ಸ್ಥಾನ ಮನೆಯೊಳಗೆ ಎಂದು ನಿಗದಿಪಡಿಸಲಾಗಿದ್ದು, ಪುರುಷರ ಜಗತ್ತು ಹಾಗೂ ಅವರ ವ್ಯವಹಾರಗಳು, ೧೭೮೦ರ ಮುಂಚೆ ಇದ್ದದ್ದಕ್ಕಿಂತಲೂ ಹೆಚ್ಚು ಕಠೋರವಾಗಿ ಇದನ್ನು ಸೀಮಾಂಕನಗೊಳಿಸಿರುವುದನ್ನು (demarcate) ಕಾಣಬಹುದು.ಈ 'ಮನೆಯೊಳಗೆ' ಎಂಬ ಪರಿಕಲ್ಪನೆಯೇ 'ಹೊರಗಿನ ಲೋಕ'ದಲ್ಲಿದ್ದ ಸಮರೂಪತೆಗಳ ಫಲ. ಹೆಣ್ಣಿನ ಉಡಿಗೆತೊಡಿಗೆಗಳು ಅಲಂಕಾರಿಕವಾಗಿ ಮತ್ತು ನಿಭಾಯಿಸಲು ಕಷ್ಟವಾಗುವಂತೆ ಇದ್ದವು. ಈ ಹಿನ್ನೆಲೆಯಲ್ಲಿ, ಎಳೆಯ ಹೆಣ್ಣುಮಕ್ಕಳ ಪಾದಗಳನ್ನು ಸಹಜವಾಗಿ ಬೆಳೆಯಲು ಬಿಡದೆ, ನಿರ್ದಿಷ್ಟ ಆಕಾರದಲ್ಲಿಯೇ ಬೆಳೆಯಲು ಅನುವಾಗುವಂತೆ ಅವನ್ನು ಬಿಗಿಯಾಗಿ ಕಟ್ಟುತ್ತಿದ್ದ ಚೀನೀಯರ foot binding ಪದ್ಧತಿ ಮತ್ತು ಯುರೋಪಿನಲ್ಲಿ ಬಳಕೆಯಲ್ಲಿದ್ದ ಕಸೂತಿ ಅಂಚಿನ ರಟ್ಟುಗಟ್ಟಿದ ಬಟ್ಟೆಯಲ್ಲಿ ಮಾಡಿದ, ಮುಖ್ಯವಾಗಿ ತಿಮಿಂಗಿಲದ ಮೂಳೆಯ ಹಂದರ ಕೊಟ್ಟ ಒಳಕುಪ್ಪಸಗಳು (stays) ಹಾಗೂ ಗುತ್ತನಾಗಿ ಬಿಗಿದ ಹೆಂಗಸಿನ ಒಳಕುಪ್ಪಸಗಳ (corset) ನಡುವೆ ಸಾಮ್ಯತೆಯಿದೆ. ಆದಾಗ್ಯೂ, ಸ್ತ್ರೀಯರ ಕುರಿತಂತೆಯೂ ಸಮರೂಪತೆಯೆಡೆಗಿನ ಒಲವನ್ನು ಗಮನಿಸಬಹುದು. ೧೭೮೦ರಲ್ಲಿ ಬಂಗಾಲದಿಂದ ಹಿಡಿದು ಫಿಜಿಯ ತನಕವೂ ಹೆಂಗಸು ಎದೆಯ ಭಾಗವನ್ನು ಬೆತ್ತಲೆಯಾಗಿ ಬಿಡುವುದು ಮರ್ಯಾದೆಸೂಚಕವಾಗಿದ್ದರೆ ೧೯೧೪ರ ಹೊತ್ತಿಗೆ ಕ್ರಿಶ್ಚಿಯನ್ ಮತಪ್ರಚಾರಕರು ಮತ್ತು ಸ್ಥಳೀಯ ನೀತಿಮಾರ್ಗದ ಸುಧಾರಕರು ತೆರೆದ ಎದೆಯು ಅಶ್ಲೀಲತೆಯ ಸಂಕೇತವೆಂದು ನಂಬಿಸುವಲ್ಲಿ ಯಶಸ್ವಿಯಾಗಿದ್ದರು. ಇದು ಶರೀರಕ್ಕೆ ಸಂಬಂಧಪಟ್ಟ ಆಚರಣೆಯನ್ನು ಅಸಾಧಾರಣವಾಗಿ ತಿರುವು ಮುರುವಾಗಿಸಿದ್ದರ ಒಂದು ಉತ್ತಮ ನಿದರ್ಶನ. ಮುಸ್ಲಿಮ್ ಲೋಕದಲ್ಲಿ ಮುಸ್ಲಿಂ ಮಹಿಳೆಯರ ಪೂರ್ತಿ ದೇಹವನ್ನು ಮುಚ್ಚುವ ಬುರ್ಖಾ ಸಾಕಷ್ಟು ಜನಪ್ರಿಯವಾಗುತ್ತಿತ್ತು. ಇಂದಿನ ಪಶ್ಚಿಮ ಜಗತ್ತಿನಲ್ಲಿ ಬುರ್ಖಾವನ್ನು ಮಧ್ಯಯುಗೀನ ಮೂಢಪದ್ದತಿಗೆ ತಳುಕು ಹಾಕಲಾಗುತ್ತದೆ. ಆದರೆ ವಾಸ್ತವವಾಗಿ ಬುರ್ಖಾ, ಒಂದು ಆಧುನಿಕ ದಿರಿಸೆಂದೇ ಹೇಳಬಹುದು. ಅದನ್ನು ತೊಟ್ಟ ಹೆಣ್ಣು, ಮನೆಯ ಏಕಾಂತತೆಯಿಂದ ಹೊರಬಂದು ಸಾರ್ವಜನಿಕ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಕೆಲಮಟ್ಟಿಗಾದರೂ ಭಾಗವಹಿಸಬಹುದಿತ್ತು. ಹೀಗಾಗಿ, ಸಂಪ್ರದಾಯವನ್ನು ಕುರಿತ ಈ ಆಗ್ರಹಗಳಲ್ಲಿಯೂ ಜಾಗತಿಕ ಸಮರೂಪತೆಯ ಸಂವೃದ್ಧಿಯ ಗುರುತನ್ನು ಗಮನಿಸಬಹುದು.

ಈ ಸಮರೂಪತೆಯ ಪ್ರವೃತ್ತಿಗೆ ಫ್ಯಾಶನ್ ಮತ್ತು ಜಾಹೀರಾತುಗಳು ಕೆಲಮಟ್ಟಿಗೆ ಕಾರಣವಾಗಿವೆ. ಪಶ್ಚಿಮ ಯುರೋಪು ಮತ್ತು ಅಮೆರಿಕಾಗಳ ಸಾಗರೋತ್ತರ ವ್ಯಾಪಾರದ ವಿಸ್ತರಣೆ ಮತ್ತು ಉತ್ಪಾದನೆಯ ಪ್ರಸರಣಗಳು ಸಾರ್ವತ್ರಿಕ ಶೈಲಿಗಳನ್ನು ಹರಡುವಲ್ಲಿ ಸಹಾಯಕವೆನಿಸಿದವು. ಪ್ರಭುತ್ವಗಳು ಮತ್ತು ಸಂಬಂಧಪಟ್ಟ ಸಂಸ್ಥೆಗಳ ಕ್ರಿಯೆ ಹಾಗೂ ಆಧುನಿಕತೆಯನ್ನು ಕುರಿತ ಸಾರ್ವಲೌಕಿಕ ಮಹತ್ವಾಕಾಂಕ್ಷೆಯು ಸಹ ಈ ಆರ್ಥಿಕ ಅನಿವಾರ್ಯಗಳಷ್ಟೇ ಪ್ರಮುಖವಾದುದು. ಅಂದರೆ, ಸಮರೂಪತೆಯು ಕೈಗಾರಿಕೆ ಮತ್ತು ಪ್ರಭುತ್ವದ ವಿಸ್ತರಣೆಯನ್ನು ಸಾಧ್ಯವಾಗಿಸಿದಂತೆಯೇ, ಅಸ್ಮಿತೆಯ ಮಹತ್ವಾಕಾಂಕ್ಷೆಗಳಲ್ಲಿನ ಬೌದ್ಧಿಕ ಬದಲಾವಣೆಯನ್ನು ಸಹ ಉಂಟುಮಾಡಿತು. ಉದಾಹರಣೆಗೆ, ೧೮೭೯ರ ಜಪಾನಿನಲ್ಲಿ ಆಧುನಿಕ ಸಾಮ್ರಾಜ್ಯಶಾಹಿ ರಾಷ್ಟ್ರಗಳೊಂದಿಗೆ ತನ್ನ ಸ್ಥಾನವನ್ನು ಪ್ರತಿಪಾದಿಸುವ ಸಲುವಾಗಿ ಮೆಯ್ಜಿ (Meiji) ಪ್ರಭುತ್ವವು, ತನ್ನ ಉದ್ಯೋಗಿಗಳು ಪಾಶ್ಚಿಮಾತ್ಯ ಉಡಿಗೆಯಲ್ಲೇ ಕೆಲಸಕ್ಕೆ ಬರತಕ್ಕದ್ದು ಎಂಬ ಆಜ್ಞೆಯನ್ನು ಹೊರಡಿಸಿತು. ಅತಿಯಾದ ಕಟ್ಟುಪಾಡುಗಳಿಲ್ಲದ ಸಂಯುಕ್ತ ಅಮೆರಿಕಾದಲ್ಲಿ ಸಹ ಗಣ್ಯತೆಯನ್ನು ಕುರಿತ ಪರಿಕಲ್ಪನೆಯ ಪ್ರಸರಣ ಹಾಗೂ ಸ್ಥಳೀಯ ನ್ಯಾಯವ್ಯವಸ್ಥೆಯ ಅಧಿಕೃತ ಆಜ್ಞೆಯು ಕ್ರಮೇಣ ತಲೆನರೆತ ನ್ಯಾಯಾಧೀಶರುಗಳೂ ಸಹ ಜೆಂಟಲ್ಮನ್ ಕೋಟುಗಳಲ್ಲಿ ಬರುವಂತೆ ಮಾಡಿತು. ದಿರಿಸಿನ ಸಮರೂಪತೆಯು ಅಧಿಕಾರಶಾಹಿಯ ಕಾರ್ಯವಿಧಾನಗಳ ಬಾಹ್ಯ ತೋರಿಕೆಯನ್ನು ಮತ್ತು ಆಂತರಿಕ ವಿಶ್ವಾಸಾರ್ಹತೆ ಹಾಗೂ ಗೌರವಾರ್ಹತೆಯ ಕುರುಹನ್ನು ಸೂಚಿಸುತ್ತದೆ.

ಈ ಸಮರೂಪತೆಯ ಬೆಳವಣಿಗೆಯನ್ನು ಎಲ್ಲರೂ ಶ್ಲಾಘಿಸಿದರು ಅಂತೇನಲ್ಲ. ವಿರೋಧ, ವಿವಾದಗಳು ಆ ಪ್ರಕ್ರಿಯೆಯ ವೈಶಿಷ್ಟ್ಯವಾಗಿತ್ತು. ತಮ್ಮನ್ನು ಅನುಕರಿಸುತ್ತಿದ್ದ "ದೇಶೀಯರನ್ನು" ಪಾಶ್ಚಿಮಾತ್ಯರು ಗೇಲಿ ಮಾಡಿದರೆ, ಸಾಂಸ್ಕೃತಿಕ ರಾಷ್ಟ್ರವಾದಿಗಳು ಪರದೇಶದವರನ್ನು ಅನುಕರಿಸುವ ದಾಸ್ಯವನ್ನು ಆಕ್ಷೇಪಿಸಿದರು. ಮುಸ್ಲಿಮ್ ಒಟೊಮನ್

ಸಂಪ್ರದಾಯವಾದಿಯೊಬ್ಬರ ೧೮೪೦ರಲ್ಲಿನ ಟೀಕೆ ಹೀಗಿದೆ: “ಯುರೋಪಿನಲ್ಲಿ ಕಂಡದ್ದೆಲ್ಲವನ್ನೂ ಇಲ್ಲಿ ಅನುಕರಿಸಬಹುದೆಂಬ ಭ್ರಾಂತಿಯು ಒಂದು ರಾಜಕೀಯ ಸಂಪ್ರದಾಯವಾಗಿ ಬೆಳೆದಿದೆ. ಉದಾಹರಣೆಗೆ - ರಶಿಯನ್ ಸಮವಸ್ತ್ರ, ಬೆಲ್ಜಿಯನ್ ಬಂದೂಕು, ಟರ್ಕಿಯ ಶಿರಸ್ತ್ರಾಣ, ಹಂಗೆರಿಯ ಜೀನು, ಇಂಗ್ಲಿಷ್ ಕತ್ತಿ, ಫ್ರೆಂಚ್ ಕವಾಯತುಗಳನ್ನು ಏಕಕಾಲಿಕವಾಗಿ (simultaneously) ಪರಿಚಯಿಸಿದ ಕಾರಣ, ಯುರೋಪಿನ ಒಂದು ವಿಕಟ ವಿಡಂಬನೆಯಂತಿರುವ ಸೈನ್ಯವೊಂದನ್ನು ನಾವು ಸೃಷ್ಟಿಸಿದ್ದೇವೆ. ೧೯೦೮ರ ಬಹಿಷ್ಕಾರವು ಒಂಟೆಯ ಕೂದಲಿನ ಟೊಪ್ಪಿಗಳ ಉತ್ಪಾದನೆಯನ್ನು ಸಿರಿಯಾದಲ್ಲಿ ಮರುಪ್ರಾರಂಭವಾಗುವಂತೆ ಮಾಡುವವರೆಗೂ, ಇಡೀ ಜಗತ್ತಿಗೇ ಪರಿಚಯವಿದ್ದು, ಹೆಚ್ಚು ಅನುಕರಣೀಯವೆನಿಸಿದ್ದ ಒಟೊಮನ್ ಶೈಲಿಯ ಉಡುಪು ‘ಫೆಸ್’ ತಯಾರಾಗುತ್ತಿದ್ದದ್ದು ಆಸ್ಟ್ರಿಯಾದಲ್ಲಿ ಎಂಬುದು ವ್ಯಂಗ್ಯವೇ ಸರಿ ಎಂಬ ಅಂಶವನ್ನು ಆತನು ಸೇರಿಸಬಹುದಿತ್ತು.

ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಜಾಗತಿಕ ಮಟ್ಟದ ರೂಢಿಗಳಾಗಿ ರೂಪುಗೊಂಡ ಪ್ರಭುತ್ವದ ಪ್ರಭಾವವನ್ನು ಮತ್ತು ಸಾಮಾಜಿಕ ಶಿಸ್ತೀಕರಣದ ವಿಧಾನಗಳ ನಕ್ಷೆಯನ್ನು ಮಾನವಶಾಸ್ತ್ರಜ್ಞರು ಮತ್ತು ಸಮಾಜಿಕ ಇತಿಹಾಸಕಾರರು, ದೇಹವೆಂಬ ‘ಘಟನಾಸ್ಥಳದ’ (site) ಮೇಲೆ ಮೂಡಿಸುತ್ತಾರೆ. ಉಡಿಗೆತೊಡಿಗೆಯಲ್ಲಿನ ಸಮರೂಪಗಳಲ್ಲದೇ ಸಮಯಪಾಲನೆಯು ಮತ್ತೊಂದು ಗಮನಾರ್ಹ ದೈಹಿಕ ಶಿಸ್ತು ಎನಿಸಿತ್ತು. ಹದಿನೇಳು ಹಾಗೂ ಹದಿನೆಂಟನೆಯ ಶತಮಾನದ ಕೊನೆಯ ಹೊತ್ತಿಗಾಗಲೇ ಚಿಕ್ಕ ಜೇಬುಗಡಿಯಾರಗಳು ಯುರೋಪು ಮತ್ತು ಅದರ ವಸಾಹತುಗಳಾದ್ಯಂತ ಹರಡಿದ್ದನ್ನು ನೋಡಬಹುದು. ಕೆಲಸಗಾರರ ನಿಯಂತ್ರಣದ ಅನೇಕ ಕ್ರಮಬದ್ಧ ಪದ್ಧತಿಗಳನ್ನು ಅಮಾನುಷವಾಗಿ ಸೃಷ್ಟಿಸಲಾದ ಗುಲಾಮರ ಪ್ಲಾಂಟೇಷನ್ನುಗಳನ್ನು ಯಜಮಾನನ ಗಡಿಯಾರಕ್ಕೆ ತಕ್ಕಂತೆ ಸದ್ದುಮಾಡುತ್ತಿದ್ದ ಘಂಟೆಗಳ ಮೂಲಕ ನಿಯಂತ್ರಸಲಾಗುತ್ತಿತ್ತು. ೧೭೫೦ರ ಹೊತ್ತಿಗೆ, ಯುರೋಪಿನ ಶ್ರೀಮಂತ ಭಾಗಗಳಾದ ಇಂಗ್ಲೆಂಡ್, ಉತ್ತರ ಜರ್ಮನಿ, ಮತ್ತು ಹಾಲೆಂಡುಗಳಲ್ಲಿ ಹಾಗೂ ಹದಿಮೂರು ಕಾಲನಿಗಳ (Thirteen Colonies) ಸಣ್ಣ ರೈತರು ಮತ್ತು ವಿಶೇಷ ಕಾರ್ಯಕೌಶಲ್ಯವುಳ್ಳ ಕೆಲಸಗಾರರ ಹತ್ತಿರ ಈ ಗಡಿಯಾರಗಳಿದ್ದವು. ಜಗತ್ತಿನಾದ್ಯಂತ ಈ ಕೈ ಗಡಿಯಾರಗಳು ಮತ್ತು ಗಡಿಯಾರಗಳು ತೋರಿಸುತ್ತಿದ್ದ ಸಮಯವು ಸಹ ಒಮ್ಮುಖವಾಗಿತ್ತು. ರಶಿಯನ್ ಸಾಮ್ರಾಜ್ಯವು ಸೈಬೀರಿಯಾ ಹಾಗೂ ಅಂತಿಮವಾಗಿ ಉತ್ತರ ಚೀನಾದಲ್ಲಿ ವಿಸ್ತರಿಸಿದಂತೆಲ್ಲಾ ಸ್ಥಳೀಯ ಸಮಯದ ಜೊತೆ ತಾಳೆಯಾಗುವ ವ್ಯವಸ್ಥೆಗಳನ್ನು ರೂಪಿಸಿಕೊಳ್ಳಬೇಕಾಯಿತು. ಹತ್ತೊಂಬತ್ತನೆಯ ಶತಮಾನವು ಮುಂದುವರೆದಂತೆ, ಅವಲಂಬಿತ ಅ-ಯುರೋಪೀಯ (non-european) ಸಮಾಜಗಳಲ್ಲಿ ಸಹ ಹೆಚ್ಚು ನಿಖರ ಮತ್ತು ಸಮಕಾಲಿಕ (synchronised) ಸಮಯಪಾಲನೆಯ ಅನಿವಾರ್ಯ ಒದಗಿತು. ಇಲೆಕ್ಟ್ರಿಕ್ ಟೆಲಿಗ್ರಾಫಿನ ಪ್ರಸರಣವು, ಜಗತ್ತಿನಾದ್ಯಂತ ಹಾಗೂ ಹದಿನೆಂಟನೆಯ ಶತಮಾನದಷ್ಟು ಹಳೆಯ ಸ್ಥಳೀಯ ಸಮಯದ ವ್ಯವಸ್ಥೆಯೇ ಈಗಲೂ ಚಾಲ್ತಿಯಲ್ಲಿದ್ದ ಚೀನಾ ಮತ್ತು ಭಾರತದಂತಹ ಜನಭರಿತ ದೇಶಗಳಲ್ಲಿ ಸಮಯದ ವ್ಯವಸ್ಥೆಯನ್ನು ಒಂದೇ ಪ್ರಮಾಣಕ್ಕೆ ಒಗ್ಗಿಸುವುದನ್ನು (Standardization) ಸಾಧ್ಯವಾಗಿಸಿತು. ಭಾರತ ಮತ್ತು ಚೀನಾದ ಕರಾವಳಿ ನಗರಗಳಂತೆಯೇ ಇಲ್ಲಿಯೂ, ಪುರಸಭೆಯ ಶ್ರೀಮಂತ ಕುಳಗಳು ಬಜಾರುಗಳು ಮತ್ತು ಕಛೇರಿಗಳ ಗತಿಯನ್ನು (rhythm) ನಿಯಂತ್ರಿಸಲು ಬೃಹತ್ ಪ್ರಮಾಣದ ಗಡಿಯಾರದ ಗೋಪುರಗಳನ್ನು ಕಟ್ಟಿಸಲು ಆರಂಭಿಸಿದ್ದರು. ಅವರೆಲ್ಲಾ ಮುಂಚೆ ಮಸೀದಿ ಅಥವಾ ಮಂದಿರಗಳಲ್ಲಿ ಹಣವನ್ನು ವಿನಿಯೋಗಿಸುತ್ತಿದ್ದರು.

೧೯೦೦ರ ಹೊತ್ತಿಗೆ ಶಾರೀರಕ ಆಚರಣೆಗಳಲ್ಲಿ ಒಂದಾದ ಮನುಷ್ಯ ಭಾಷೆಗಳಲ್ಲಿ ಸಹ ಪರಸ್ಪರ ಹೋಲಿಕೆ ಕಾಣಿಸಲಾರಂಭಿಸಿತ್ತು. ಪಾಶ್ಚಿಮಾತ್ಯ ಆಡಳಿತಗಾರರು, ಮಿಶನರಿಗಳು, ಮತ್ತು ಶಿಕ್ಷಣತಜ್ಞರು ಭಾಷೆಗಳು ಸಾಧ್ಯವಿದ್ದಲ್ಲಿ, ಪಾಶ್ಚಿಮಾತ್ಯ ಯುರೋಪಿಯನ್ ಭಾಷೆಗಳ ಮಾದರಿಗಳನ್ನು ಅನುಸರಿಸಬೇಕೆಂಬ ನಿಟ್ಟಿನಲ್ಲಿ ಅವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದ ಸರಳ ನಿಯಮಗಳಡಿ ತರಲು ಬಯಸಿದ್ದರು. ತಮ್ಮದೇ ರಾಷ್ಟ್ರೀಯ ಭಾಷೆಗಳ ಅಪೇಕ್ಷೆಯನ್ನು ಹೊಂದಿದ್ದ ಸ್ಥಳೀಯ ಮುತ್ಸದ್ದಿಗಳು ಮತ್ತು ಶಿಕ್ಷಕರಿಗೆ ಸಹ ಅದೇ ಆಸಕ್ತಿಯಿತ್ತು. ಉದಾಹರಣೆಗೆ, ಭಾರತದಲ್ಲಿ ಸಾಮಾನ್ಯ ಭಾಷೆಗಳಾಗಿ ಹೊಮ್ಮುತ್ತಿದ್ದ ಹಿಂದಿ ಮತ್ತು ಉರ್ದು ಭಾಷೆಗಳು ವಾಕ್ಯರಚನೆಯಲ್ಲಿ ಇಂಗ್ಲಿಷನ್ನು ಅನುಸರಿಸಲಾರಂಭಿಸಿದವು. ವಲಸೆ, ಗುಲಾಮಗಿರಿ, ಜಾಗತೀಕರಣಗಳನ್ನು ಪ್ರತಿಫಲಿಸುತ್ತಿದ್ದ ಹೊಸದಾಗಿ ರೂಪುಗೊಂಡ ಸಂಕರಿತ (hybrid)

ಭಾಷೆಗಳಾದ ಕ್ರಿಯೋಲ್, ಸ್ವಾಹಿಲಿ, ಮತ್ತು ಪಿಡ್ಜಿನ್ ಭಾಷೆಗಳು ವ್ಯಾಕರಣ ಮತ್ತು ನಿಯಮಗಳನ್ನೊಳಗೊಂಡ ತಮ್ಮದೇ ಆದ ಕಡತಗಳೊಂದಿಗೆ ಸಜ್ಜುಗೊಂಡಿದ್ದವು. ಸಾರ್ವಜನಿಕ ವ್ಯಕ್ತಿಯೆನಿಸಿಕೊಂಡವನು ಜಗತ್ತಿನಾದ್ಯಂತ ರಾಜಕೀಯ, ಧರ್ಮ, ಮತ್ತು ವಿಜ್ಞಾನದ ವಲಯಗಳಲ್ಲಿ ತನ್ನ ಸ್ಥಾನವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಆತನಿಗೆ ಸಾರ್ವಜನಿಕ ಧ್ವನಿಯೊಂದರ ಅಗತ್ಯವಿತ್ತು. ಫಿಲಡೆಲ್ಫಿಯ ಮತ್ತು ರೋಮಿನಿಂದ ಹಿಡಿದು ಕ್ಯೋಟೊ ಮತ್ತು ಫಿಜಿಯ ತನಕವೂ ಧರ್ಮಬೋಧೆ ಮತ್ತು ರಾಜಕೀಯ ಭಾಷಣಗಳಲ್ಲಿ ಸಾಮಾನ್ಯ ಸ್ವರೂಪಗಳು ಕಾಣಿಸಿಕೊಳ್ಳಲಾರಂಭಿಸಿದವು. ಇವು ಕೇವಲ ಪಾಶ್ಚಿಮಾತ್ಯ ಮತ್ತು ಕ್ರಿಶ್ಚಿಯನ್ ಮಾದರಿಗಳಾಗಿರಲಿಲ್ಲ. ಪ್ರವಾದಿಯ ಬದುಕಿನ ಬಗೆಗಿನ ಮುಸ್ಲಿಮ್ ಪ್ರವಚನಗಳು ಮತ್ತು ಬುದ್ಧನ ಕತೆಗಳನ್ನು ಹೇಳುವ ವಾಡಿಕೆಯ ಬ್ಲಾಕ್ ಪ್ರಿಂಟ್‌ಗಳ ಮಾದರಿಗಳೂ ಇದ್ದವು.

ಜಾಗತಿಕ ಸಮರೂಪತೆಯ ಇನ್ನೊಂದು ಪರಿಣಾಮವನ್ನು ಹೆಸರುಗಳನ್ನು ಕೊಡುವ ಆಚರಣೆಯಲ್ಲಿ ನೋಡಬಹುದು. ಪ್ರಿಂಟ್ ಮಾಧ್ಯಮ ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳ ಆಂದೋಲನಗಳು ಸಮಾಜದಾದ್ಯಂತ ಹರಡಿದಂತೆಲ್ಲಾ ಹೆಸರಿಸುವ ಸ್ಥಳೀಯ ಮಾದರಿಗಳಲ್ಲಿದ್ದ ವ್ಯತ್ಯಾಸಗಳು ಅಳಿಸಲ್ಪಟ್ಟು ವೈಯಕ್ತಿಕ ಹೆಸರುಗಳಲ್ಲಿ ಹೆಚ್ಚಿನ ಸಮರೂಪತೆಗಳು ಕಾಣಿಸಲಾರಂಭಿಸಿದವು. ಅಧಿಕಾರಿಗಳು ತೆರಿಗೆ ಪಾವತಿ ಮತ್ತು ಮಿಲಿಟರಿ ಸೇವೆಯ ಉದ್ದೇಶಗಳಿಗೆ ಜನರ ನಾಮೋಲ್ಲೇಖ ಮತ್ತು ಯಾದಿಯನ್ನು ಹೆಚ್ಚಾಗಿ ಬಯಸುತ್ತಿದ್ದ ಕಾರಣ, ಈ ನೆಲೆಯಲ್ಲಿ ಪ್ರಭುತ್ವದ ಪ್ರಭಾವವು ಹೆಚ್ಚಾಗಿತ್ತು. ಆದರೆ ಇದು ಕೇವಲ ಒತ್ತಾಯವಾಗಿರಲಿಲ್ಲ; ಸಾಮಾನ್ಯ ಹೆಂಗಸರು ಮತ್ತು ಗಂಡಸರು ವಿದ್ಯಾಭ್ಯಾಸ, ಪ್ರಾದೇಶಿಕ ಪರಿಹಾರ, ಅಥವಾ ವಲಸೆಯ ಅನುಮತಿಗಳಿಗೆ ಸಂಬಂಧಪಟ್ಟಂತೆ ಪ್ರಭುತ್ವದಿಂದ ನಿಗದಿಪಡಿಸಲ್ಪಟ್ಟ ಮಾದರಿಗಳನ್ನೇ ಉಪಯೋಗಿಸಬೇಕಿತ್ತು. ಅದರಲ್ಲಿ ಧಾರ್ಮಿಕ ನಂಬಿಕೆಗಳ ಪಾಲೂ ಇತ್ತು. ಪ್ರಮುಖ ದೇವರೆನಿಸಿದ್ದ ಕೃಷ್ಣನ ವಿವಿಧ ಗುಣವಿಶೇಷಗಳು, ಅದರಲ್ಲೂ ವಿಶೇಷವಾಗಿ ಆತನ ಅವತಾರಗಳು ಅಥವಾ ಪುನರ್ಜನ್ಮದ ಸ್ವರೂಪಗಳ ಹಾಗೂ ಭಗವಾನ್ ರಾಮನ ಹೆಸರುಗಳನ್ನು ಅಧಿಕಾಧಿಕ ಭಾರತೀಯರಿಗೆ ಇಡಲಾಗುತ್ತಿತ್ತು. ಏಶಿಯಾ ಮತ್ತು ಆಫ್ರಿಕಾದ ಇಸ್ಲಾಮಿಕ್ ಸಮುದಾಯಗಳಲ್ಲಿ ಪ್ರವಾದಿಯ ವೈಯಕ್ತಿಕ ಹೆಸರುಗಳನ್ನು ಮತ್ತು ಆತನ ಸಂಗಾತಿ ಆಯೆಶಾಳ ಹೆಸರನ್ನು ಇಸ್ಲಾಮಿ ಪದ್ಧತಿಯ ಹೆಚ್ಚು ಮಾನಕೀಕೃತ (standardized) ಮಾದರಿಯಾಗಿ ಅಳವಡಿಸಿಕೊಳ್ಳಲಾಯಿತು. ಸರಕಾರಗಳು ಮತ್ತು ಶಿಕ್ಷಕರಿಂದ ಅದನ್ನು ಮತ್ತೆ ಮತ್ತೆ ಪ್ರಚಾರ ಮಾಡಲಾಯಿತು. ಮೆಕ್ಕಾ ಮತ್ತು ಮದೀನಾ ಯಾತ್ರೆಗಳ ಫಲವಾಗಿ ಏರ್ಪಟ್ಟ ಜಾಗತಿಕ ಸಂಪರ್ಕಗಳ ಮೂಲಕ ಅವರ ಪ್ರಯತ್ನವನ್ನು ಬಲಪಡಿಸಲಾಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಗುಲಾಮಿ ಪದ್ಧತಿ ಮತ್ತು ಕ್ರೈಸ್ತಮತದ ಮತಾಂತರಗಳ ಪರಿಣಾಮವಾಗಿ ಯುರೋಪಿಯನ್ "ಕ್ರಿಶ್ಚಿಯನ್" ಹೆಸರುಗಳು (ಹೆಚ್ಚಿನಂಶ ಮುಂಚಿನ ಯಹೂದಿ), ಮಿಲಿಯನ್ನಟ್ಟಲೆ ಆಫ್ರಿಕನ್, ಅಮೆರಿಕನ್ ಇಂಡಿಯನ್, ಮತ್ತು ಪೆಸಿಫಿಕ್ ವಾಸಿಗಳಿಗೆ ಹರಡಿದವು. ಆ ಹೊತ್ತಿಗೆ ಸರಕಾರಿ ಮತ್ತು ನ್ಯಾಯಾಲಯಗಳ ಕಾರ್ಯವಿಧಾನಗಳು ಅಧಿಕೃತ ಉದ್ದೇಶಗಳಿಗೋಸ್ಕರ ಪ್ರತಿಯೊಬ್ಬರಿಗೂ ರೂಢಿಗತ ವೈಯುಕ್ತಿಕ ಹೆಸರು ಮತ್ತು ಕುಟುಂಬದ ಹೆಸರು ಇರಬೇಕೆಂಬುದಾಗಿ ಆಗ್ರಹಿಸಿದವು. ಇದು ಕೆಲವು ವಿಚಿತ್ರ ಪರಿಣಾಮಗಳನ್ನೂ ಬೀರಿತು. ಉದಾಹರಣೆಗೆ, ಸ್ಕಾಂಡಿನೇವಿಯನ್ ದೇಶಗಳಲ್ಲಿ ನೂರಾರು, ಸಾವಿರಾರು ಮಂದಿ 'ಯೋಹಾನ್ಸೆನ್' (Johanssen) ಮತ್ತು 'ಕ್ರಿಸ್ಟಿನ್ಸೆನ್' (Christianssen) ಎಂದು ಕರೆಯಲ್ಪಟ್ಟರು. ಹಾಗೆಯೇ ಬರ್ಮಾದಲ್ಲಿ ಹುಟ್ಟಿದ ದಿನದಂದು ಹೆಸರಿಡುವ ಆಚರಣೆಯ ನಿಟ್ಟಿನಲ್ಲಿ ಎಷ್ಟೋ ಮಂದಿ ವಾರದ ದಿನದ ಹೆಸರನ್ನು ಮತ್ತು ಕೆಲವು ಜ್ಯೋತಿಷ್ಯಶಾಸ್ತ್ರದ ಚಿಹ್ನೆಗಳ ಹೆಸರುಗಳನ್ನು ಹೊರಬೇಕಾಯಿತು.

ಜಗತ್ತಿನ ವಿವಿಧ ಭಾಗಗಳ ಜನರ ಆಹಾರಕ್ರಮಗಳಲ್ಲಿ ಸಹ ಸಾಮ್ಯತೆಗಳು ಕಂಡುಬಂದವು. ಆಧುನಿಕ ಯುಗದ ಮೊದಲ ಭಾಗದಲ್ಲಿ ಗೋಧಿ ಮತ್ತು ದನದ ಮಾಂಸ ಬ್ರಿಟಿಷ್ ಮತ್ತು ಉತ್ತರ ಜರ್ಮನ್ನರ ಸಾಮಾನ್ಯ (standard) ಆಹಾರವಾಗಿತ್ತು. ಇದೇ ತಿನಿಸನ್ನು ಬ್ರಿಟಿಷ್ ಅಮೆರಿಕನ್ ವಸಾಹತುಗಳಿಗೆ ಮತ್ತು ನಂತರ ಆಸ್ಟ್ರೇಲಿಯಾ, ನ್ಯೂಸೀಲೆಂಡ್ ಮತ್ತು ದಕ್ಷಿಣ ಆಫ್ರಿಕಾಗಳಿಗೆ ರವಾನಿಸಲಾಯಿತು. ಮಿಶನರಿಗಳೊಂದಿಗೆ ಸಂಪರ್ಕಕ್ಕೆ ಬಂದ ಅಥವಾ ಯುರೋಪಿಯನ್ ಪಟ್ಟಣಗಳಲ್ಲಿ ನೆಲೆಸಲು ಪ್ರಾರಂಭಿಸಿದ ಸ್ಥಳೀಯರು ವಾಯುವ್ಯ ಯುರೋಪಿನ ಆಹಾರಕ್ರಮಗಳಿಗೆ ಒಗ್ಗಿಕೊಂಡರು. ಪ್ರಾಯಶಃ ಮಾರುಕಟ್ಟೆಯಲ್ಲಿ ಲಭ್ಯವಿದ್ದದ್ದು ಅದು ಮಾತ್ರವೇ ಎನ್ನುವುದು ಇದರ ಹಿಂದಿನ ಒಂದು ಕಾರಣವಾಗಿದ್ದು, ಹೊಸ

ಯಜಮಾನರುಗಳ ಮಾನದಂಡಕ್ಕೆ ಅನುಗುಣವಾಗಿರುವಂತೆ ಅವರನ್ನು ಒತ್ತಾಯಪಡಿಸಿದ್ದು ಮತ್ತೊಂದು ಅಂಶವೆನಿಸಿದೆ. ಹತ್ತೊಂಬತ್ತನೆಯ ಶತಮಾನದ ಉತ್ತರ ಭಾಗದಲ್ಲಿ, ಏಶಿಯಾ ಮತ್ತು ಆಫ್ರಿಕಾಗಳಲ್ಲಿ ಸುಧಾರಣಾವಾದಿ ಸರಕಾರಗಳು ಅಧಿಕಾರಕ್ಕೆ ಬಂದದ್ದರಿಂದಲೋ ಅಥವಾ ಪಾಶ್ಚಾತ್ಯೀಕರಣಗೊಂಡ ಮೇಲ್ವರ್ಗದವರು ಪ್ರಾಬಲ್ಯ ಸಾಧಿಸಿದ್ದರಿಂದಲೋ ಆಹಾರಕ್ರಮಗಳಲ್ಲಿ ಸಮರೂಪತೆ ಸಾಧಿಸುವ ಒತ್ತಡಗಳು ಹೆಚ್ಚಾದವು. ಜಪಾನೀಯರು ದನದ ಮಾಂಸವನ್ನು ತಿನ್ನಲಾರಂಭಿಸಿದರು. ಈ ಹಿಂದೆ ಅವರ ಬೌದ್ಧಧರ್ಮೀಯ ನಿಷ್ಠೆಯು ಅದನ್ನು ನಿಷೇಧಿಸಿತ್ತು. ಹಾಗಾಗಿಯೇ 'ಸುಕಿಯಾಕಿ' (ಬಿಲ್ಲೆ ಮಾಡಿದ ಮಾಂಸವನ್ನು ತರಕಾರಿಗಳ ಜೊತೆ ಬೇಯಿಸಿ ಮಸಾಲೆ ಹಾಕಿದ ಜಪಾನೀ ತಿನಿಸು) ಎಂಬ ದನದ ಮಾಂಸ ಅಸ್ತಿತ್ವಕ್ಕೆ ಬಂತು. ಇದು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಬೇಕಾದ ಜನಾಂಗೀಯ ಸತ್ವವನ್ನು ವರ್ಧಿಸುತ್ತದೆಂದು ಭಾವಿಸಲಾಗಿತ್ತು. ಮಹಾತ್ಮ ಗಾಂಧಿ ಸಹ ಒಮ್ಮೆ, ಸಾಮ್ರಾಜ್ಯಶಾಹಿ ಮತ್ತು ಕೆಟ್ಟ ದೇಶೀಯ ಅಭ್ಯಾಸಗಳಿಂದಾಗಿ 'ಪೌರುಷಹೀನ'ರಾಗಿರುವ ಭಾರತೀಯರನ್ನು ಸ್ವಸ್ಥರನ್ನಾಗಿಸಲು ಮಾಂಸದ ಆಹಾರಕ್ರಮವು ಅಗತ್ಯವಿದೆಯೆಂದು ಭಾವಿಸಿದ್ದರು. ನಂತರ ಅವರು ಮತ್ತು ಅವರ ಸಮಕಾಲೀನರು ಈ ವಿಚಾರವನ್ನು ತಿರಸ್ಕರಿಸಿದರು. ಅಂತೆಯೇ, ಹದಿನಾರು ಮತ್ತು ಹದಿನೇಳನೆಯ ಶತಮಾನಗಳಲ್ಲಿ ಭಾರತಕ್ಕೆ ಬಂದಿದ್ದ ಸ್ಪ್ಯಾನಿಶ್ ಮತ್ತು ಪೋರ್ಚುಗೀಸ್ ವಿಜೇತರಿಂದ ಜಗತ್ತಿನಾದ್ಯಂತ ಪ್ರಸಾರಿತಗೊಂಡ ಅಮೆರಿಕದ ಟೊಮೆಟೊ, ಆಲೂಗಡ್ಡೆ, ದೊಣ್ಣೆಮೆಣಸಿನಕಾಯಿಗಳ ಬಳಕೆಯನ್ನು ಭಾರತೀಯರು ತ್ವರಿತವಾಗಿ ಅಳವಡಿಸಿಕೊಂಡರು.

ಈ ಕೊನೆಯ ಉದಾಹರಣೆಯು, ಇದು ಕೇವಲ ಯುರೋಪಿಯನ್ ಆಹಾರಗಳು ಮತ್ತು ಶಾರೀರಕ ಆಚರಣೆಗಳನ್ನು ಒಮ್ಮುಖವಾಗಿ ಅಳವಡಿಸಿಕೊಂಡ ಪ್ರಶ್ನೆಯಲ್ಲ ಎನ್ನುವುದನ್ನು ಮತ್ತೊಮ್ಮೆ ನೆನಪಿಸುತ್ತವೆ. ಸಾಮ್ರಾಜ್ಯಗಳು ಮತ್ತು ವಾಣಿಜ್ಯ ವಿಸ್ತರಣೆಗಳು ಜಗತ್ತಿನ ವಿವಿಧ ಸಮಾಜಗಳ ನಡುವೆ ಬಹುಪಕ್ಷೀಯ ಸಂಪರ್ಕಗಳಿಗೆ ಹಾದಿಯನ್ನು ತೆರೆದು ಹೆಚ್ಚಿನ ಸಮರೂಪತೆಗೆ ಅನುವುಮಾಡಿಕೊಟ್ಟವು. ಉದಾಹರಣೆಗೆ, ಹದಿನೆಂಟನೆಯ ಶತಮಾನದ ಕೆರೀಬಿಯನ್ ಮತ್ತು ಅಮೆರಿಕನ್ ಗುಲಾಮರಿಗೆ ತಿನ್ನಲು ಏಶಿಯನ್ ಬಿಳಿಅನ್ನವನ್ನು, ಉಡಲು ಭಾರತೀಯ ಹತ್ತಿ ಬಟ್ಟೆಗಳನ್ನು ನೀಡಲಾಗುತ್ತಿತ್ತು. ಪಶ್ಚಿಮ ಆಫ್ರಿಕಾದ ಪ್ರಮುಖರು ಅದೇ ಖಂಡದ ಮುದ್ರಿತ ಬಟ್ಟೆಗಳನ್ನು ಬಹುವಾಗಿ ಮೆಚ್ಚಿದ್ದರು. ಏಶಿಯನ್ ವಾಣಿಜ್ಯ ಮತ್ತು ಅಟ್ಲಾಂಟಿಕ್ ಗುಲಾಮಿ ಪ್ಲಾಂಟೇಷನ್ ಪದ್ಧತಿ ಇವೆರಡರ ನಡುವಿನ ಈ ಸಂಪರ್ಕವು ಸಾಧ್ಯವಾಗಿದ್ದು ಯುರೋಪಿಯನ್ ಸಾಮ್ರಾಜ್ಯ ವಿಸ್ತರಣೆಯಿಂದ. ಸಮಯ ಕಳೆದಂತೆ, ಭಾರತೀಯ ನೇಕಾರರು ಮತ್ತು ಆಫ್ರಿಕನ್ ವಾಣಿಜ್ಯೋದ್ಯಮಿಗಳು ವಾಣಿಜ್ಯ ವ್ಯವಹಾರದಲ್ಲಿ ಸಕ್ರಿಯ ಕಾರ್ಯಭಾರಿಗಳಾದರು.

ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ, ಕ್ರೀಡೆ ಮತ್ತು ಬಿಡುವುಗಳ ವಲಯಗಳಲ್ಲಿ ಸಹ ಸಮರೂಪತೆಯನ್ನು ಗುರುತಿಸಬಹುದು. ಹಿಂದೆ ಇದ್ದ ಹಲವಾರು ಅವ್ಯವಸ್ಥಿತ ಮತ್ತು ತಾತ್ಪೂರ್ತಿಕ (ad-hoc) ಸ್ವರೂಪದ ಕ್ರೀಡೆಗಳನ್ನು ಈಗ ಜಾಗತಿಕ ಸಂಸ್ಥೆಗಳಿಂದ ಉತ್ತರೋತ್ತರವಾಗಿ (increasingly) ಅನುಮೋದಿತಗೊಂಡ ಕ್ರಮಬದ್ಧತೆ ಹಾಗೂ ನಿಯಮಗಳ ಚೌಕಟ್ಟಿಗೆ ಒಳಪಡಿಸಲಾಯಿತು. ಜಗತ್ತಿನ ಉಳಿದೆಡೆಗಳಿಗೆ ಬ್ರಿಟಿಷರಿಂದ ನಿರ್ಯಾತಗೊಂಡ ಫುಟ್ಬಾಲ್, ರಗ್ಬಿ, ಮತ್ತು ಕ್ರಿಕೆಟ್‌ನಂತಹ ಸರ್ವೋತ್ಕೃಷ್ಟ ಕ್ರೀಡೆಗಳು ಶರೀರವನ್ನು ಶಿಸ್ತಿಗೊಳಪಡಿಸುವ ಪ್ರಬಲ ಬಯಕೆಯ ಆಯಾಮಗಳನ್ನು ಬಿಂಬಿಸುತ್ತವೆ. ಆ ದೇಹಗಳು ಯುದ್ಧಭೂಮಿಯಲ್ಲಿರಬಹುದು ಅಥವಾ ಕಾರ್ಖಾನೆಯಲ್ಲಿರಬಹುದು. ಏಶಿಯಾದಿಂದ ಪಶ್ಚಿಮಕ್ಕೆ ಹೋದ ಹಾಕಿ ಮತ್ತು ಪೋಲೋನಂತಹ ಕ್ರೀಡೆಗಳು ತಮ್ಮ ಉಲ್ಲಾಸದ ದೊಂಬಿಯಂತಹ ಮೂಲ ರೂಪವನ್ನು ತ್ಯಜಿಸಿ, ನಿಯಮಬದ್ಧ ಸ್ಪರ್ಧೆಗಳಾಗಿ ರೂಪಾಂತರ ಹೊಂದಿದವು. ಈ ನಡುವೆ, ಶಿಸ್ತು ಹಾಗೂ ಕ್ರಮಬದ್ಧವಾಗಿ ಅಡಿಗೆ ಮಾಡಿ ತಿನ್ನುವ ಫ್ರೆಂಚ್ ಕ್ರಮಗಳು, ಫ್ರೆಂಚ್ ಸುಸಂಸ್ಕೃತ ರಾಜತಾಂತ್ರಿಕ ವಿಧಾನಗಳು, ಮತ್ತು ವೈಜ್ಞಾನಿಕ ಮತ್ತು ಮಾನವಿಕ ಜ್ಞಾನಗಳ ಯುಕ್ತ ಕ್ರಮಬದ್ಧತೆಯೆಂಬ ಜರ್ಮನ್ ಪರಿಕಲ್ಪನೆಗಳು ಜಗತ್ತಿನಾದ್ಯಂತ ಅಂತಹ ಪಥಗಳಲ್ಲೇ ಸಾಗಿದವು.

**ಶರೀರದಿಂದಾಚೆಗೆ: ಸಂವಹನಗಳು ಮತ್ತು ಸಂಕೀರ್ಣತೆ**

ಶಾರೀರಕ ಆಚರಣೆಗಳಲ್ಲಿ ಹೆಚ್ಚುತ್ತಿದ್ದ ಸಮರೂಪತೆ ಮತ್ತು ವೈಯುಕ್ತಿಕ ಅನನ್ಯತೆಯ ಬಾಹ್ಯ ಗುರುತುಗಳು ವಿಚಾರಗಳ ಮಟ್ಟದಲ್ಲಿ ಪ್ರತಿಫಲಿಸಿದ್ದನ್ನು ಕಾಣಬಹುದು. ಜಗತ್ತಿನಾದ್ಯಂತ, ವಿಚಾರದ ಪದ್ಧತಿಗಳು ಹಾಗೂ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳಿಂದ ಸೃಜಿತಗೊಂಡ ಸಂವಾದಗಳು ಒಮ್ಮುಖವಾಗತೊಡಗಿದವು (converge). ಹತ್ತೊಂಬತ್ತನೆಯ ಶತಮಾನವನ್ನು ಬಹು ವಿಧವಾದ 'ಕೈಗಾರಿಕೆ ಮತ್ತು ಸಾಮ್ರಾಜ್ಯದ ಯುಗ' (age of industry and empire) ಎಂದು ಕರೆಯಲಾಗುತ್ತದೆ. ಅದು ಜಾಗತಿಕ ಸಂಪರ್ಕದ ಯುಗವೂ ಹೌದು. ಜಗತ್ತಿನುದ್ದಕ್ಕೂ ಪುಸ್ತಕ ಮುದ್ರಣ ಅಗಾಧ ಪ್ರಮಾಣದಲ್ಲಿ ವಿಸ್ತರಿಸಿತ್ತು. ಮಾನಕಗಳ (standard) ಮಾಪನಗಳಲ್ಲಿ ಅಷ್ಟೇನೂ ಅಕ್ಷರಸ್ಥವಲ್ಲವೆಂದು ಗುರುತಿಸಲ್ಪಡುವ ಸಮಾಜಗಳು ಸಂವಹನದ ಮುದ್ರಿತ ಸ್ವರೂಪಗಳಿಗೆ ಸಂವೇದನಾಶೀಲವೆನಿಸಿದವು. ಯುರೋಪು ಸದಾ ಮುಂಚೂಣಿಯಲ್ಲೇನೂ ಇರಲಿಲ್ಲ. ೧೮೦೦ರಲ್ಲಿ ಸೇಂಟ್ ಪೀಟರ್ಸ್‌ಬರ್ಗ್ ಮತ್ತು ವಿಯೆನ್ನಾಗಳಿಗಿಂತಲೂ ಕಲ್ಕತ್ತಾದಲ್ಲಿ ಹೆಚ್ಚಿನ ಪುಸ್ತಕಗಳು ಮುದ್ರಿತವಾದವು. ೧೮೨೮ರಲ್ಲಿ ಜಗತ್ತಿನಾದ್ಯಂತ ಮುದ್ರಣ ಕಂಡ ಸುದ್ದಿಪತ್ರಿಕೆ ಶೀರ್ಷಿಕೆಗಳ ಸಂಖ್ಯೆ ೩,೧೬೮. ಅದರಲ್ಲಿ ಅರ್ಧದಷ್ಟು ಇಂಗ್ಲಿಷ್ ಮಾತನಾಡುವ ದೇಶಗಳಲ್ಲಿ ಮುದ್ರಿತವಾದವು. ಆದರೂ ೧೮೩೧ರಷ್ಟು ಮುಂಚೆಯೇ 'ಲ ಮೊನಿತರ್ ಒಟೊಮನ್' (*Le Moniteur Ottoman*), ಲಂಡನ್ನಿನ *The Times of London*ಗೆ ಜೊತೆ ಸರಿಸಾಟಿಯಾಗಿ ನಿಂತಿತ್ತು. ೧೯೦೦ರ ಕಾಲಕ್ಕೆ ಅಚ್ಚಾಗುತ್ತಿದ್ದ ಸುದ್ದಿಪತ್ರಿಕೆ ಶೀರ್ಷಿಕೆಗಳ ಸಂಖ್ಯೆ ೩೧,೦೨೬ನ್ನು ತಲುಪಿತ್ತು. ಅದರಲ್ಲಿ ಅನೇಕವು ನೂರಾರು ಸಾವಿರಾರು ಸಂಖ್ಯೆಯಲ್ಲಿ ಮುದ್ರಣ ಕಾಣುತ್ತಿದ್ದವು. ೧೯೦೦ರಲ್ಲಿನ ಒಟ್ಟು ಮುದ್ರಿತ ಪತ್ರಿಕೆಗಳಲ್ಲಿ, ೬೦೦ ಭಾರತದಲ್ಲಿ, ೧೯೫ ಆಫ್ರಿಕಾದಲ್ಲಿ ಮತ್ತು ೧೫೦ ಜಪಾನಿನಲ್ಲಿ ಮದ್ರಿತವಾಗಿದ್ದವು. ಜನರು ಸುದ್ದಿಪತ್ರಿಕೆಗಳ ಪ್ರತಿಗಳನ್ನು ಬೇಡುತ್ತಿದ್ದುದನ್ನು, ಎರವಲು ಪಡೆಯುತ್ತಿದ್ದುದನ್ನು ಮತ್ತು ಕದಿಯುತ್ತಿದ್ದುದನ್ನು ನಾವು ನೆನಪಿಸಿಕೊಂಡಲ್ಲಿ, ಜಗತ್ತಿನಾದ್ಯಂತ ಪ್ರಮಾಣಕ ಮಾಹಿತಿಯ (standardized information) ವಿಸ್ತರಣೆಯಲ್ಲಿನ ಗುಣೋತ್ತರ ಮುನ್ನಡೆಗೆ ಮನ್ನಣೆ ನೀಡಬಹುದು. ಕೆಲವು ಸಮಾಜಗಳಲ್ಲಿ ಓದು ಬಲ್ಲವರು ಅನಕ್ಷರಸ್ಥರಿಗೆ ಪುಟಗಳನ್ನು ಓದಿ ಹೇಳುತ್ತಿದ್ದರು. ಉಳಿದಂತೆ, ಲಿಪಿಕಾರರು ಹಸ್ತಪ್ರತಿಯ ರೂಪದಲ್ಲಿ ಅವುಗಳ ಹಲವಾರು ಪ್ರತಿಗಳನ್ನು ತೆಗೆಯುತ್ತಿದ್ದರು.

೧೮೬೩ರಲ್ಲಿ ಯುರೋಪ್-ಏಶಿಯಾ ಕೇಬಲ್ ಮತ್ತು ೧೮೬೬ರಲ್ಲಿ ಎರಡು ಅಟ್ಲಾಂಟಿಕ್ ಕೇಬಲ್ಲುಗಳು ಆರಂಭಗೊಂಡ ನಂತರ ಇಲೆಕ್ಟ್ರಿಕ್ ಟೆಲಿಗ್ರಾಫ್, ಅಂತರಾಷ್ಟ್ರೀಯ ವ್ಯವಸ್ಥೆಯಾಯಿತು. ರೈಲುಮಾರ್ಗ, ಉಗಿಹಡಗು ಮತ್ತು ನಂತರದ ಟೆಲಿಫೋನು, ಸಂಪರ್ಕದ ವೇಗದಲ್ಲಿ ಕ್ರಾಂತಿಯನ್ನುಂಟುಮಾಡಿತು. ಏಶಿಯಾ ಹಾಗೂ ಆಫ್ರಿಕಾಗಳಲ್ಲಿನ ಮುದ್ರಣಪೂರ್ವ ಹಾಗೂ ಟೆಲಿಗ್ರಾಫ್‌ಗೂ ಮೊದಲಿನ ಸಂವಹನದ ವ್ಯವಹಾರ ಚಾತುರ್ಯವನ್ನು ಅಲ್ಲಗಳೆಯುವುದು ತಪ್ಪೆನಿಸುತ್ತದೆ. ಆದಾಗ್ಯೂ, ಸಂದೇಶಗಳ ಹೊಸ ನಿಬಿಡತೆಯು ಸಾಮಾನ್ಯ ವಿಚಾರಗಳ ಅದ್ವಿತೀಯ ಪ್ರಸರಣವನ್ನು ಸಾಧ್ಯವಾಗಿಸಿತು. ಫ್ರೆಂಚ್ ಕ್ರಾಂತಿ ಮತ್ತು ತದನಂತರದ ಯುದ್ಧಗಳ ಫಲವಾದ ಆಧುನಿಕ ರಾಷ್ಟ್ರೀಯತೆಯು ೧೮೫೦ರ ನಂತರದ ಪೀಳಿಗೆಯಲ್ಲಿ ತನಗೆ ತಾನೇ 'ಜಾಗತೀಕರಣ'ಗೊಂಡಿತು. ಐರಿಶ್, ಭಾರತೀಯ, ಈಜಿಪ್ಟ್ ಮತ್ತು ಚೀನೀಯ ರಾಷ್ಟ್ರವಾದಿಗಳು ಟೆಲಿಗ್ರಾಫ್ ತಂತಿಗಳ ಮೂಲಕ ಪರಸ್ಪರ ಪತ್ರವ್ಯವಹಾರ ನಡೆಸುತ್ತಿದ್ದು, ಪ್ಯಾರಿಸ್, ಟೋಕಿಯೊ, ಲಂಡನ್, ಸ್ಯಾನ್ ಫ್ರ್ಯಾನ್ಸಿಸ್ಕೊ ಮತ್ತು ಶಾಂಘೈಗಳಲ್ಲಿ ಒಟ್ಟಾಗಿ ಭೇಟಿ ಮಾಡಿದರು. ವೈಜ್ಞಾನಿಕ ಮತ್ತು ವೈದ್ಯಕೀಯ ವಿಚಾರಗಳು ಅದೇ ವೇಗದಲ್ಲಿ ಜಗತ್ತಿನುದ್ದಗಲಕ್ಕೆ ಹರಡಿದವು.

ಈ ವಾದವನ್ನು ತುಂಬ ದೂರ ಬೆಳೆಸತಕ್ಕದ್ದಲ್ಲ ಎನ್ನುವುದೂ ನಿಜವೇ. ನಿಕಟವಾಗಿ ಪರಿಶೀಲಿಸಿದಾಗ ಔಪಚಾರಿಕ ಸಾಮ್ಯತೆ ಮತ್ತು ಪರಸ್ಪರ ರೂಪಾಂತರಣವು ಈಗಲೂ ಆಗಿಂದಾಗ್ಗೆ ಮೂಲಭೂತ ಶೈಲಿಯಲ್ಲಿನ ಗಮನಾರ್ಹ ವ್ಯತ್ಯಾಸವನ್ನು ಮರೆಮಾಚಿದೆಯೆಂಬುದು ತಿಳಿದುಬರುತ್ತದೆ. ಏಕರೂಪತೆಯತ್ತ ಹೆಚ್ಚುತ್ತಿರುವ ಪ್ರವೃತ್ತಿಗೆ ವಿರೋಧವು ವ್ಯಕ್ತವಾಗಿದೆ. ಹಾಗಾಗಿ, ಸಾದೃಶ್ಯದ ಪ್ರಬಲ ಶಕ್ತಿಯೆನಿಸುವ ಬದಲಿಗೆ ಅದು ತನ್ನ ಫಲಿತಾಂಶದಲ್ಲಿ ಆಂಶಿಕ (partial) ಹಾಗೂ ಅನಿಶ್ಚಿತವೆನಿಸಿದೆ. 'ಬಿಡುಗಡೆ'ಯ (liberty) ಪರಿಕಲ್ಪನೆಗೆ ಬದ್ಧರಾಗಿದ್ದು, ಅಂತಹದೇ ಆದ ತತ್ವಗಳನ್ನು ಸ್ಪಷ್ಟ ಹಾಗೂ ದೃಗ್ಗೋಚರವಾಗಿ ಮಂಡಿಸುತ್ತಿದ್ದ ಪಂಗಡಗಳು ಅಟ್ಲಾಂಟಿಕ್‌ನ ಎರಡೂ ಬದಿಯನ್ನು ಹತೋಟಿಯಲ್ಲಿಟ್ಟುಕೊಂಡಾಗ್ಯೂ, ೧೮೮೦ರಲ್ಲಿ ಸಹ ಅಮೆರಿಕನ್ನರ 'ಬಿಡುಗಡೆ'ಯನ್ನು ಕುರಿತ ಪರಿಕಲ್ಪನೆಗಳು ಯುರೋಪಿಯನ್ನರ ಪರಿಕಲ್ಪನೆಗಳಿಗಿಂತಲೂ

ವಿಭಿನ್ನವಾಗಿದ್ದವು. ಇಸ್ಲಾಮ್ ಮತ್ತು ಹಿಂದೂಧರ್ಮಗಳಲ್ಲಿ ಧಾರ್ಮಿಕ ಏಕರೂಪತೆ ಎನ್ನುವುದು ಹೆಚ್ಚಿನಂಶ ಸಾರ್ವಲೌಕಿಕ ಧಾರ್ಮಿಕ ಆಚರಣೆಯೇ ಹೊರತು, ಕೆಲವೊಮ್ಮೆ ಚರ್ಚುಗಳು ಅರಸುತ್ತಿದ್ದ ಸೈದ್ಧಾಂತಿಕ ಏಕರೂಪತೆಯಲ್ಲ. ಆದರೂ ಇಸ್ಲಾಮ್ ಮತ್ತು ಹಿಂದೂ ಧರ್ಮಗಳು ೧೭೮೦ಕ್ಕಿಂತ ೧೯೧೦ಳರಲ್ಲಿ ಕ್ರೈಸ್ತಧರ್ಮವನ್ನು ಹೋಲುತ್ತಿದ್ದವೆನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಬಹುಶಃ ಆ ಹೊತ್ತಿಗೆ ಈ ಮತಶ್ರದ್ಧೆಗಳ ಪರಸ್ಪರ ವ್ಯತ್ಯಾಸವನ್ನು ಬಹಳ ಸುಲಭವಾಗಿ ಗುರುತಿಸಬಹುದಿತ್ತು. ಇದೇ ಸಮಯದಲ್ಲಿ, ೧೮೯೩ರಲ್ಲಿ ಶಿಕಾಗೊನಲ್ಲಿ ನಡೆದ ಪ್ರಸಿದ್ಧ ಸರ್ವಧರ್ಮ ಸಮ್ಮೇಳನದಲ್ಲಿ (World Parliament of Religions) ಜಗತ್ತಿನ 'ಧರ್ಮ'ಗಳ ಪ್ರತಿನಿಧಿಗಳು ಸಭೆ ಸೇರಿ ಮಾತುಕತೆ ನಡೆಸಿದ್ದರು. ಪರಸ್ಪರ ಏನು ಹೇಳಿಕೊಂಡರೋ ಅದು ಮುಖ್ಯವಲ್ಲ. ಒಂದು ಕಾಲದಲ್ಲಿ ಹಕ್ಕು, ಮಾಂತ್ರಿಕ ಪಂಥದ ಆಚರಣೆ, ವಿಧಿವಿಧಾನ, ಮತ್ತು ಅನಾದಿಕಾಲದ ಸತ್ಯೋಕ್ತಿಗಳ ಮೂಟೆಯೆನಿಸಿದ್ದ ಸಂಪ್ರದಾಯಗಳು ಈಗ ತಮ್ಮದೇ ಆದ ಆಸಕ್ತಿವಲಯಗಳು ಮತ್ತು ಏಕರೂಪದ ಲಕ್ಷಣಗಳನ್ನು ಹೊಂದಿರುವ ವಿಧ್ಯುಕ್ತ "ಧರ್ಮದ" ಸ್ಥಾನವನ್ನು ಪಡೆದವು.

ಈ ಕೃತಿಯ ಎರಡನೆಯ ಪ್ರಮುಖ ವಿಷಯವೆಂದರೆ, ಬಾಹ್ಯ ಸಮರೂಪತೆಯೆಡೆಗಿನ ಈ ಪ್ರವೃತ್ತಿಯಲ್ಲಿ ಅಭಿವೃದ್ಧಿಗೊಂಡ ಜಗತ್ತಿನ ಸಮಾಜಗಳಲ್ಲಿನ ಆಂತರಿಕ ಸಂಕೀರ್ಣತೆಯ ಬೆಳವಣಿಗೆ. ಕ್ರಿಯೆಯ ಈ ಸಂಕೀರ್ಣತೆಯು ಹಳೆಯ ವ್ಯವಸ್ಥೆಯ ಸ್ಥಳೀಯ ಸಾಂಸ್ಕೃತಿಕ ರೂಪಕ್ಕಿಂತ ಸಾಕಷ್ಟು ಭಿನ್ನವಾದ್ದು. ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ, ಬಹುತೇಕ ದೊಡ್ಡ ಸಮಾಜಗಳಲ್ಲಿ ತಮ್ಮದೇ ಆದ ತರಬೇತಿಯ ರೀತಿಗಳು ಮತ್ತು ಒಗ್ಗಟ್ಟಿನ ಧಾರ್ಮಿಕವಿಧಿಗಳನ್ನೊಳಗೊಂಡ ವಿಸ್ತೃತ ವ್ಯಾಪ್ತಿಯ ವಿಶೇಷ ಪಾಂಡಿತ್ಯದ ವೃತ್ತಿಗಳು ಮತ್ತು ಕಸಬುಗಳಿದ್ದವು. ಮದುವೆ ಮತ್ತು ಬಾಂಧವ್ಯಗಳಿಂದ ಸೃಜಿತಗೊಂಡ ಒಗ್ಗಟ್ಟುಗಳಿಗಿಂತಲೂ ಈ ರೀತಿಯ ಒಕ್ಕೂಟಗಳು ಹೆಚ್ಚಿನ ಮಟ್ಟಿಗೆ ಸಮಾಜದ 'ಕೆಲಸ'ವನ್ನು ನಿರ್ವಹಿಸುತ್ತಿದ್ದವು. ಆಡಳಿತವನ್ನು ಮಿಲಿಟರಿ ಶಕ್ತಿಯಿಂದ ಬೇರ್ಪಡಿಸಲಾಗಿತ್ತು. ೧೭೮೦ರಲ್ಲಿ ಜಗತ್ತಿನ ಬಹುತೇಕ ಕಡೆಗಳಲ್ಲಿ, ಚೀನಾದ ಹೊರ ಭಾಗದಲ್ಲಿ ಈ ಪರಿಸ್ಥಿತಿಯಿರಲಿಲ್ಲ. ಯುರೋಪಿನಲ್ಲಿ ಇದು ಮತ್ತಷ್ಟು ಕಡಿಮೆಯಿತ್ತು. ಯೋಧರು ಈಗಲೂ ಬಹುಮಟ್ಟಿನ ಪ್ರಭಾವವನ್ನು ಹೊಂದಿದ್ದ ಮಧ್ಯಪೂರ್ವ ಇಸ್ಲಾಮಿಕ್ ಸಮಾಜಗಳಲ್ಲಿ ಸಹ ಹಳೆಯ ಸಮಾಜಗಳ ಅಧಿಕಾರ ವ್ಯವಸ್ಥೆಯಲ್ಲಿನ ಎರಡು ಮಹತ್ವದ ಶಕ್ತಿಗಳಾದ ಮಿಲಿಟರಿ ಮತ್ತು ಧರ್ಮನಿಷ್ಠರ ನಡುವೆ ನಾಗರಿಕ ಆಡಳಿತಗಾರರ ಪಡೆಗಳನ್ನು ರೂಪಿಸಲಾಗಿತ್ತು. ಹೆಚ್ಚಿನ ವಸಾಹತು ಪ್ರದೇಶಗಳಲ್ಲಿ, ಚೀನಾದ ಒಪ್ಪಂದದ ಬಂದರು ಸ್ಥಳಗಳಲ್ಲಿ(Treaty Ports) ಹಾಗೂ ಜಪಾನಿನಲ್ಲಿ ವಿಶಿಷ್ಟ ವೃತ್ತಿಪರ ಕಾನೂನುತಜ್ಞರು ಕಾಣಿಸಿಕೊಂಡರು. ಇಲ್ಲಿ ಒಂದು ಶತಮಾನದ ಹಿಂದೆ, ಕಾನೂನಿಗೆ ಸಂಬಂಧಪಟ್ಟ ವಾದವಿವಾದಗಳನ್ನು ನಿಭಾಯಿಸುತ್ತಿದ್ದವರೆಂದರೆ; ಧಾರ್ಮಿಕ ಅಧಿಕಾರಗಳಲ್ಲಿದ್ದವರು ಅಥವಾ ಕುಟುಂಬಗಳು ವೈಯಕ್ತಿಕವಾಗಿ ನೇಮಿಸಿಕೊಳ್ಳುತ್ತಿದ್ದ ವಿವಿಧ ವಾಕ್ಚತುರ ಮಧ್ಯಸ್ತರು. ವೈದ್ಯಕೀಯ ಪದ್ಧತಿಗಳನ್ನು ಲಿಖಿತ ರೂಪಕ್ಕಿಳಿಸಿ ನಿಯಮಬದ್ಧಗೊಳಿಸಲಾಯಿತು. ಏಶಿಯಾ, ಉತ್ತರ ಆಫ್ರಿಕಾ ಮತ್ತು ಮಧ್ಯಪೂರ್ವದ ಸಾಂಪ್ರದಾಯಿಕ ವೈದ್ಯಕೀಯ ಆಚರಣೆಗಳಿಗೂ ಸಹ ತಮ್ಮದೇ ಆದ ಅಕಾಡೆಮಿಗಳು ಮತ್ತು ಪ್ರಮಾಣೀಕೃತ ವೃತ್ತಿದಾರರಿದ್ದರು. ಪರಸ್ಪರ ಸಂಬಂಧವಿದ್ದರೂ ಸಹ ಪ್ರತ್ಯೇಕ ಪರಿಣತ ವರ್ಗಗಳಿಂದ ಜಗತ್ತಿನ ಆಳ್ವಿಕೆಯನ್ನು ನಿರ್ವಹಿಸಲಾಗುತ್ತಿತ್ತು.

ಎಲ್ಲ ದೊಡ್ಡ ಪಟ್ಟಣಕೇಂದ್ರಗಳ ಆರ್ಥಿಕ ವಲಯದಲ್ಲಿ ನಿರ್ವಾಹಕ, ಲೆಕ್ಕಿಗ ಹಾಗೂ ವಿಮಾಕರ್ತರ ತಜ್ಞ ಸಮುದಾಯಗಳು ಅಸ್ತಿತ್ವಕ್ಕೆ ಬಂದವು. ಆಡಳಿತವನ್ನು ಮಾಲೀಕತ್ವ ಮತ್ತು ಮಾರಾಟಗಾರಿಕೆಯಿಂದ (marketing) ವ್ಯಾಪಕವಾಗಿ ಪ್ರತ್ಯೇಕಗೊಳಿಸಲಾಯಿತು. ೧೭೮೦ರಲ್ಲಿ ಲಂಡನ್, ಪ್ಯಾರಿಸ್, ಮತ್ತು ಆ್ಯಮ್ಸ್ಟರ್ಡ್ಯಾಮ್‌ಗಳಲ್ಲಿ ಮಾತ್ರ ಇದ್ದ 'ಹಣಕಾಸು-ಚಿಂತಕ'ರ (financial speculators) ವಿಶೇಷ ವರ್ಗಗಳು ಶಾಂಘೈ, ಟೆಹರಾನ್, ಮತ್ತು ನಾಗಸಾಕಿಗಳಲ್ಲಿ ಅಸ್ತಿತ್ವಕ್ಕೆ ಬಂದವು. ಸಾಮಾನ್ಯ ಜನರ ಸಾಮಾನ್ಯ ಕೆಲಸವೂ ಈಗ ಪರಿಣತಿ ಬೇಡುವಂತಿತ್ತು. ಕೈಗಾರೀಕರಣಕ್ಕೆ ಒಳಗಾಗುತ್ತಿದ್ದ ಜಗತ್ತಿನ ಹೆಚ್ಚು ಭಾಗಗಳಲ್ಲಿ; ನಿರ್ದಿಷ್ಟವಾಗಿ, ಪ್ರಮುಖ ನಗರಗಳಲ್ಲಿ ನೆಲೆಸಿರುವವರಿಗೆ ಹಾಗೂ ಅಲ್ಲಿ ಉದ್ಯೋಗವನ್ನು ಕೈಗೊಂಡಿರುವವರಿಗೆ ನಗರದ ದುಡಿಮೆಗೂ ಮತ್ತು ಋತುಮಾನ ಆಧಾರಿತ ಕೃಷಿ ಕೆಲಸಕ್ಕೂ ಇದ್ದ ಸಾವಿರಾರು ವರ್ಷಗಳಷ್ಟು ಹಳೆಯ ಸಂಪರ್ಕವು ತುಂಡರಿಸಿ ಹೋಗಿತ್ತು. ವಾಸ್ತವವಾಗಿ, ಒಂದು ರೀತಿಯ ಅಂತರಾಷ್ಟ್ರೀಯ ವರ್ಗರಚನೆ ಅಸ್ತಿತ್ವಕ್ಕೆ ಬರುತ್ತಿತ್ತು. ವ್ಯಂಗ್ಯವೆಂದರೆ, ಪ್ರತ್ಯೇಕ ಪರಿಣತಿಯು ಸಮರೂಪತೆಯ ಭಾವನೆಯನ್ನು ಹುಟ್ಟುಹಾಕಿತು. ಆಳುವ

ಸಮುದಾಯಗಳು, ವೃತ್ತಿಗಳು, ಮತ್ತು ವಿವಿಧ ಸಮಾಜದ ಶ್ರಮಿಕ ವರ್ಗಗಳೂ ಸಹ ಒಂದೇ ತರಹ ಕಾಣಿಸಲಾರಂಭಿಸಿದವು. ಅವು ಒಂದೇ ರೀತಿಯ ಒತ್ತಡಕ್ಕೀಡಾಗಿದ್ದವು ಹಾಗೂ ಸಮಾನ ರೂಪದ ಆಕಾಂಕ್ಷೆಗಳಿಗೆ ಎಡೆಗೊಡಲಾರಂಭಿಸಿದವು.. ಒಮ್ಮುಖವಾಗುವುದು, ಸಮರೂಪತೆ ಮತ್ತು ಸಾಮ್ಯತೆಗಳು ಇದ್ದ ಮಾತ್ರಕ್ಕೆ ಅವರೆಲ್ಲರು ಒಂದೇ ರೀತಿಯಲ್ಲಿ ಯೋಚಿಸುತ್ತಾರೆ ಮತ್ತು ಒಂದೇ ರೀತಿಯ ಕ್ರಿಯೆಯಲ್ಲಿ ತೊಡಗುತ್ತಾರೆ ಎಂದಲ್ಲ. ಏನೇ ಆದರೂ, ಕನಿಷ್ಠ ಪಕ್ಷ ರಾಷ್ಟ್ರ-ಪ್ರಭುತ್ವ ದ ಪರಿಕಲ್ಪನೆಗಳಿಂದ ಆಳವಾಗಿ ಪ್ರಭಾವಿತರಾಗಿದ್ದರೂ ಸಹ ರಾಷ್ಟ್ರ ಪ್ರಭುತ್ವದ ಗಡಿಗಳನ್ನೂ ಮೀರಿ ಸಾರ್ವಲೌಕಿಕ ಆಸಕ್ತಿಯನ್ನು ಗ್ರಹಿಸಲು ಮತ್ತು ಸ್ಪಷ್ಟವಾಗಿ ಅಭಿವ್ಯಕ್ತಿಸಲು ಸಾಧ್ಯವಿತ್ತು.

ಈ ವಿಸ್ತೃತ ಪ್ರವೃತ್ತಿಗಳ ರೂಪುರೇಷೆಯನ್ನು ತಯಾರಿಸಲು, ಈ ಕೃತಿಯು ಹದಿನೆಂಟನೆಯ ಶತಮಾನದ ಮಧ್ಯಭಾಗದ ಜಗತ್ತನ್ನು ಮಾನದಂಡವಾಗಿ (bench mark) ತೆಗೆದುಕೊಂಡಿದೆ. ಆಗ ಜಗತ್ತು ಸೀಮಿತ ಅಥವಾ ನಿಂತ ನೀರಾಗಿತ್ತು ಎಂದು ಇದರ ಅಭಿಪ್ರಾಯವಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಬದಲಾವಣೆ ಮತ್ತು ಜಾಗತೀಕರಣದ ಪ್ರಬಲ ಶಕ್ತಿಗಳು ಮನುಷ್ಯ ಸಮಾಜಗಳಲ್ಲಿ ಶತಮಾನಗಳಿಂದ ಸಕ್ರಿಯವಾಗಿವೆ. ಆದರೆ ಇದು ಕೇವಲ ಹಳೆಯ ಪ್ರಭುತ್ವಗಳ ಅಥವ ಪ್ರಾಚೀನ ಸಾಮಾಜಿಕ ವ್ಯವಸ್ಥೆಯೆನಿಸಿತ್ತು. ಏಕೆಂದರೆ, ನಂತರದ ಜನರು ತಮ್ಮ ಕಾಲದೊಂದಿಗಿನ ಅದರ ಭಿನ್ನತೆಯನ್ನು ತೀಕ್ಷ್ಣವಾಗಿ ಗಮನಿಸಲಾರಂಭಿಸಿದರು. ಆದಾಗ್ಯೂ, ಮೇಲೆ ತಿಳಿಸಲಾದ ಬದಲಾವಣೆಯ ಶಕ್ತಿಗಳು ನಾಟಕೀಯ ವೇಗವನ್ನು ಪಡೆದುಕೊಂಡಿದ್ದು ಈ ಕಾಲಘಟ್ಟದಿಂದಲೇ ಎಂಬುದನ್ನು ನಂತರದ ಇತಿಹಾಸಕಾರರಂತೆ ಸಮಕಾಲೀನರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಮೊದಲನೆ ಅಧ್ಯಾಯವು ಹದಿನೆಂಟನೆಯ ಶತಮಾನದ ಮಧ್ಯ ಭಾಗದ ರಾಜಕೀಯ ಮತ್ತು ಆರ್ಥಿಕ ಬದುಕನ್ನು ಹರವಾದ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ, ಎರಡನೆ ಅಧ್ಯಾಯವು ಜಗತ್ತಿನಾದ್ಯಂತ ರಾಜಕೀಯ ಮತ್ತು ಭೌತಿಕ ಬದುಕಿನಲ್ಲಿ ಘಟಿಸಿದ ಬೆಳವಣಿಗೆಗಳು ೧೭೮೦ ಮತ್ತು ೧೮೨೦ರ ನಡುವೆ ಸೃಷ್ಟಿಯಾದ ಜಾಗತಿಕ ಬಿಕ್ಕಟ್ಟಿಗೂ ಮುಂಚಿನ ಕಾಲಘಟ್ಟದಲ್ಲಿ ಹೇಗೆ ಈ ಮಾದರಿಗಳನ್ನು ಅಸ್ಥಿರಗೊಳಿಸಿದವು ಎನ್ನುವುದನ್ನು ಬಿಂಬಿಸುತ್ತದೆ.

-------

***ಟಿಪ್ಪಣಿ***

*ಫ್ರೆಂಚ್ ಚಿಂತಕ ಮಿಶೆಲ್ ಫುಕೋ* (Michel Foucault, 1926-1984) *ಪ್ರಕಾರ ಡಿಸ್ಕೋರ್ಸ್* (discourse) *ಎನ್ನುವುದು ಬರೀ ಚಿಂತನಾಕ್ರಮ ಅಥವಾ ಅರ್ಥವನ್ನು ಉತ್ಪಾದಿಸುವ ಕ್ರಮವಲ್ಲ. ಸಾಮಾಜಿಕ ಆಚರಣೆಗಳು ಮತ್ತು ಶಕ್ತಿ ಸಂಬಂಧಗಳ ನಡುವೆ 'ಸ್ವಯಂ'* (Self) *ಎನ್ನುವುದು ಹೇಗೆ* Subjectivity ಯಾಗಿ ('subjected to' knowledge patterns and power patterns ಎನ್ನುವ ಅರ್ಥದಲ್ಲಿ) ಬದಲಾವಣೆಯಾಗುತ್ತದೆ, ಆ ಇಡೀ ಪ್ರಕ್ರಿಯೆಯನ್ನು ಫುಕೋ discourse ಎಂದು ಕರೆಯುತ್ತಾನೆ.